ಮಾಡಿರುತ್ತೇನೆ. ಈಗ ಸಭೆಯನ್ನು ಮುಂದೂಡಲಾಗಿದೆ ಮತ್ತು ಪುನಃ 1-30 ಗಂಟೆ ಎಂದರೆ ಊಟದ ಟೈಮ್ ಬರುತ್ತದೆ. ಆದ್ದರಿಂದ 2-30 ಗಂಟೆಗೆ ಸೇರೋಣ. ಪುನಃ 2-30 ಗಂಟೆಗೆ ನಾವು ಸಮಾವೇಶಗೊಳ್ಳೋಣ.

(ಸದನವು 1 ಗಂಟೆ 10 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 2-30 ಗಂಟೆಗೆ ಸೇರಲು ನಿರ್ಧರಿಸಿತು).

(ಸದನವು ಪುನಃ ಸಂಜೆ 5.30 ನಿಮಿಷಕ್ಕೆ ಸಮಾವೇಶಗೊಂಡಿತು ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್‌ರವರು) ಪೀಠವನ್ನಲಂಕರಿಸಿದ್ದರು).

ನಿಯಮ 195ರ ಪ್ರಕಾರ ಹಕ್ಕುಚ್ಯುತಿ ಪ್ರಸ್ತಾವದ ಮಂಡನೆ ಹಾಗೂ ಅಂಗೀಕಾರ

ಅಧ್ಯಕ್ಷರು : ಈಗ ರೂಲ್ 195ರ ಪ್ರಕಾರ ತಾವು ಮೋಷನ್ ಮೂವ್ ಮಾಡಬೇಕು.

\+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಸಭಾಧ್ಯಕ್ಷರೆ, ರೂಲ್ 194ರ ಪ್ರಕಾರ ತಾವು ಅನುಮತಿ ಕೊಟ್ಟು, ರೂಲ್ 195ರ ಪ್ರಕಾರ ಮೋಷನ್ ಮೂವ್ ಮಾಡಲು ಅವಕಾಶ ಕೊಟ್ಟಿದ್ದಕ್ಕೆ ನನಗೆ ಬಹಳ ಸಂತೋಷವಾಗಿದ್ದು, ನಾನು ಈ ಮೋಷನ್‌ನ್ನು ಎಲ್ಲಾ ಮಹಿಳಾ ಶಾಸಕರ ಪರವಾಗಿ ಮೂವ್ ಮಾಡುತ್ತಿದ್ದೇನೆ. ನಾನು ಮೋಷನ್ ಮೂವ್ ಮಾಡಿ ಅದರ ಬಗ್ಗೆ ಆಮೇಲೆ ಸವಿಸ್ತಾರವಾಗಿ ಹೇಳುವವಳಿದ್ದೇನೆ. I move a substantive motion under Rule 195 of the Rules of Procedure and Conduct of Business in the Karnataka Legislative Assembly:

"The House is of the opinion, that the publisher, the Editor and the Reporter of `Lakesh Pathrike' a Kannada weekly magazine, published from Bangalore, in their issue dated 3rd September 1997 has committed breach of privilege in respect of the following Hon. Lady Members of this august House viz.,

1) Smt. S. Pramila
2) Smt. Leeladevei R. Prasad
3) Smt. Vimalabai Deshmukh
4) Smt. Vijayalakshmi Bandisiddegowda
5) Smt. D.G. Hemavathi
6) Smt. N. Jyothi Reddy.

and further the breach of privilege of the House also has been committed.

Further resolved to call for an explanation in this respect from the above mentioned on receipt of explanation the House may take appropriate action".

ಈ ಮೋಷನ್ ಪರವಾಗಿ ನಾನು ತಮ್ಮ ಮುಂದೆ ಏನು ಹೇಳುತ್ತೇನೆಂದರೆ, ಸ್ಪೆಸಿಫಿಕ್ ಬ್ರೀಚ್ ಆಫ್ ಪ್ರಿವಿಲೆಜ್ ಆಗಿದೆ. ಈ ಪತ್ರಿಕೆಯಲ್ಲಿ ಏನಾಗಿದೆ ಎನ್ನುವುದನ್ನು ಈ ಸದನಕ್ಕೆ ಮತ್ತು ತಮ್ಮ ಗಮನಕ್ಕೂ ಕೂಡ ತರಬೇಕಾದುದು ನನ್ನ ಕರ್ತವ್ಯ. ಮೊಟ್ಟ ಮೊದಲನೆಯದಾಗಿ, ನನ್ನ ಬಗ್ಗೆಯೇ ಹೇಳಬೇಕಾದರೆ, 'ಬಾಯಿ ಬಡುಕಿ ಪ್ರಮೀಳಾ' ಎಂದು ಹೇಳಿದ್ದಾರೆ. ಅಧ್ಯಕ್ಷರೆ, ನಾನು ಬಂದಿರುವುದು ಈ ಶಾಸನಸಭೆಯಲ್ಲಿ ಮಾತನಾಡುವುದಕ್ಕೆ, ನನ್ನ ಕರ್ತವ್ಯವನ್ನು ಪಾಲಿಸುವುದಕ್ಕೋಸ್ಕರ, ಶಾಸಕಿಯಾಗಿ ಏನು ಮಾಡಬೇಕೋ ಅದನ್ನು ಮಾಡುವುದಕ್ಕೋಸ್ಕರ ಬರುತ್ತೇನೆ. ನಾನು ಮಾತನಾಡುವುದನ್ನು 'ಬಾಯಿ ಬಡುಕಿ' ಎಂದು ಹೇಳತಕ್ಕ ಮಾತು ಇದೆಯಲ್ಲಾ, ಅದೇ ಮೊಟ್ಟ ಮೊದಲನೆಯದಾಗಿ ಬ್ರೀಚ್ ಆಫ್ ಪ್ರಿವಿಲೆಜ್ ಆಗುತ್ತದೆ. ನಾನು ಹೇಗೆ ಮಾತನಾಡಬೇಕು, ಯಾವ ರೀತಿ ಮಾತನಾಡಬೇಕು ಅದೆಲ್ಲಾ ಸಭೆಯ ನಿಬಂಧನೆಯಲ್ಲಿಲ್ಲ. ನಾವು ನಮ್ಮ ಕಷ್ಟ-ಸುಖಗಳನ್ನು ಹೇಳುವುದಕ್ಕೋಸ್ಕರ ಇಲ್ಲಿ ಬಂದಿದ್ದೇವೆ. ಶಾಸನಗಳನ್ನು ಮಾಡತಕ್ಕ ಸಂದರ್ಭದಲ್ಲಿ ನಾನು ಮಾತನಾಡುವುದನ್ನೇ ಒಂದು ವ್ಯಾಖ್ಯಾನ ಕೊಟ್ಟು ಹೇಳಿರತಕ್ಕದ್ದೇ ಮೊಟ್ಟ ಮೊದಲನೆಯದಾಗಿ ಪ್ರಿವಿಲೆಜ್ ಆಗುತ್ತದೆ. ಮತ್ತೆ ಸಭಾಧ್ಯಕ್ಷರೆ, ತಾವು ಮತ್ತು ಎಲ್ಲರೂ ಕೂಡ ನನ್ನನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷಳನ್ನಾಗಿ ಮಾಡಿದ್ದಿರಿ. ಒಂದು ಸಮಿತಿ ಎಂದು ಹೇಳಿದರೆ ಅದು ಶಾಸನಸಭೆಯಾಗುತ್ತದೆ. ಆ ಸಮಿತಿಯಲ್ಲಿ ನಾವೇನಾದರೂ ನಿರ್ಣಯಗಳನ್ನು ತೆಗೆದುಕೊಂಡು ಮಾಡಿದರೆ, ಅದು ಈ ಶಾಸನಸಭೆಯಲ್ಲಿ ಮಾಡಿದಂತಹ ಕರ್ತವ್ಯವಾಗುತ್ತದೆ. ಅಂಥ ಸಮಿತಿಯಲ್ಲಿ ನಾನು ಶ್ರೀಮತಿ ನಂದನಾರೆಡ್ಡಿ ಮತ್ತು ಅವರ ವಿಚಾರದಲ್ಲಿ ಒಂದು ರಿಪೋರ್ಟ್ ಏನು ಕೊಟ್ಟೆ, ಅದನ್ನು ಈಗಾಗಲೇ ಸದನದ ಮುಂದಿಟ್ಟಿದ್ದೇನೆ. ಆ ರಿಪೋರ್ಟ್‌ನಲ್ಲಿ ತಮಗೂ ಕೂಡ ಗೊತ್ತಿದೆ, ನಾನು ಅಲ್ಲಿ ಆಗಿರತಕ್ಕ ಅನ್ಯಾಯದ ಬಗ್ಗೆ ಎಲ್ಲಾ ವಿಚಾರಣೆಗಳನ್ನು ಮಾಡಿ ಈಗಾಗಲೇ ಸಿ.ಬಿ.ಐ. ಎನ್‌ಕ್ವೊರಿಯಾಗಬೇಕೆಂದು ಕೇಳಿದ್ದೇನೆ. ಅದಾದನಂತರ, ಪ್ರಿವಿಲೆಜ್ ಕಮಿಟಿಗೆ ಕೂಡ ಈ ವಿಚಾರ ಹೋಗಿದೆ. ಇದು ವಿಚಾರಣಾ ಹಂತದಲ್ಲಿರತಕ್ಕ ಸಂದರ್ಭದಲ್ಲಿ, ನನ್ನನ್ನು ಈ ರೀತಿ :

> "ಪ್ರಮೀಳಾ ಅದೇಕೋ ಮೌನವಹಿಸಿಬಿಟ್ಟು, ನಂದನರೆಡ್ಡಿಯವರ ಸ್ವಯಂಸೇವಾ ಸಂಸ್ಥೆಯೊಂದು ನಡೆಸಿದ ಅವ್ಯವಹಾರಗಳ ಬಗ್ಗೆ ಪ್ರಮೀಳಾ ಸಮಿತಿ, ಸ್ಪೀಕರ್ ರಮೇಶ್‌ಕುಮಾರ್‌ರವರಿಗೆ ಸಲ್ಲಿಸಿ ಕೆಲವು ತಿಂಗಳುಗಳೇ ಕಳೆದಿವೆ. ಆದರೆ, ಆ ವರದಿ ಧೂಳು ತಿನ್ನುತ್ತಾ ಬಿದ್ದಿರುವುದರಲ್ಲಿ ಪ್ರಮೀಳಾ ಕೂಡ ಶಾಮೀಲಾಗಿದ್ದಾರೆ"

ಎನ್ನತಕ್ಕ ಪದವನ್ನುಪಯೋಗಿಸಿದ್ದಾರೆ. ನಾನು ಕೊಲ್ಯೂಡ್ ಆಗಿದ್ದೇನೆ, ಧೂಳು ತಿನ್ನುವುದಕ್ಕೆ ಮಾಡಿದ್ದೇವೆ, ಸಮಿತಿಯ ರಿಪೋರ್ಟ್ ಕೊಟ್ಟು ಅದರ ಬಗ್ಗೆ ಏನೂ ಆಸಕ್ತಿ ತೆಗೆದುಕೊಂಡಿಲ್ಲ ಎಂದು ಏನು ಹೇಳಿದ್ದಾರೆ, ಅದು directly amounts to breach of privilege ನಾನು ಮಾಡತಕ್ಕ ಕರ್ತವ್ಯದ ಬಗ್ಗೆ, ಮಾಡಿರುವುದರ ಬಗ್ಗೆ ಹೇಳುವುದರ ಬಗ್ಗೆ ಇದು ಬ್ರೀಚ್ ಆಫ್ ಪ್ರಿವಿಲೆಜ್

ಆಗುತ್ತದೆ. ನನ್ನನ್ನು ಸಮಿತಿಯ ಅಧ್ಯಕ್ಷಳನ್ನಾಗಿ ಮಾಡಿದ ಕೆಲಸಕ್ಕೂ, ಇಲ್ಲಿ ಶಾಸಕಿಯಾಗಿ ಕೆಲಸ ಮಾಡುತ್ತಿರುವುದಕ್ಕೂ ಕೂಡ ನಾನು ಹಕ್ಕುಬಾಧ್ಯಳಾಗುತ್ತೇನೆನ್ನುವ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ನನ್ನ ಬಗ್ಗೆಯಾದರೆ ಇನ್ನು ತಮಗೆ ಹೇಳುವುದಾದರೆ ಶ್ರೀಮತಿ ಜ್ಯೋತಿರೆಡ್ಡಿ. ಜ್ಯೋತಿರೆಡ್ಡಿಯವರ ಬಗ್ಗೆ ತಮಗೇ ಗೊತ್ತು ಅಧ್ಯಕ್ಷರೇ ಶ್ರೀಮಾನ್ ಅರಗ ಜ್ಞಾನೇಂದ್ರ ಅವರು ಇದೇ ಸಭೆಯಲ್ಲಿ ಈ ಮರಳಿನ ಬಗ್ಗೆ ವಿಚಾರವನ್ನು ಮಂಡಿಸಿದಾಗ ಇದೇ ವಿಷಯವನ್ನು ಸನ್ಮಾನ್ಯ ಶ್ರೀರಾಮ ರೆಡ್ಡಿಯವರು ಮತ್ತು ಎಲ್ಲಾ ಸದಸ್ಯರುಗಳು ಮಾತನಾಡಿದಾಗ ಶ್ರೀಮತಿ ಜ್ಯೋತಿರೆಡ್ಡಿಯವರು ಜೊತೆಗೆ ಧ್ವನಿಗೂಡಿಸಿ ಆಗುತ್ತಾ ಇರತಕ್ಕ ಅನ್ಯಾಯವನ್ನು ಸರಿಪಡಿಸಬೇಕು ಎಂದು ಹೇಳಿರುವುದು ಇದೇ ಸದನದಲ್ಲಿ ರೆಕಾರ್ಡ್ ಆಗಿದೆ. ನನಗೆ ಗೊತ್ತಿರುವಹಾಗೆ ಅಧ್ಯಕ್ಷರೆ, ಶ್ರೀಮತಿ ಜ್ಯೋತಿರೆಡ್ಡಿ ಅವರು ಜಿಲ್ಲಾ ಪಂಚಾಯಿತಿ ಸದಸ್ಯರಾಗಿದ್ದಾಗಲೂ ಕೂಡ ಇದರ ಬಗ್ಗೆ ಹೋರಾಟ ಮಾಡಿ ಒಂದು ಸಂಸ್ಥೆಯನ್ನು ಕಟ್ಟಿ ಅದರಲ್ಲೂ ಕೂಡ ಹೋರಾಟ ಮಾಡಿಕೊಂಡು ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಬೇಕು ಎಂದು ಜೀವನ ಪರ್ಯಂತ ಹೋರಾಟ ಮಾಡಿಕೊಂಡು ಬಂದಿರತಕ್ಕಂಥ ಸಂದರ್ಭದಲ್ಲಿ ಸತ್ಯಕ್ಕೆ ದೂರವಾದ, ಏನು ಕೆಲಸ ಅವರು ಮಾಡಿದ್ದಾರೋ ಅದರ ವಿರುದ್ಧವಾಗಿ ಪತ್ರಿಕೆಯಲ್ಲಿ ಇವತ್ತು ಬರೆಯುತ್ತಾರೆ. "ಅಷ್ಟಿಷ್ಟು ದರ್ಬಾರು ಮಾಡುವುದರೊಂದಿಗೆ ಈಚೆಗೆ ಕೊಂಚ ಮಾತಾಡುವುದನ್ನು ಕಲಿತಿರುವ ಜ್ಯೋತಿರೆಡ್ಡಿ ಬರಬೆಂಗಾಡಿನಂತಿರುವ ತನ್ನ ಕ್ಷೇತ್ರದ ನದಿ ತೀರದ ಪಾತ್ರದಲ್ಲಿ ಆಂಧ್ರದ ಕಾಂಟ್ರಾಕ್ಟರುಗಳು ಮರಳು ದೋಚುತ್ತಿದ್ದರೂ ಕಣ್ಣು ಮುಚ್ಚಿಕೊಂಡು ಕಳ್ಳರಿಗೆ ಬೆಂಬಲಿಸುತ್ತಿರುವ ಜ್ಯೋತಿರೆಡ್ಡಿ ನಿಜಕ್ಕೂ ತಮ್ಮ ಕ್ಷೇತ್ರದ ಜನಕ್ಕೆ ಮಾಡುತ್ತಿರುವ ಘೋರ ದ್ರೋಹ. ಮರಳಿಲ್ಲದ ನದಿಯಲ್ಲಿ ನೀರು ನಿಲ್ಲದೆ ರೈತರು ಕಂಗಾಲಾಗಿ ಬೀದಿಗೆ ಬಿದ್ದಿದ್ದರೂ ಜ್ಯೋತಿರೆಡ್ಡಿ ಪಂಚೇಂದ್ರಿಯಗಳನ್ನು ಕಳೆದುಕೊಂಡಿರುವುದು ದುರಂತ ಎಂದು ಬರೆದಿದ್ದಾರೆ. ಅಧ್ಯಕ್ಷರೇ, ನನಗೆ ಅನ್ನಿಸುತ್ತದೆ ಯಾರಾದರೂ ನಿಜವಾಗಿಯೂ ಕೂಡ ಮನುಷ್ಯರು ಬರೆಯತಕ್ಕಂಥ ಮಾತಲ್ಲ ಇದು. ಸಾರ್ವಜನಿಕರಿಗೆ ಇಷ್ಟು ಕೆಲಸ ಮಾಡಿ, ಹೋರಾಟ ಮಾಡಿ, ಅದರ ವಿರುದ್ಧ ಹೋರಾಟ ಮಾಡಿ ಈ ಸಭೆಯಲ್ಲೂ ಕೂಡ ಮಂಡಿಸಿ ಈಗಾಗಲೇ ಅಧ್ಯಕ್ಷರೂ ಕೂಡ ಅನುಮತಿ ಕೊಟ್ಟಿದ್ದಾರೆ. ಅರ್ಧ ಗಂಟೆ ಇದರ ಬಗ್ಗೆ ಚರ್ಚೆ ಮಾಡೋಣ ಎಂದು ಹೇಳಿದ್ದಾರೆ. ಅದರ ಜೊತೆ ಶ್ರೀಮತಿ ಜ್ಯೋತಿರೆಡ್ಡಿಯವರು ಮಾಡಲೇಬೇಕು ಎಂದು ಕೂಡ ಆಗ್ರಹಪಡಿಸಿದ್ದಾರೆ. ಅದಕ್ಕೆ ವಿರುದ್ಧವಾಗಿ ಈ ರೀತಿ ಪತ್ರಿಕಾ ಪ್ರಕಟಣೆ ಮಾಡಿದಾಗ ಅವರ ಕ್ಷೇತ್ರದಲ್ಲಿ ಅವರ ಜನಕ್ಕೆ ಏನು ಅಭಿಪ್ರಾಯ ಬರುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಇದು ಈ ಪ್ರಿಂಟಿಂಗ್ ಏನಿದೆ ಇದೂ ಕೂಡ ಡೈರೆಕ್ಟಾಗಿ ಬ್ರೀಚ್ ಆಫ್ ಪ್ರಿವಿಲೆಜ್ ಆಗುತ್ತದೆ. ಇನ್ನು ಶ್ರೀಮತಿ ವಿಜಯಲಕ್ಷ್ಮಮ್ಮ ಬಂಡಿಸಿದ್ದೇಗೌಡ ಅವರ ಬಗ್ಗೆ ಒಂದು ಮಾತು ಹೇಳುತ್ತಾರೆ. ಇವರು ಎರಡನೇ ಬಾರಿ ಚುನಾಯಿತರಾಗಿ ಬಂದಿರುವುದು ಏತಕ್ಕೋಸ್ಕರ ಎಂದು ಹೇಳತಕ್ಕ ಸಂದರ್ಭದಲ್ಲಿ ಏನು ಹೇಳುತ್ತಾರೆ ಅಂದರೆ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡರ ಬಗ್ಗೆ ಬರೆಯುತ್ತಾ ಹೇಳುತ್ತಾರೆ " ಇವರೂ ಕೂಡ ತಮ್ಮ ಎರಡನೇ ಬಾರಿಯ ಎಂ.ಎಲ್.ಎ. ಗಿರಿಯಿಂದ ಸುವರ್ಣಸೃಷ್ಟಿಯ ಸುಗಮದಾರಿಯನ್ನು ಕಂಡುಕೊಂಡವರು" ಅಂದರೆ ಎರಡನೇಬಾರಿ ಇವರು ಚುನಾಯಿತರಾಗಿರುವುದು ಬೇರೆ ಉದ್ದೇಶದಿಂದ, ಶಾಸಕರಾಗಿ

ಕೆಲಸ ಮಾಡುವುದಕ್ಕಲ್ಲ ಎನ್ನತಕ್ಕಂಥ ಮಾತನ್ನು ಉಲ್ಲೇಖಿಸಿದ್ದಾರೆ. ಇದೂ ಕೂಡ ಕಾನೂನಿನ ದೃಷ್ಟಿಯಲ್ಲಿ ಮತ್ತು ನಿಯಮದ ದೃಷ್ಟಿಯಲ್ಲಿ ಡೈರೆಕ್ಟ್ ಬ್ರೀಚ್ ಆಫ್ ಪ್ರಿವಿಲೆಜ್ ಆಗುತ್ತದೆ, ಹಕ್ಕುಬಾಧ್ಯತೆಯ ಕೆಲಸ ಆಗುತ್ತದೆ. ಇದಲ್ಲದೆ ಅಧ್ಯಕ್ಷರೆ, ಶ್ರೀಮತಿ ಹೇಮಾವತಿಯವರ ಬಗ್ಗೆ ಬರೆಯುತ್ತಾರೆ. 1994ರ ಡಿಸೆಂಬರ್‌ನಲ್ಲಿ ಶಾಸಕಿಯಾದ ಹೇಮಾವತಿ ಎರಡೂವರೆ ವರ್ಷಗಳಲ್ಲಿ ವರ್ಷಕ್ಕೊಂದರಂತೆ ಕೇವಲ ಎರಡೂವರೆ ಪ್ರಶ್ನೆಗಳನ್ನು ಸದನದಲ್ಲಿ ಕೇಳಿದ್ದಾರೆ. ಅಧ್ಯಕ್ಷರೇ, ನಾನು ಕೇಳುತ್ತೇನೆ, ನಾವು ಎಷ್ಟು ಪ್ರಶ್ನೆ ಕೇಳುತ್ತೇವೆ, ಎಷ್ಟು ಪ್ರಶ್ನೆ ಕೇಳಬಾರದು ಎಂಬ ಬಗ್ಗೆ ಏನಾದರೂ ನಿಯಮ ಇದೆಯೇ ಅಥವಾ ನಾವು ಎಷ್ಟು ಪ್ರಶ್ನೆ ಕೇಳಿದ್ದೇವೆ ಎನ್ನುವುದನ್ನು ಇವರು ಲೆಕ್ಕ ಹಾಕಿಕೊಂಡಿದ್ದಾರಾ? ತಮಗೇ ಗೊತ್ತಿದೆ ಅಧ್ಯಕ್ಷರೆ, ಈ ಶಾಸನಸಭೆ ಶುರು ಆದಮೇಲೆ ಶ್ರೀಮತಿ ಹೇಮಾವತಿಯವರು ಎಷ್ಟು ಪ್ರಶ್ನೆಗಳನ್ನು ಕೇಳಿದ್ದಾರೆ, ಸರ್ಕಾರದಿಂದ ಎಷ್ಟು ಉತ್ತರಗಳನ್ನು ಕೊಟ್ಟಿದ್ದಾರೆ ಎನ್ನುವುದನ್ನು ನಾವೇ ನೋಡುತ್ತಾ ಇದ್ದೇವೆ. ಇದು ಸಹ ಸತ್ಯಕ್ಕೆ ದೂರವಾದಂಥ ಪ್ರಶ್ನೆ. ಶಾಸಕಿಯಾಗಿ ಕೆಲಸ ಮಾಡುತ್ತಾ ಇರತಕ್ಕ ಸಂದರ್ಭದಲ್ಲಿ ಕೇವಲ ಎರಡೂವರೆ ಪ್ರಶ್ನೆಗಳನ್ನು ಕೇಳಿದ್ದಾರೆ ಎಂದು ಹೇಳಿ ಅಲ್ಲಿ ಕ್ಷೇತ್ರದಲ್ಲಿರತಕ್ಕ ಜನತೆಗೆ ಇವರು ಕೆಲಸವನ್ನೇ ಮಾಡುತ್ತಿಲ್ಲವೇನೋ, ನಮ್ಮ ಬಗ್ಗೆ ಕಳಕಳಿ ಇಲ್ಲವೇನೋ ಎಂಬ ಅಭಿಪ್ರಾಯವನ್ನು ಇವರು ಸೃಷ್ಟಿಮಾಡಿದ್ದಾರೆ. ಅದಕ್ಕೋಸ್ಕರ ಈ ಕೃತ್ಯ ಏನಿದೆ ಇದೂ ಕೂಡ ಡೈರೆಕ್ಟಾಗಿ ಪ್ರಿವಿಲೆಜ್ ಆಗುತ್ತದೆ.

ಅಧ್ಯಕ್ಷರು : ಡೈರೆಕ್ಟಾಗಿ ಬ್ರೀಚ್ ಆಫ್ ಪ್ರಿವಿಲೆಜ್ ಆಗುತ್ತದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಬ್ರೀಚ್ ಆಫ್ ಪ್ರಿವಿಲೆಜ್ ಆಗುತ್ತದೆ. ಮತ್ತು ಇನ್ನೊಂದು ವಿಚಾರ ಹೇಳಿದ್ದಾರೆ ಅಧ್ಯಕ್ಷರೇ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಅಧ್ಯಕ್ಷರೇ, ಶಾಸಕರಾಗಿ ಬಂದಮೇಲೆ ಈ ಸದನದಲ್ಲಿ ಒಂದು ವರ್ಷಕ್ಕೋ ಅಥವಾ ಶಾಸನಸಭೆ ನಡೆಯುವಾಗ ಇಂಥಿಂಥ ಪ್ರಶ್ನೆಗಳನ್ನು ಕೇಳಬೇಕು ಎಂದು ಎಲ್ಲಾದರೂ ಇದೆಯಾ? ಇಂಥ ಶಾಸಕರು ಇಷ್ಟು ಪ್ರಶ್ನೆಗಳನ್ನು ಕೇಳಬೇಕು ಎಂದು ಏನಾದರೂ ಇದೆಯಾ?

MR. SPEAKER : It is left to the will of the Members of the House, ಕೊಶ್ಚನ್ಸ್ ಕಳುಹಿಸುವುದು ಕಳುಹಿಸದೇ ಇರುವುದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅದು ನಮ್ಮ ನಮ್ಮ ಹಕ್ಕು ಅಧ್ಯಕ್ಷರೇ. ಅದೂ ಅಲ್ಲದೆ ತಮಗೂ ಕೂಡ ಗೊತ್ತಿದೆ. ತಾವು ಮಾಡಿರತಕ್ಕ ರೂಲ್ಸ್ ಏನಿದೆ ಅದರ ಪ್ರಕಾರ ಎಷ್ಟೋ ಪ್ರಶ್ನೆಗಳನ್ನು ಕಳುಹಿಸಿದರೂ ಕೆಲವು ಪ್ರಶ್ನೆಗಳಿಗೆ ಅಚ್ಚು ಹಾಕಿ ಉತ್ತರ ಕೊಟ್ಟಿದ್ದಾರೆ. ಕೆಲವಕ್ಕೆ ಉತ್ತರ ಕಳುಹಿಸಿಕೊಡುತ್ತಾರೆ. ಅದನ್ನು ಲಾಟ್ ಹಾಕಿದಾಗ ನಮ್ಮ ಅದೃಷ್ಟ ಇದ್ದರೆ ನಮ್ಮ ಪ್ರಶ್ನೆಗಳು ಬರುತ್ತವೆ, ಇಲ್ಲದಿದ್ದರೆ ಬರುವುದೇ ಇಲ್ಲ. ಎಲ್ಲಾ ಮೆಂಬರ್ಸ್ ಕೂಡ ಪ್ರಶ್ನೆಗಳನ್ನು ಕಳುಹಿಸಿದರೂ ಬರುವುದಿಲ್ಲ. ಆದರೆ ಕೇವಲ ಎರಡೂವರೆ ಪ್ರಶ್ನೆ ಕೇಳಿದ್ದಾರೆ ಎಂದು ಹೇಳಿರುವುದು ಡೈರೆಕ್ಟ್ ಆಗಿ ಬ್ರೀಚ್ ಆಫ್ ಪ್ರಿವಿಲೆಜ್ ಆಗುತ್ತದೆ. ಇನ್ನೊಂದು ಮುಖ್ಯವಾಗಿ ಅಧ್ಯಕ್ಷರೆ, ಶ್ರೀಮತಿ ಹೇಮಾವತಿ ಅವರ ಬಗ್ಗೆ ಒಂದು ಮಾತು ಹೇಳುತ್ತಾರೆ.

ಪತ್ರಕರ್ತರಿಗೆ ಪೂಸಿ ಹೊಡೆಯುವುದರಲ್ಲಿ, ಮನೆಗೆ ಬರುವ ಕೆಲವು ಪತ್ರಕರ್ತರಿಗೆ ಅಗತ್ಯ ಅತಿಥ್ಯ ಒದಗಿಸುವುದರಲ್ಲೂ ಹೇಮಾವತಿ ಹೆಸರು ಮಾಡಿದ್ದಾರೆ ಎಂದರೆ ನಾನು ತಮ್ಮನ್ನು ಕೇಳುತ್ತೇನೆ ಏನು ಇವರು ಹೇಳತಕ್ಕದ್ದು? ಅತಿಥ್ಯ ಒದಗಿಸುವುದರಲ್ಲೂ ಅಂದರೆ ಇದರ ಹಿಂದಿನ ಅರ್ಥ ಏನು? ಜನರು ಏನೆಂದುಕೊಳ್ಳಬಹುದು? ಸಾರ್ವಜನಿಕರು ಇವರ ಮನೆಗೆ ಹೋಗುವುದಕ್ಕಾಗುತ್ತದಾ? ಸಾರ್ವಜನಿಕರು ಇವರ ಮನೆಗೆ ಹೋಗುವುದಕ್ಕಾಗುತ್ತದಾ? ನಾವೇನಾದರೂ ಕೆಲಸ ಮಾಡುವುದಕ್ಕೆ ಕೇಳುವುದಕ್ಕೋಸ್ಕರ ಶಾಸಕಿಯರ ಮನೆಗೆ ಹೋಗುವುದಕ್ಕಾಗುತ್ತದಾ? ಅವರ ಮನೆಯಲ್ಲಿರುವವರು ಏನು ಅಂದುಕೊಳ್ಳಬಹುದು? ಅತ್ತೆ, ಮಾವ, ಗಂಡ ಏನು ಅಂದುಕೊಳ್ಳಬಹುದು. ಇದರ ಉದ್ದೇಶ ಏನಾಗಬಹುದು? ಸಾರ್ವಜನಿಕರಿಗೆ ಇದರಿಂದ ಏನು ಕಾಣಬಹುದು ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕು. ಇದೂ ಕೂಡ ಡೈರೆಕ್ಟಾಗಿ ಬ್ರೀಚ್ ಆಫ್ ಪ್ರಿವಿಲೆಜ್ ಆಗುತ್ತದೆ. ಇನ್ನು ಸನ್ಮಾನ್ಯ ಮಂತ್ರಿವರ್ಯರಾದ ಶ್ರೀಮತಿ ವಿಮಲಾಬಾಯಿ ದೇಶಮುಖ್‌ರವರ ಬಗ್ಗೆ ಬಹಳ ದುಃಖದಿಂದ ನಾನು ಹೇಳುತ್ತೇನೆ. ವಿಮಲಾಬಾಯಿ ದೇಶಮುಖ್ ಅವರು ಕೇವಲ ಮಂತ್ರಿಯಾಗಿ ಬಂದಿಲ್ಲ. ಶಾಸಕರಾಗಿ, ನಂತರ ಮಂತ್ರಿಯಾಗಿ ಬಂದಿರತಕ್ಕವರು. ಶಾಸಕರಾಗಿದ್ದರೆ ಮಾತ್ರ ಕೆಲಸ ಮಾಡುವುದಕ್ಕೆ ಸಾಧ್ಯ. ಶಾಸಕರಾಗಿರುವುದರಿಂದ ಅವರನ್ನು ಗುರುತಿಸಿ ಮಂತ್ರಿಗಳನ್ನಾಗಿ ಮಾಡಿದ್ದಾರೆ. ಆ ಕೆಲಸ ಮಾಡತಕ್ಕ ಸಂದರ್ಭದಲ್ಲಿ ಅವರ ಬಗ್ಗೆ ಸನ್ಮಾನ್ಯ ಅಧ್ಯಕ್ಷರೆ, ಇದನ್ನು ಹೇಳಬೇಕೋ ಹೇಳಬಾರದೋ ಎಂಬುದನ್ನು ತಾವು ಯೋಚನೆ ಮಾಡಬೇಕು. ಏನು ಬರೆಯುತ್ತಾರೆ? "ಅಜಯ್‌ಕುಮಾರ್ ಸರ್‌ನಾಯಕ್ ಎಂಬ ಯುವಜನ ಮತ್ತು ಕ್ರೀಡಾ ಸಚಿವರ ಯಾವುದೇ ಇನ್‌ಫ್ಲೂಯೆನ್ಸ್ ಈಕೆಯ ಮೇಲೆ ನಡೆಯುತ್ತದೆ ಎಂಬ ಸುದ್ದಿ ಇದೆ" ಅಧ್ಯಕ್ಷರೇ ನಾನು ಕೇಳುತ್ತೇನೆ. ಅವರು ಮಂತ್ರಿವರ್ಯರಾಗಿ ಹೇಳಿದ್ದಕ್ಕೆಲ್ಲಾ ಸೈನ್ ಹಾಕುತ್ತಾರೆ ಎಂಬ ಅರ್ಥವೇ ಅಥವಾ ಇವರು ಹೋಗಿ ಅವರ ಮನೆಯಲ್ಲಿ ಸೈನ್ ಹಾಕಿಸಿಕೊಂಡು ಬರುತ್ತಾರೆ ಎಂಬ ಅರ್ಥವೇ ಅಥವಾ ವಿಮಲಾ ಬಾಯಿ ಅವರಿಗೆ ಕೆಲಸ ಮಾಡುವುದಕ್ಕೆ ಬರುವುದಿಲ್ಲ, ಎಲ್ಲಾ ಅಜಯ್‌ಕುಮಾರ್ ಅವರೇ ಮಾಡುತ್ತಾರೆ ಎಂಬ ಅರ್ಥವೇ? ಅಥವಾ ಇದರ ಹಿಂದೆ ಯಾವ ದುರುದ್ದೇಶವನ್ನು ಇಟ್ಟುಕೊಂಡು ಈ ಅಕ್ಷರವನ್ನು ಬರೆದಿದ್ದಾರೆ ಎಂಬುದನ್ನೂ ಕೂಡ ತಮ್ಮ ಗಮನಕ್ಕೆ ತರುತ್ತಿದ್ದೇನೆ ಇದೂ ಕೂಡ ಡೈರೆಕ್ಟಾಗಿ ಬ್ರೀಚ್ ಆಫ್ ಪ್ರಿವಿಲೆಜ್ ಆಗುತ್ತದೆಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅಧ್ಯಕ್ಷರೆ, ಅವರು ಮತ್ತೊಂದು ಮಾತನ್ನು ಹೇಳಿದ್ದಾರೆ. ಹೆಣ್ಣುಮಕ್ಕಳಿಗೆ ಸಾಲದ ವ್ಯವಸ್ಥೆ ಇದ್ದರೂ ಸಾಲ ಸಿಗುತ್ತಿಲ್ಲ ಎಂಬ ಮಾತನ್ನು ಹೇಳಿದ್ದಾರೆ. ಅಧ್ಯಕ್ಷರೆ, ಶಾಸಕರಾಗಿ ಅವರು ಬಂದವರಿಗೆಲ್ಲ ಕೊಡಲೇಬೇಕು. ಶಾಸಕರಾಗಿ ಕೂಡ ಕೆಲಸ ಮಾಡಬೇಕಾಗುತ್ತದೆ. ಅವರು ಮಾಡುತ್ತಾ ಇರತಕ್ಕ ಕೆಲಸ ಇದ್ದರೂ ಕೂಡ ಮಾಡುತ್ತಿಲ್ಲ ಎಂದು ಹೇಳಿರುವುದು ದುಃಖ ತರತಕ್ಕ ವಿಷಯ. ಇದೂ ಕೂಡ, ಅವರ ಮೇಲೆ ಬರೆದಿರತಕ್ಕದ್ದು ಕೂಡ ಡೈರೆಕ್ಟರ್ ಬ್ರೀಚ್ ಆಫ್ ಪ್ರಿವಿಲೇಜ್ ಎಂದರೆ ನಾವೇ ಎಂ.ಎಲ್.ಎ.ಗಳು ಸೇರಿ ಚುನಾಯಿಸಿ ಮೇಲ್ಮನೆಗೆ ಕಳುಹಿಸಿದಂಥ ಶ್ರೀಮತಿ ರಾಣಿ ಸತೀಶ್ ಅವರು ಉಪಸಭಾಪತಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಮೇಲೆ ಕೂಡ ಇಲ್ಲದಸಲ್ಲದ ಮಾತುಗಳನ್ನು ಹೇಳಿದ್ದಾರೆ. ಅದು ಇಲ್ಲಿ ಬ್ರೀಚ್ ಆಫ್ ಪ್ರಿವಿಲೇಜ್ ಆಗದಿದ್ದರೂ ಸಹ ಮೇಲ್ಮನೆಯಲ್ಲಿ ಈ ವಿಚಾರ ತೆಗೆದುಕೊಂಡಿದ್ದಾರೆ ಎಂದು ಗೊತ್ತಾಗಿದೆ. ಅವರ ಹೆಸರನ್ನು ಕೂಡ ಉಪಯೋಗಿಸಿಕೊಂಡು ಈ ರೀತಿ ಹೇಳಿರತಕ್ಕದ್ದು ಬಹಳ

ಅನ್ಯಾಯವಾದಂಥ ಕೆಲಸ. ಇದೂ ಕೂಡ ಬ್ರೀಚ್ ಆಫ್ ಪ್ರಿವಿಲೇಜ್ ಆಗುತ್ತದೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿದೆ. ಇದನ್ನು ಕೂಡ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆಮೇಲೆ ಫೈವ್ ಸ್ಟಾರ್ ಹೋಟೆಲ್‌ಗೆ ಹೋಗುತ್ತಾರೆಂದು ಸತ್ಯಕ್ಕೆ ದೂರವಾದ ಮಾತು ಹೇಳಿದ್ದಾರೆ. ಅದನ್ನು ಹೇಳತಕ್ಕದ್ದು ಇಲ್ಲಿ ಡೈರೆಕ್ಟ್ ಬ್ರೀಜ್ ಆಫ್ ಪ್ರಿವಿಲೇಜ್ ಆಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದನ್ನು ಕೂಡ ವಿಚಾರಣೆ ಮಾಡಬೇಕಾಗುತ್ತದೆ. ಪಾರ್ಲಿಮೆಂಟ್‌ನಲ್ಲಿ ಈಗಾಗಲೇ ಒಂದು ಬಿಲ್ ಇದೆ. ಮಹಿಳೆಯರಿಗೆ 33 ಪರ್ಸೆಂಟ್ ಮೀಸಲಾತಿ ಇಡಬೇಕೆಂದು ಬಿಲ್ ಈಗಾಗಲೇ ಇಂಟ್ರೊಡ್ಯೂಸ್ ಆಗಿದೆ. ತಮಗೂ ಕೂಡ ಗೊತ್ತು ಅಧ್ಯಕ್ಷರೇ, ಈ ಬಿಲ್ ಅಲ್ಲಿ ಪಾಸ್ ಆದನಂತರ ಇದು ಕಾನ್‌ಸ್ಟಿಟ್ಯೂಟಲ್ ಅಮೆಂಡ್‌ಮೆಂಟ್ ಆಗಿರುವುದರಿಂದ ಈ ಸದನದ ಮುಂದೆಯೂ ಬರಬೇಕು. ನಾವೂ ಕೂಡ ಅದನ್ನು ರ್ಯಾಟಿಫೈ ಮಾಡಬೇಕು. ಪಾರ್ಲಿಮೆಂಟ್ ಮುಂದೆ ಬಿಲ್ ಇರತಕ್ಕ ಈ ಸಂದರ್ಭದಲ್ಲಿ ಕೇವಲ 33 ಪರ್ಸೆಂಟ್ ರಾಜಕೀಯ ಮಾಡುತ್ತಿದ್ದಾರೆ ಎಂದು ಒಂದು ಹೆಡ್‌ಲೈನ್ ಹಾಕಿ ಸ್ಥಗಿತಗೊಂಡ ಮಹಿಳಾ ರಾಜಕೀಯ ಎಂದು ಹೇಳುತ್ತಾರಲ್ಲಾ, ಇದರಲ್ಲಿ ದುರುದ್ದೇಶ ಇದೆ. ಶಾಸನ ತಂದಿರುವಾಗ ಈ ಶಾಸನಸಭೆಯಲ್ಲಿ ಒಂದು ಬಿಲ್ ಆಗುವಂಥ ಸಂದರ್ಭದಲ್ಲಿ ಇಡೀ ಸದನದ ಬಗ್ಗೆ ಅಗೌರವ ತೋರಿಸತಕ್ಕ ವಿಚಾರವಾಗಿದೆ. ಅಧ್ಯಕ್ಷರೆ, ನಾನು ಹೇಳುವುದಾದರೆ ಈ ಸದನದಲ್ಲಿ ಮಹಿಳಾ ಶಾಸಕಿಯರು ಅಷ್ಟೇ ಅಲ್ಲ ಸನ್ಮಾನ್ಯ ಸರ್‌ನಾಯಕ್ ಅವರು ಮಂತ್ರಿವರ್ಯರು ಅವರೂ ಕೂಡ ಕ್ಲೀನಾಗಿ ಕೆಲಸ ಮಾಡುತ್ತಿದ್ದಾರೆ. ಅವರನ್ನೂ ಕೂಡ ಕೆಟ್ಟ ದೃಷ್ಟಿಯಲ್ಲಿ ಮಾತನಾಡಿ ಬರೆದಿದ್ದಾರೆ. ಕ್ಯಾಬಿನೆಟ್ ಎಂದರೆ ಈ ಕ್ಷೇತ್ರದ ಈ ನಾಡಿನ ಎಲ್ಲಾ ಆಗುಹೋಗುಗಳನ್ನು ನೋಡಿಕೊಳ್ಳತಕ್ಕ ನಾವೇ ಮಾಡಿರತಕ್ಕ ಒಂದು ವ್ಯವಸ್ಥೆ. ಅಂಥ ಕ್ಯಾಬಿನೆಟ್ ಮಂತ್ರಿಗಳ ಮೇಲೂ ಕೂಡ ಆಪಾದನೆ ಮಾಡಿರತಕ್ಕದ್ದು ಇಡೀ ಸದನಕ್ಕೆ ಅಗೌರವ ತೋರಿಸಿದಂತೆ, ಸದನದ ನಮ್ಮ ಗೌರವಕ್ಕೆ ಚ್ಯುತಿ ತಂದಂತೆ ಎಂದು ತಮ್ಮ ಮುಖಾಂತರ ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ನಾನು ಈ ಸಂದರ್ಭದಲ್ಲಿ 195ನೇ ನಿಯಮದ ಪ್ರಕಾರ ಏನು ಮೋಷನ್ ಮೂವ್ ಮಾಡಿದ್ದೇನೆ ಇದನ್ನು ಈ ಸಭೆಯಲ್ಲಿ ಎಲ್ಲರೂ ಕೂಡ ಒಗ್ಗಟ್ಟಿನಿಂದ ಒಕ್ಕೊರಲಿನಿಂದ ಸ್ವಾಗತಿಸಿ ಇದನ್ನು ಮುಂದೆ ತರಬೇಕು ಮತ್ತು ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಒಂದೇ ಒಂದು ವಾರದಲ್ಲಿ ತಾವು ದಯಮಾಡಿ ಜಾಸ್ತಿ ದಿವಸ ಕೊಡದೆ ನೋಟೀಸ್ ಕೊಡಬೇಕು, ನ್ಯಾಚುರಲ್ ಜಸ್ಟೀಸ್ ಎನ್ನತಕ್ಕಂಥ ಒಂದು ಏಕಮಾತ್ರ ಕಾರಣದಿಂದ ನಾನು ಕೇಳುತ್ತಿದ್ದೇನೆ. ಅಧ್ಯಕ್ಷರೆ, ನಾವು ಕೋರ್ಟಿನಲ್ಲಿ ನೋಡುವುದಾದರೆ ಕಂಟೆಪ್ಟ್ ಆಫ್ ಕೋರ್ಟ್ ಆದಾಗ ತಕ್ಷಣ ಅಲ್ಲೇ ಕೊಡತಕ್ಕಂಥ ಪನಿಶ್‌ಮೆಂಟ್ ಇದೆ. ಆದರೆ ಆ ತರಹ ಬ್ರೀಚ್ ಆಫ್ ಪ್ರಿವಿಲೇಜ್ ಬಗ್ಗೆ ನಮ್ಮಲ್ಲಿ ಇನ್ನೂ ಕೂಡ ಸರಿಯಾದ ಕಾನೂನು ಶಾಸನಸಭೆಯ ಬಗ್ಗೆ ಕೆಲವು ಕಾರಣಗಳಿಂದ ಆಗಿಲ್ಲ. ಅದರ ಬಗ್ಗೆ ಕೂಡ ಸಭೆ ಗಮನಹರಿಸಬೇಕಾಗುತ್ತದೆ. ಮುಂದೆ ಮಾಡಬೇಕಾಗುತ್ತದೆ. ಆದರೆ ಈ ಸಂದರ್ಭದಲ್ಲಿ ಅವರು ಮೂವರನ್ನೂ ಪಬ್ಲಿಷರ್, ಎಡಿಟರ್, ಮತ್ತು ರಿಪೋರ್ಟರ್ - ಈ ಮೂವರನ್ನೂ ಕೂಡ ಈ ಸಭೆಯ ಮುಂದೆ ಕರೆಸಿ ಅವರ ಹೇಳಿಕೆಯನ್ನು ತೆಗೆದುಕೊಂಡು ಸೂಕ್ತವಾದ ಶಿಕ್ಷೆಯನ್ನು ಸಭೆಯ ಮುಂದೆ ಕರೆಸಿ ಅವರ ಹೇಳಿಕೆಯನ್ನು ತೆಗೆದುಕೊಂಡು ಸೂಕ್ತವಾದ ಶಿಕ್ಷೆಯನ್ನು ಕೊಟ್ಟು ಇನ್ನು ಮುಂದೆ ಈ ತರಹ ಮರುಕಳಿಸದಂತೆ, ಯಾವ ಹೆಣ್ಣುಮಗಳಿಗೂ ಕೂಡ ಅನ್ಯಾಯವಾಗದಂತೆ, ಇಡೀ ಕರ್ನಾಟಕದಲ್ಲಿ

ಯಾರಿಗೂ ಕೂಡ ಆಗದಂತೆ, ಶಾಸಕರು ಆಗುವುದಕ್ಕೆ ಮುಂದೆ ಬರುವುದಕ್ಕೆ ಅವಕಾಶ ಮಾಡಿಕೊಡಬೇಕು. ನಮ್ಮ ಹಕ್ಕುಭಾದ್ಯತೆಗೆ ಚ್ಯುತಿ ಬಂದಿರುವುದಕ್ಕೆ ತಾವೆಲ್ಲರೂ ಕೂಡ ಸಹಕಾರ ಕೊಟ್ಟು, ಈಗ ಆಗಿರುವುದನ್ನು ತಪ್ಪಿಸುವುದಕ್ಕೆ ತಾವು ಸಹಕಾರ ನೀಡಬೇಕು, ಇದನ್ನು ತಪ್ಪಿಸುವುದಕ್ಕೆ ಬ್ರೀಚ್ ಆಪ್ ಪ್ರಿವಿಲೇಜ್ ಮರುಕಳಿಸದಂತೆ ಆಗುವುದಕ್ಕೆ ಮಾಡಬೇಕು ಎಂದು ಹೇಳಿ ನನಗೆ ಒಂದು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಭಿನಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಅಲ್ಲ, ತಾವು ಮಾತನಾಡುವಾಗ ಒಂದು ಮಾತನ್ನು ಹೇಳಿದಿರಿ. ಅವರನ್ನು ಇಲ್ಲಿ ಕರೆಸಿ ಎಂದು ಹೇಳಿದಿರಿ. ಆದರೆ ನಿಮ್ಮ ಮೋಷನ್‌ನಲ್ಲಿ you have suggested, " it further resolves to call for an explanation..." ಎಂದು ಹೇಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಧ್ಯಕ್ಷರೇ, ಅದರ ಅಗತ್ಯ ಇಲ್ಲ. ನನ್ನ ಪ್ರಕಾರ ಅಗತ್ಯ ಇಲ್ಲ.

MR. SPEAKER : You intend what you have mentioned in your motion?

SMT. PRAMILA NESARGI : ಅದು by mistake.

MR. SPEAKER : Alright. That is why I should be clear.

ಶ್ರೀಮತಿ ಪ್ರಮೀಳಾ ನೇಸರ್ಗಿ : ಬೈ ಮಿಸ್ಟೇಕ್ ಅದು.

ಅಧ್ಯಕ್ಷರು : ಈಗ ಸನ್ಮಾನ್ಯ ವೀರಪ್ಪ ಮೊಯಲಿಯವರು....

+ ಶ್ರೀ ಎಂ. ವೀರಪ್ಪ ಮೊಯಲಿ (ಕಾರ್ಕಳ) : ಮಾನ್ಯ ಅಧ್ಯಕ್ಷರೇ, ಬಹುಶಃ ಅನೇಕ ವರ್ಷಗಳ ನಂತರ ಒಂದು ಪ್ರಿವಿಲೇಜ್‌ಗೆ ಸಂಬಂಧಪಟ್ಟಂಥ ಒಂದು ಪ್ರಸ್ತಾವನೆ 191, 192, 193, 194ನೇ ಗಡಿಯನ್ನು ದಾಟಿ 195ನೇ ಹಂತಕ್ಕೆ ಬಂದಿರುವುದನ್ನು ಇವತ್ತು ನಾವು ಕಾಣುತ್ತಿದ್ದೇವೆ. ಅನೇಕ ಬಾರಿ ಈ ಸದನದಲ್ಲಿ ಒಂದು ಪ್ರಿವಿಲೇಜ್‌ಗೆ ಸಂಬಂಧಪಟ್ಟಂಥ ಸೂಚನೆ ಬಂದಾಗ ಸಾಮಾನ್ಯವಾಗಿ ಅದು ಪ್ರಸ್ತಾವನೆ ಮಾಡಿದಕೂಡಲೇ, ಸೂಚನೆ ಮಾಡಿದವರು ಕೆಲವು ಪ್ರಾಸ್ತಾವಿಕವಾದಂಥ ಮಾತುಗಳನ್ನು ಆಡಿದ ಮೇಲೆ ಪ್ರಿವಿಲೇಜ್ ಕಮಿಟಿಗೆ ಕಳುಹಿಸತಕ್ಕಂಥ ಒಂದು ಪರಿಪಾಠವನ್ನು ನಾವು ಇಲ್ಲಿ ಇಟ್ಟುಕೊಂಡಿದ್ದೇವೆ. ಆದರೆ ಇವತ್ತು ಸೆಕ್ಷನ್ 195ನೇ ಪರಿಸ್ಥಿತಿಗೆ ಬಂದಾಗ ಸಾಕಷ್ಟು ಇಲ್ಲಿ ಚರ್ಚೆಯಾಯಿತು ಮತ್ತು ಬೆಳಿಗ್ಗೆಯಿಂದ ಸಂಜೆವರಿಗೆ ನಾವು ಇವತ್ತು ಇದಕ್ಕೆ ಇಷ್ಟು ಪ್ರಾಮುಖ್ಯತೆಯನ್ನು ಕೊಡಲಿಕ್ಕೆ ಏನು ಕಾರಣ? ಯಾವ ಪ್ರಚೋದನೆ ಇತ್ತು? ಮತ್ತು ಇದರ ಸಾಧಕಬಾಧಕ ಏನು ಎಂಬ ವಿಚಾರ ಬಹುಶಃ ಇವತ್ತು ಸಾರ್ವಜನಿಕರಿಗೂ ತಿಳಿಯಬೇಕು, ಮತ್ತು ಈ ಸದನದ ಸದಸ್ಯರು ಅದು ಆ ಕಡೆ ಇರಬಹುದು, ಈ ಕಡೆಯವರು ಇರಬಹುದು ಅವರ ಜವಾಬ್ದಾರಿ ಕೂಡ ಈ ಒಂದು ವಿಚಾರದಲ್ಲಿ ಏನು ಎಂದು ಹೇಳಿ ಬಹುಶಃ ಒಂದು ಐತಿಹಾಸಿಕ ಘಟ್ಟಕ್ಕೆ ಒಂದು ಪ್ರಿವಿಲೇಜಿನ ಪ್ರಸ್ತಾವನೆ ಇವತ್ತು ಇಲ್ಲಿಗೆ ಬಂದಿದೆ. ಸಾಮಾನ್ಯವಾಗಿ ಯಾವಾಗಲೂ ಕೂಡ ಇಷ್ಟು ಭಾವನಾತ್ಮಕವಾಗಿ ಈ ತರಹ ಒಂದು ಪ್ರಿವಿಲೇಜ್ ಮೋಷನ್ ಇಲ್ಲಿಯವರೆಗೂ ಇಲ್ಲಿ ಬಂದಿಲ್ಲ. ಈ ಪ್ರಿವಿಲೇಜ್ ಪ್ರಸ್ತಾವನೆಯನ್ನು

ಏನು ನಮ್ಮ ಸಹೋದರಿಯರು ಇಲ್ಲಿ ಬೆಳಿಗ್ಗೆ ಪ್ರಸ್ತಾವನೆ ಮಾಡಿದರು, ಸೂಚನೆಯನ್ನು ಕೊಟ್ಟರು ಅದರ ಬಗ್ಗೆ ಈ ಕಡೆಯ, ಆ ಕಡೆಯ ಅನೇಕ ಸೋದರಿಯರು ತಮ್ಮ ಒಂದು ವ್ಯಾಕುಲವನ್ನು ಇವತ್ತು ವ್ಯಕ್ತಪಡಿಸಿದ್ದಾರೆ, ಅದು ತೋರಿಕೆಯ ಮಟ್ಟಿಗೆ ನಮ್ಮ ನಾಲ್ಕೈದು ಮಹಿಳಾ ಶಾಸಕರು ಅಥವಾ ಮಾನ್ಯ ಸಚಿವೆಯರು ಸೇರಿ ಅವರಿಗೆ ಸಂಬಂಧಪಟ್ಟಂಥಾದ್ದು ಆದರೂ ಕೂಡ ಇದರ ಒಂದು ಸೆಂಟ್ರಲ್ ಥೀಮ್, ಏನು ಒಂದು ಇವತ್ತು ಪತ್ರಿಕೆಯಲ್ಲಿ ಬಂದಿದೆ, ಇದು ಒಂದು ರೀತಿಯಲ್ಲಿ ಇಡೀ ಮಹಿಳಾವರ್ಗಕ್ಕೆ ಯಾರು ಶಾಸಕರಾಗುತ್ತಾರೆ, ಮುಂದೆ ಶಾಸಕರು ಆಗುತ್ತಾರೆ ಅವರೆಲ್ಲರ ಮೇಲೆ ಒಂದು ರೀತಿಯ ಗೂಬೆ ಕೂಡಿಸತಕ್ಕಂಥ ಅವರ ಒಂದು ನೈತಿಕ ತಳಘಟ್ಟಿನ ಮೇಲೆ ಬಹುಶಃ ನೈತಿಕ ತಲಘಟ್ಟನ್ನೇ ಅಲುಗಾಡಿಸತಕ್ಕಂಥ ಒಂದು ರೀತಿಯ ಭೂಕಂಪ, ಒಂದು ರೀತಿಯ ಕಂಪನ ಇವತ್ತು ಮಹಿಳಾ ಶಾಸಕಿಯರ ಮೇಲೆ ಮಾತ್ರವಲ್ಲ ಬಹುಶಃ ಮುಂದೆ ಬರತಕ್ಕಂಥ ಶಾಸಕಿಯರ ಒಂದು ಸಮುದಾಯಕ್ಕೆ ಒಂದು ರೀತಿಯ ಕಂಪನ ಇವತ್ತು ಆಗುತ್ತಿದೆ. ಈ ಕಂಪನದ ವಿಶೇಷ ರೀತಿಯ ಪರಿಣಾಮ ಈ ಸದನದ ಮೇಲೆ ಆಗುತ್ತದೆ, ಬಹುಶಃ ನಮ್ಮ ಅನೇಕ ಮಹಿಳಾ ವರ್ಗದಮೇಲೆ ಇವತ್ತು ಆಗುತ್ತಿದೆ. ತಮಗೆ ಗೊತ್ತಿದೆ ಇತಿಹಾಸದಲ್ಲಿ ಅಥವಾ ಪುರಾಣದಲ್ಲಿ ಮಹಿಳೆಯರ ಸಂರಕ್ಷಣೆ ಬಗ್ಗೆ ಅನೇಕ ಸಂಘರ್ಷಗಳು ಆಗಿವೆ. ಇವತ್ತು ಅವರ ಸಂರಕ್ಷಣೆಯನ್ನು ಈ ಸದನ, ಈ ಕರ್ನಾಟಕ ಸಭೆ ಮಾಡಬೇಕಾಗುತ್ತದೆ. ಇದಕ್ಕೆ ಒಳ್ಳೆಯ ಪರಂಪರೆ ಇದೆ, ಒಳ್ಳೆಯ ಕ್ರಮದಲ್ಲಿ ಇದ್ದೇವೆ, ಮತ್ತು ಮಾದರಿಯಾದಂಥ ಸಭೆ ಇದಾಗಿದೆ ಎಂದು ಹೇಳಿ ನಾವು ಯಾವಾಗಲೂ ಕೂಡ ಪರಂಪರೆ ವಿಷಯವನ್ನು ಬಹಳ ವೈಭವೀಕರಣ ಮಾಡುತ್ತೇವೆ. ಆದರೆ ಇವತ್ತು ಏನು ಪತ್ರಿಕೆಯಲ್ಲಿ ಬಂದು ಇದರ ತಲಘಟ್ಟನ್ನೇ ಅಲುಗಾಡಿಸತಕ್ಕಂಥ ಬಹುಶಃ ಈ ಪರಂಪರೆಯ ಒಂದು ದೃಷ್ಟಿಯಲ್ಲಿ ಇವತ್ತು ಈ ಸದನ ಈ ಒಂದು ವಿಚಾರಗಳನ್ನು ತಾವು ಎತ್ತಿಹಿಡಿಯದೇ ಇದ್ದರೆ, ಬಹುಶಃ ಆ ಪರಂಪರೆಯೆಲ್ಲಾ ಕೊಚ್ಚಿಕೊಂಡು ಹೋಗುತ್ತದೆ. ಇವತ್ತು ಮಹಿಳಾ ಮಣಿಗಳನ್ನು ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಒಂದು ದೇವರ ಸ್ವರೂಪ ಕೊಟ್ಟು, ಪೂಜ್ಯಾರ್ಹವಾದಂಥ ವ್ಯಕ್ತಿಗಳನ್ನಾಗಿ ಮಾಡಿ ಬಹಳ ಎತ್ತರದಲ್ಲಿ ಇಟ್ಟು ನಾವು ಇದ್ದೇವೆ. ಬಹುಶಃ ಪುನಃ ಇನ್ನು ಅವರನ್ನು ಮನೆಯ ನಾಲ್ಕು ಗೋಡೆಗಳ ಒಳಗೆ ಸೇರಿಸತಕ್ಕಂಥ ಒಂದು ಅಪ್ರತ್ಯಕ್ಷವಾದಂಥ ಪ್ರಯತ್ನ ಅಥವಾ ಒಂದು ಧಾಳಿ ಇವತ್ತು ಆಗುವುದಿದ್ದರೆ, ಅದರ ಬಗ್ಗೆ ನಾವು ಎಚ್ಚರಿಕೆ ವಹಿಸದೇ ಇದ್ದರೆ ಬಹುಶಃ ಒಂದು ದೊಡ್ಡ ಅಪಚಾರ ಪ್ರಜಾಪ್ರಭುತ್ವಕ್ಕೆ ಮಾಡುತ್ತೇವೆ ಮತ್ತು ಪ್ರಜಾಪ್ರಭುತ್ವದಲ್ಲಿ ಇವತ್ತು ಹೆಗಲಿಗೆ ಹೆಗಲು ಕೊಟ್ಟು ಪ್ರಜಾಪ್ರಭುತ್ವದ ಶೇಕಡಾ 50 ಪರ್ಸೆಂಟ್ ಎಂದು ಏನು ಹೇಳುತ್ತೇವೆ, ಅವರ ಭಾಗವಹಿಸುವಿಕೆ, ಇವತ್ತು ಕ್ರಿಯಾತ್ಮಕವಾಗಿ ಆಗಬೇಕು ಎಂದು ನಾವು ಅಪೇಕ್ಷೆಪಡುತ್ತೇವೆ, ಅಪೇಕ್ಷೆಯ ಕನಸನ್ನು ಪುಡಿಪುಡಿ ಮಾಡತಕ್ಕಂಥ ಒಂದು ಪ್ರಯತ್ನ ಇಲ್ಲಿ ನಡೆದಿದೆ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಿಕ್ಕಿಲ್ಲ. ಏಕೆಂದರೆ ಒಂದು ಕಡೆ ನಾವು ಯಾವಾಗಲೂ ಕೂಡ ಹೇಳುತ್ತೇವೆ, ಸಾಕಷ್ಟು ಡಿಬೇಟ್‌ಗಳು ಚರ್ಚೆಗಳು ಇವತ್ತು ಲೋಕಸಭೆಯಲ್ಲಿ, ರಾಜ್ಯಸಭೆಯಲ್ಲಿ ಆಗುತ್ತಿದೆ. ಪ್ರಜಾಪ್ರಭುತ್ವ ಯಾವ ದಾರಿಯಲ್ಲಿ ಹೋಗಬೇಕು ? ನೆಕ್ಸ್ಟ್ ಮಿಲೆನಿಯಮ್‌ಗೆ ನಾವು ಕಾಲಿಡುವಾಗ ಯಾವರೀತಿ ಹೆಜ್ಜೆಗಳನ್ನು ಹಾಕಿಕೊಂಡು ನಾವು ಮುಂದೆ ಹೋಗಬೇಕು ಎಂದು ಹೇಳುತ್ತಾ ಇರತಕ್ಕಂಥ ರೀತಿಯಲ್ಲಿರುವಾಗ ಇವತ್ತು ಕಡಿಮೆ ಪಕ್ಷ 33 ಪರ್ಸೆಂಟ್ ಆದರೂ ಕೂಡ

ಮಹಿಳೆಯರಿಗೆ ಪ್ರಾತಿನಿಧ್ಯ ಕೊಡದೇ ಇದ್ದರೆ, ಅದು ಎಲ್ಲಾ ಹಂತದಲ್ಲಿ ಅದು ಪಂಚಾಯತಿಯಿಂದ ಅಸೆಂಬ್ಲಿವರೆಗೆ, ಅಸೆಂಬ್ಲಿಯಿಂದ ಲೋಕಸಭೆವರೆಗೆ ಆಗದೇ ಇದ್ದರೆ ಯಾವುದೇ ಒಂದು ಪ್ರಜಾಪ್ರಭುತ್ವ ವ್ಯವಸ್ಥೆ ಅದು ಪರಿಪಕ್ವ ಆಗುವುದಿಲ್ಲ. ಅಂತಹ ಒಂದು ಸಂಯೋಜನೆ ಆಗದೇ ಇದ್ದರೆ ಅರ್ಥವಿಲ್ಲದಂಥ ಪ್ರಜಾಪ್ರಭುತ್ವದಲ್ಲಿ ನಾವು ಇರುತ್ತೇವೆ ಎಂಬ ವಿಚಾರವನ್ನು ಇವತ್ತು ರಾಷ್ಟ್ರಮಟ್ಟದಲ್ಲಿ ಚರ್ಚೆ ಮಾಡತಕ್ಕಂಥ ಒಂದು ಸಂದರ್ಭದಲ್ಲಿ ಅಧ್ಯಕ್ಷರೇ, ಈ ಶಾಸನಸಭೆಗೆ ಬಂದಂಥ ಕೆಲವು ಮಹಿಳಾವರ್ಗದ ಶಾಸಕಿಯರನ್ನೇ ಇವತ್ತು ಗುರುತಿಸಿ, ಅದು ಹೆಸರು ಹೇಳತಕ್ಕಂಥಾದ್ದು, ವೈಯಕ್ತಿಕವಾಗಿ ಅವರ ಮೇಲೆ ಹೇಳತಕ್ಕಂಥ ಅಪಚಾರಗಳು ಇದು ಒಂದು ಇಲ್ಯುಸ್ಟ್ರೇಷನ್ಸ್ ಅಷ್ಟೆ. ಆದರೆ ಪ್ರತಿಯೊಬ್ಬರನ್ನೂ ಕೂಡ ಗುರುತಿಸಿ ಅವರ ನೀತಿಯ ಮೇಲೆ ಒಂದು ಲೆಕ್ಕದಲ್ಲಿ ಅವರ ಶೀಲದ ಮೇಲೆ ಒಂದು ರೀತಿಯ ಕಳಂಕವನ್ನು ತರತಕ್ಕಂಥ ಪ್ರಯತ್ನ ನಡೆದಿದೆ.

6.00 ಪಿ.ಎಂ.

ಆ ಮೋಡವನ್ನು ಚದುರಿಸತಕ್ಕಂಥ ಒಂದು ಪ್ರಯತ್ನವನ್ನು ಮಾಡುತ್ತಿದ್ದೇವೆ. ಈ ಒಂದು ವಾತಾವರಣದಲ್ಲಿ ಸದನವನ್ನು ಮುಂದುವರಿಸುವುದಕ್ಕೆ ಆಗುವುದಿಲ್ಲ, ಸದನವನ್ನು ಮುಂದುವರಿಸಿಕೊಂಡು ಹೋದರೆ ಅರ್ಥವಿಲ್ಲ. ಈ ಹಕ್ಕುಚ್ಯುತಿ ನಿರ್ಣಯಕ್ಕೆ ಬೆಳಿಗ್ಗೆಯಿಂದ - ಸಂಜೆಯವರೆಗೆ ಚರ್ಚೆ ಮಾಡಿ ಆಲೋಚನೆ ಮಾಡಿದ್ದಾರೆಂದು ಜನ ತಿಳಿದುಕೊಳ್ಳಬಹುದು. ಇದರ ಬಗ್ಗೆ ಚರ್ಚೆ ಮಾಡದೇ ಹೋದರೆ ಇವತ್ತಿನ ದಿವಸ ಯಾವ ಮಹಿಳೆಯೂ ಕೂಡ ಸಾರ್ವಜನಿಕ ಜೀವನದಲ್ಲಿ ಪ್ರವೇಶ ಮಾಡುವ ಹಾಗಿಲ್ಲ. ಇದು ಸಾಧಾರಣ ಪತ್ರಿಕೆಯಲ್ಲ, ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪ್ರಶಸ್ತಿ ಪಡೆದಿರುವಂತಹ ಒಬ್ಬ ಎಡಿಟರ್ ನಡೆಸತಕ್ಕಂಥ ಲಂಕೇಶ್ ಪತ್ರಿಕೆ. ಇದು ಯಾರೋ ಒಬ್ಬರು ಒಂದು ಪತ್ರಿಕೆ ನಡೆಸುತ್ತಿದ್ದಾರೆ ಎಂದು ಹೇಳಿದರೆ ಅದು ಬೇರೆ ವಿಚಾರ. ಯೆಲ್ಲೋ ಪತ್ರಿಕೆಗಳಲ್ಲಿ, ಮತ್ತೊಂದು ಪತ್ರಿಕೆಗಳಲ್ಲಿ ಈ ವಿಚಾರ ಬರೆದಿದ್ದಾರೆಂದು ಹೇಳಬಹುದು. ಆದರೆ ಪತ್ರಿಕೆಗಳಲ್ಲಿ ರೆಡ್, ವೈಟ್, ಯೆಲ್ಲೋ ಅದು ಮುಖ್ಯವಲ್ಲ. ಪತ್ರಿಕೆ ಎಷ್ಟು ವರ್ಷದಿಂದ ನಡೆಸುತ್ತಿದ್ದಾರೆ ಎನ್ನುವುದು ಮುಖ್ಯ. ಈ ಹಿನ್ನೆಲೆಯಲ್ಲಿ ನಾವಿಂದು ಇದು ಒಂದು ಜವಾಬ್ದಾರಿಯುತವಾದ ಪತ್ರಿಕೆ ಎಂದು ತಿಳಿದುಕೊಂಡು ಚರ್ಚೆ ಮಾಡುತ್ತಿದ್ದೇವೆ. ಪತ್ರಿಕಾರಂಗ ನಿರ್ಭೀತಿಯಿಂದ, ನಿರ್ವಂಚನೆಯಿಂದ ಕೆಲಸ ಮಾಡಬೇಕು. ಅದೇ ರೀತಿಯಲ್ಲಿ ಪ್ರಜಾಪ್ರಭುತ್ವ ಸರಿಯಾಗಿ ನಡೆಯಬೇಕಾದರೆ ಶಾಸಕಾಂಗ ಕೂಡ ನಿರ್ಭೀತಿಯಿಂದ, ನಿರ್ವಂಚನೆಯಿಂದ ಇವತ್ತು ಕೆಲಸ ಮಾಡಬೇಕಾಗುತ್ತದೆ. ನಿರ್ಭೀತಿಯಿಂದ, ನಿರ್ವಂಚನೆಯಿಂದ ಶಾಸಕರು ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ ಅಥವಾ ಅವರನ್ನು ತಡೆಯುವಂತಹ ಕೆಲಸ ಹೊರಗಡೆ ಹಾಗೂ ಒಳಗಡೆಯಿಂದ ಆ ಶಕ್ತಿ ಬರುವುದಿದ್ದರೆ ನಾವು ಎಲ್ಲಾ ಒಗ್ಗಟ್ಟಾಗಿ ಅದರ ವಿರುದ್ಧ ಹೋರಾಟ ಮಾಡಬೇಕಾಗುತ್ತದೆ. ಸಂಘರ್ಷಣೆ ಮಾಡಬೇಕಾಗುತ್ತದೆ. ನಿರ್ಭೀತಿಯ, ನಿರ್ವಂಚನೆಯ ವಾತಾವರಣವನ್ನು ನಾವು ಸೃಷ್ಟಿ ಮಾಡಬೇಕಾಗುತ್ತದೆ. ಇದಕ್ಕೆ ಏನು ಮಾಡಬೇಕೆಂದರೆ ನಾವು ಕೂಡ ಬಹುಶಃ ಬೇರೆ ಬೇರೆ ಸಾಕಷ್ಟು ಕಲ್ಚರ್ ನಡೆಯುತ್ತಿದೆ, ಏನು ನಡೆಯಬಾರದು ಆ ಕಲ್ಚರ್‌ಗೆ ಬಹಳ ಸುಲಭವಾಗಿ ಪ್ರಚಾರವನ್ನು ಕೊಡತಕ್ಕಂಥ ಪ್ರಯತ್ನ, ಅಪಪ್ರಚಾರ ಬಾರದ ಹಾಗೆ ಯಾವ ರೀತಿ

ಮ್ಯಾನೇಜ್ ಮಾಡಬೇಕು ಎನ್ನುವುದೂ ಕೂಡ ಒಂದಂಶ. ನೀವು ಮೈಸೂರಿನಲ್ಲಿ ಶಾಸಕರಿಗೆ ಏನು ಟ್ರೈನಿಂಗ್ ಕೊಡುತ್ತಿದ್ದೀರಿ, ಅದು ಯಾವುದೂ ಟ್ರೈನಿಂಗ್ ನಡೆಯುವುದಿಲ್ಲ. ಇನ್ನು ಯಾರ್ಯಾರನ್ನು ಯಾವ ಯಾವ ರೀತಿಯಲ್ಲಿ ಮ್ಯಾನೇಜ್ ಮಾಡಬೇಕೆಂದು, ಹಾಗೂ ಅಪಪ್ರಚಾರ ಬಾರದ ಹಾಗೆ ಏನು ಮಾಡಬೇಕು ಇದರ ಬಗ್ಗೆ ನಾವು ಇವತ್ತು ಟ್ರೈನಿಂಗ್ ಪಡೆಯಬೇಕು. ಇವತ್ತು ಯಾರೂ ಕೂಡ ನಿರ್ಭೀತಿಯಿಂದ, ನಿರ್ವಂಚನೆಯಿಂದ, ಕೆಲಸ ಮಾಡುವಂತಹ ಕಾಲ ಇಲ್ಲದಾಗಿದೆ. ಅಡ್ಡದಾರಿ ಹಿಡಿದುಕೊಂಡು, ಶಾಸಕರಾಗಿ, ಮಂತ್ರಿಗಳಾಗಿ, ಮುಖ್ಯಮಂತ್ರಿಗಳಾಗಿ ಬದುಕುವ ದಾರಿ ಹುಡುಕಬೇಕಾಗಿದೆ. ಇದಕ್ಕೆ ಟ್ರೈನಿಂಗ್ ತಾವು ಕೊಡಿ, ಇಲ್ಲದಿದ್ದರೆ none of us can function here. ಏಕೆಂದರೆ ಎಲ್ಲರೂ ಕೂಡ ಕರಪ್ಟಡ್ ಪೀಪಲ್ ಎಂದು ಒಂದು ರಿಫ್ಲೆಕ್ಷನ್ ಇದೆ. ನಿಜ, ಯಾರು ಕರಪ್ಟ್ ಮಾಡುತ್ತಾರೆ, ಹಣವನ್ನು ದೋಚುತ್ತಾರೆ, ಅವರನ್ನು ಬಲಿ ಹಾಕಿ. ಆದರೆ ಎಲ್ಲರನ್ನೂ ಕರಪ್ಟಡ್ ಅಂದರೆ ಹೇಗೆ? ತಮಗೆ ಗೊತ್ತಿರುವ ಹಾಗೆ ಅನೇಕ ಜನರನ್ನು ನಾವು ನೇರವಾಗಿ ಕಾಣುತ್ತಿದ್ದೇವೆ. ಮಂತ್ರಿಗಳಾಗಿ ಹೋದವರು, ಶಾಸಕರಾಗಿ ಹೋದವರು, ಅಥವಾ ಸಂಸತ್ ಸದಸ್ಯರಾಗಿ ಹೋದವರು ಬೀದಿಯಲ್ಲಿ ಭಿಕ್ಷೆ ಬೇಡುವುದನ್ನು ಬಿಟ್ಟು ಬಾಕಿ ಎಲ್ಲಾ ಪರಿಸ್ಥಿತಿಗೆ ಅನೇಕರು ಇಳಿದಿದ್ದಾರೆ. ಇದರಲ್ಲಿ ನೂರಕ್ಕೆ 90 ಭಾಗ ಇದ್ದಾರೆ. ನೂರಕ್ಕೆ 10 ಜನ ಇವತ್ತು ಕರೆಪ್ಟ್ ಇರಬಹುದು. ಇವರನ್ನು ಬಲಿ ಹಾಕಿ. ಯಾರು ಲಂಚ ತೆಗೆದುಕೊಳ್ಳುತ್ತಾರೆ, ಯಾರು ಹಣ ಪಡೆಯದೆ ಕೆಲಸ ಮಾಡುವುದಿಲ್ಲ ಅಂಥವರನ್ನು for a consideration they work, ಅದಕ್ಕೆ ಬೇಕಾದಂಥ ವೇದಿಕೆ ಅಥವಾ ಕಟ್ಟುನಿಟ್ಟಿನ ಕಾನೂನು ಮಾಡಿ ಅದು ಒಂದು ರೀತಿಯ ರಿಫ್ಲೆಕ್ಷನ್. ಲೇಡಿಸ್ ಬಂದರೆ ಅವರ ಕ್ಯಾರೆಕ್ಟರ್ ಸರಿ ಇಲ್ಲವೆಂದು ಹೇಳತಕ್ಕಂಥದ್ದು ಸರಿಯಲ್ಲ. ಯಾರೋ ಒಬ್ಬ ರಾಜಕಾರಣಿ ಬಂದರೆ ಅವರೆಲ್ಲಾ corrupt people, characterless people -ಎಂದು ಹೇಳತಕ್ಕಂಥ ವ್ಯವಸ್ಥೆ ಏನಿದೆ ಬಹುಶಃ ಈ ವ್ಯವಸ್ಥೆ ಇರುವುದರಿಂದ, I think, in my family I will be the last man in politics. Nobody else will enter politics in my house, in my family. ಇದು ವೈಯುಕ್ತಿಕವಾಗಿ ಬಂದಂಥ ಅನುಭವಗಳು. ಈ ರಾಜಕೀಯಕ್ಕೆ ಏಕೆ ಬರಬೇಕು? why should we sacrifice? ಎಲ್ಲರಿಗೂ ಇರುವಂತೆ ಸಂಪಾದನೆ ಮಾಡಬೇಕೆನ್ನುವ ದಾರಿ ನಮಗೂ ಕೂಡ ಇರುತ್ತದೆ. ಇವತ್ತು ರಾಜಕಾರಣಿಯಾದರೆ ಗತಿ ಇಲ್ಲದೆ ಬಂದವರೆಂದು ಆಗಿಬಿಟ್ಟಿದೆ. ಇವತ್ತು ರಾಜಕಾರಣಿ ಮನೆ ಅಥವಾ ಇನ್ನೇನ್ನಾದರೂ ಮಾಡಿಕೊಂಡರು ಎಂದರೆ ಅದೂ ಕೂಡ ಲಂಚದ ಹಣದಿಂದ ಮಾಡಿಕೊಂಡಿದ್ದಾರೆ ಎನ್ನತಕ್ಕಂಥ ಭಾವನೆ ಜನರಲ್ಲಿ ಇದೆ. ಪ್ರತಿಯೊಬ್ಬ ರಾಜಕಾರಣಿಗೆ ನ್ಯಾಯವಾಗಿ ಸಂಪಾದನೆ ಮಾಡತಕ್ಕಂಥ ಮಾರ್ಗ ಇರಬೇಕಾಗುತ್ತದೆ. ಯಾರಿಗೆ ಈ ಮಾರ್ಗ ಇಲ್ಲವೋ ಅಂಥವರನ್ನು ಬಲಿ ಹಾಕಿ. ನ್ಯಾಯವಾಗಿ ಸಂಪಾದನೆ ಮಾಡತಕ್ಕಂಥ ರಾಜಕಾರಣಿ ಇದ್ದರೆ ಅದು ಕೂಡ ಲಂಚದಿಂದಲೇ ಬಂದಿದೆ ಎಂದು ಹೇಳುವಂತಹ ಪ್ರವೃತ್ತಿ ಇವತ್ತು ಇದೆ. ಇವತ್ತು ಮಹಿಳೆಯರು ಪುರುಷರ ಆಶ್ರಯ ತೆಗೆದುಕೊಂಡೇ ರಾಜಕೀಯಕ್ಕೆ ಬರುತ್ತಾರೆ ಎನ್ನುವಂಥ ಒಂದು ರಿಫ್ಲೆಕ್ಷನ್ ಅನ್ನು ನೀವು ಮಾಡುವುದಿದ್ದರೆ, ಇದರ ಬಗ್ಗೆ ಚರ್ಚೆ ಆಗಬೇಕು. ಇವತ್ತು ರಾಜಕಾರಣದಲ್ಲಿ ಪ್ರಾಮಾಣಿಕರೂ ಕೂಡ ಪ್ರವೇಶ ಮಾಡಿ ಬದುಕಬಹುದು. ವೈಯಕ್ತಿಕವಾದಂಥ ಶೀಲವನ್ನು, ಸಾರ್ವಜನಿಕವಾದಂಥ ಶೀಲವನ್ನು ಉಳಿಸಿಕೊಳ್ಳುವುದಕ್ಕೆ ಇದೂ ಕೂಡ ಒಂದು ಕ್ಷೇತ್ರ

ಎಂದು ಪುನರ್ ಸ್ಥಾಪನೆ ಮಾಡತಕ್ಕಂಥ ಒಂದು ಪರಿಸ್ಥಿತಿ ಇವತ್ತು ಬಂದಿದೆ. None of you, your wife of your children or your daughters or sisters will enter into this kind of absolutely distorted political scene. ಇದರ ಬಗ್ಗೆ ಆತ್ಮ ವಿಶ್ಲೇಷಣೆ ಮಾಡಬೇಕಾಗುತ್ತದೆ. ಅವಲೋಕನವನ್ನು ಮಾಡಬೇಕಾಗುತ್ತದೆ. one has to define himself whether one can be in the politics. ಅನೇಕ ಸಂದರ್ಭಗಳಲ್ಲಿ ಇವತ್ತು ರಾಜಕೀಯ ಸನ್ಯಾಸವನ್ನು ತೆಗೆದುಕೊಂಡು ಹೋಗಬೇಕು ಎನ್ನುವಂತಹ ಭಾವನೆಗಳು ಆಗುತ್ತಿವೆ. ಈ ರೀತಿ ಹೆಣ್ಣುಮಕ್ಕಳ ಮೇಲೆ ರಿಫ್ಲೆಕ್ಷನ್ ಬರೆಯುವುದು ಎಂದರೆ ಏನು? ಇದರಿಂದ ನಮಗೆ ಬಹಳ ದುಃಖವಾಗುತ್ತಿದೆ. They can write. ಪ್ರಜಾಪ್ರಭುತ್ವದಲ್ಲಿ vigilance is the price for democracy vigilance is a must. ಆದರೆ ಇವತ್ತು ವಿಜಿಲೆನ್ಸ್ ಅಲ್ಲ, ಇದು ಒಂದು ರೀತಿಯ ಪ್ರಜಾಪ್ರಭುತ್ವದ ಬುಡಕ್ಕೆ ಏಟನ್ನು ಹಾಕಿ ಪ್ರಜಾಪ್ರಭುತ್ವದ ಮಹಾ ವೃಕ್ಷವನ್ನು ಕೆಡವತಕ್ಕಂಥ ಒಂದು ರೀತಿಯ ವಿಷ. ತಾವು ನೋಡಿರಬಹುದು, ನಮ್ಮ ಕಡೆಗೆ ದೊಡ್ಡ ವೃಕ್ಷ ಕಡೆಯ ಬೇಕಾದರೆ ಒಂದು ರೀತಿಯ ವಿಷ ಹಾಕುತ್ತಾರೆ. ಆಗ ಆ ವೃಕ್ಷ ತನ್ನಷ್ಟಕ್ಕೆ ತಾನೇ ಸಾಯುತ್ತದೆ. ಬಹುಶಃ ಪ್ರಜಾಪ್ರಭುತ್ವದ ಮಹಾ ವೃಕ್ಷ ಕೂಡ ಅದೇ ರೀತಿಯಲ್ಲಿ ನೆಲಸಮ ಮಾಡಲಿಕ್ಕೆ ಅನೇಕ ಶಕ್ತಿಗಳು ಕೆಲಸ ಮಾಡುತ್ತಿವೆ. ಆದರೆ, ಪತ್ರಿಕಾರಂಗ ಈ ಕೆಲಸ ಮಾಡಬಾರದು. ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳುವ ಕೆಲಸ ಮಾಡಬೇಕಾಗುತ್ತದೆ. ಆ ಕೆಲಸ ಮಾಡದೇ ಇದ್ದರೆ ಅವರಿಂದ ಪ್ರಜಾಪ್ರಭುತ್ವಕ್ಕೆ ಅಪಚಾರವಾಗುತ್ತದೆ. ಆ ಒಂದು ವರ್ಗವನ್ನೇ ಇವತ್ತು ಗುರುತಿಸಿ ಸಾರ್ವಜನಿಕ ಜೀವನದಿಂದ ಅವರನ್ನು ಹೊರಗಿಡುವಂತಹ ಒಂದು ಪ್ರಯತ್ನ ಆಗುವುದಿದ್ದರೆ what else can be a breach of privilege? Tell me. ಒಂದು ವರ್ಗವನ್ನೇ ಒಂದು ಕ್ರಿಯಾತ್ಮಕವಾಗಿ, ಕ್ರಿಯಾಶೀಲವಾಗಿ ಪುನರ್ಗಾಮಿ ಜಗತ್ತಿನಲ್ಲಿ ಒಂದು ವರ್ಗವನ್ನೇ ಕಿತ್ತು ಆ ಕ್ಷೇತ್ರದಿಂದ ಹೊರಗೆ ಹಾಕತಕ್ಕಂಥ ಪ್ರಯತ್ನ ಆಗುವುದಿದ್ದರೆ nothing else can be a breach of privilege. ಇದಕ್ಕಿಂತ ದೊಡ್ಡದು ಬೇಡ. ಏಕೆಂದರೆ ನಾವು ಹೇಳಬಹುದು, ಇದು ಹೇಗೆ ಹಕ್ಕುಚ್ಯುತಿಯಾಗುತ್ತಿದೆ? ಇದನ್ನು ಕಟ್ಟಿಕೊಂಡು ಇವತ್ತು ಇದು ಒಂದು ಸೈದ್ಧಾಂತಿಕವಾದಂಥ ಪ್ರಶ್ನೆ, ವೈಯುಕ್ತಿಕವಾದ ಪ್ರಶ್ನೆ ಎಂದು ಹೇಳಿ ಈ ಸದನ ಇದನ್ನು ಪರಿಗಣಿಸಬಹುದು. ಇದು ಸೈದ್ಧಾಂತಿಕವಾದ ಪ್ರಶ್ನೆಗೆ ಐತಿಹಾಸಿಕವಾದಂಥ ನಿರ್ಣಯ ಕೊಡತಕ್ಕಂಥ ಉನ್ನತ ಸ್ಥಾನದಲ್ಲಿ ತಾವು ಇದ್ದೀರಿ. ಆ ಒಂದು ವಾತಾವರಣದಲ್ಲಿ ಇವತ್ತು ನಾವು ಚರ್ಚೆ ಮಾಡುತ್ತಿದ್ದೇವೆ. ಜವಾಬ್ದಾರಿ ಬರೀ ತಮ್ಮದು ಮಾತ್ರ ಅಲ್ಲ. ಅಥವಾ ಈ ಜವಾಬ್ದಾರಿ ಆ ಮಹಿಳಾ ಮಣಿಗಳದ್ದು ಮಾತ್ರವಲ್ಲ. ಅಥವಾ ಇಡೀ ಸದನದ್ದು ಮಾತ್ರವಲ್ಲ. ಇವತ್ತು ಪತ್ರಿಕಾ ರಂಗದ್ದೂ ಕೂಡ ಆಗಿದೆ. ನಿಚ್ಚಳವಾದಂತ ಒಂದು ಸಂದೇಶ ಮುಂದಿನ ಶತಮಾನಕ್ಕೆ ಹೋಗುವಾಗ, ನಿಚ್ಚಳವಾದಂಥ ಒಂದು ಶೀಲ, ಸಮೃದ್ಧಿಯ ಶೀಲಸಂಪತ್ತಿನ, ಕಾದಿರಿಸತಕ್ಕ ಒಂದು ಸಾರ್ವಜನಿಕ ಜೀವನದಲ್ಲಿ ವಿಶ್ವಾಸವನ್ನು, ಭರವಸೆಯನ್ನು ಎಲ್ಲಾ ವರ್ಗದಲ್ಲಿ ಹುಟ್ಟಿಸತಕ್ಕ ಒಂದು ನಿರ್ಣಯ ಈ ಸದನದಲ್ಲಿ ಆದರೆ; This will be a milestone in the history of this Vidhana Soudha. ಅದನ್ನು ತಾವು ಮಾಡಬೇಕಾಗುತ್ತದೆ. This has to be highlighted by our friends in the Press. ನಾನು ಬಹಳ ವಿವರಗಳಿಗೆ ಹೋಗುವುದಿಲ್ಲ. ಇವತ್ತು ಒಂದು ಪ್ರಶ್ನೆ, ಇದು ಹೇಗೆ?

ಇಲ್ಯುಸ್ಟ್ರೇಟ್ ಆಗುತ್ತದೆ. ಅದಕ್ಕೆ ನಾನು ಹೋಗುವುದಿಲ್ಲ. It is a matter of detail. ಅದರ ವಿಶ್ಲೇಷಣೆ ಪ್ರತಿ ಶಬ್ಧಕ್ಕೂ ಇವತ್ತು ಅಗತ್ಯವಿಲ್ಲ. ಒಟ್ಟು ಈ ಸೈದ್ಧಾಂತಿಕ ನೆಲೆಯ ಒಂದು ನೆಲೆಗಟ್ಟನ್ನು ಭದ್ರಗೊಳಿಸತಕ್ಕಂಥ ಒಂದು ಭದ್ರ ಬೂನಾದಿ ಈ ಸದನದಲ್ಲಿ ಹಾಕಬೇಕಾಗುತ್ತದೆ ಇವತ್ತು ಸರ್ವಾನುಮತದಿಂದ ಆಗಬೇಕಾಗಿದೆ. ಇವತ್ತು ಇದನ್ನೂ ಪ್ರಿವಿಲೇಜ್ ಕಮಿಟಿಗೆ ಕಳುಹಿಸಿ, ಅಲ್ಲಿ ವಿಚಾರಣೆಯಾಗಿ ಬರಲಿ ಎಂದು ತಾವು ಹೇಳಬಹುದು, ಆದರೆ ಇದನ್ನು ಪ್ರಿವಿಲೇಜ್ ಕಮಿಟಿಗೆ ಯಾವಾಗ ಕಳುಹಿಸಬೇಕು ? ಅದು ನಿಯಮ 196ರಲ್ಲಿದೆ. ತಮಗೆ ಅಧಿಕಾರ ಇದೆ. ನಾವು ಇಲ್ಲಿ ಎಷ್ಟೇ Substantive Motion ತರಲಿ, ನಾವು ಯಾವುದೇ ರೀತಿಯಲ್ಲಿ ನಿರ್ದೇಶನ ಕೊಡಬೇಕೆಂದು ಸೂಚಿಸಲಿ ಆ ಎಲ್ಲಾ ನಿಯಮಗಳನ್ನು ಇವತ್ತು ಬದಿಗೆ ಸರಿಸಿ, 196ನೇ ರೂಲ್ ಪ್ರಕಾರ, Not withstanding anything contained in these rules, the Speaker may refer any question of privilege to the Committee of Privileges for examination, investigation or report. What is there to be examined? ಸನ್ಮಾನ್ಯ ಅಧ್ಯಕ್ಷರೇ, ಏನಾದರೂ ಸಿಪಿಎ ಏಜೆಂಟ್ ಈ ವರದಿಯ ಹಿಂದೆ ಇದೆಯೆಂದು ನೀವು ಇನ್‌ವೆಸ್ಟಿಗೇಟ್ ಮಾಡುತ್ತೀರಾ ? ಏನು ಇನ್‌ವೆಸ್ಟಿಗೇಟ್ ಮಾಡುತ್ತೀರಿ ಅಥವಾ ಇವತ್ತು ಏನು ಎಕ್ಸಾಮಿನೇಷನ್ ಮಾಡುತ್ತೀರಿ ಅಥವಾ ಇವತ್ತು ಯಾವ ರಿಪೋರ್ಟ್ ಕೊಡುತ್ತೀರಿ ? ಇವತ್ತು ನಮ್ಮ ಸಹೋದರಿ ಶಾಸಕರು ಏನು ಚರ್ಚೆ ಮಾಡಿದ್ದಾರೆ, ಏನು ಚರ್ಚೆಯನ್ನು ಇವತ್ತು ನಾವು ಮಾಡಿದ್ದೇವೆ, ಇದಕ್ಕಿಂತ ದೊಡ್ಡ ಎಕ್ಸಾಮಿನೇಷನ್, ಇದಕ್ಕಿಂತ ದೊಡ್ಡ ಇನ್‌ವೆಸ್ಟಿಗೇಷನ್, ಇದಕ್ಕಿಂತ ದೊಡ್ಡ ವರದಿ, ಯಾರಿಗೆ ತೃಪ್ತಿಪಡಿಸುವುದಕ್ಕೆ ಅಧ್ಯಕ್ಷರೇ? ತಾವು ಏನಾದರೂ ಎಕ್ಸಾಮಿನೇಷನ್ ಅಥವಾ ಇನ್‌ವೆಸ್ಟಿಗೇಷನ್ ಅಥವಾ ವರದಿಗೆ ಕಳುಹಿಸುವುದಿದ್ದರೆ, ಯಾರ ತೃಪ್ತಿಗಾಗಿ ನೀವು ಕಳುಹಿಸುತ್ತೀರಿ ಅಥವಾ ಈ ಸದನ ಕಳುಹಿಸಬೇಕು ? Is there anything wanting? The Motion itself is black - ವರದಿ ಇವತ್ತು ಪತ್ರಿಕೆಯಲ್ಲಿ ಬಂದಂತಾದ್ದು. ಅದರ ಮೇಲೆ , Not that there is a big investigative report and from that a gist is published. It is not the gist which is published. That whole thing and that is the only thing which is published. Not that a big survey has been conducted on the lady legislators and an extract of that report is given.... ಹಾಗೆ ಏನಾದರೂ ಇದೆಯೇ ನನಗೆ ಗೊತ್ತಿಲ್ಲ. I don't think it is there. Is there anything like that? It is not an abstract of any report. It is not the report of any other investigation except the pen which has written. The paper which published, the Editor who has published. ಇದರ ಬಗ್ಗೆ ಇವತ್ತು ಯಾರಾದರೂ ಹೇಳಬಹುದು. One is at liberty to speak. Yes. It requires investigation. If there is anybody who can raise his little finger and say it requires examination, it requires except to postpone the evil day. ಬಹುಶಃ ಇವತ್ತು ನಡೆಯಬೇಕಾದ್ದು ಮುಂದಿನ ದಿವಸ ಮಾಡೋಣ ಎಂದು. ಅಧ್ಯಕ್ಷರೇ ಪಲಾಯನವಾದ. ಈ ಶಾಸನ ಸಭೆಗೆ ಬಂದು, ಇಷ್ಟು ಜವಾಬ್ದಾರಿಯಿಂದ ಕೆಲಸ ಮಾಡತಕ್ಕ ವ್ಯಕ್ತಿಗಳು ಇವತ್ತು ಹೇಳಬೇಕಾದರೆ, ಪಲಾಯನವಾದವನ್ನು

ಸ್ವೀಕರಿಸತಕ್ಕಂಥಾದ್ದು ಸರಿಯಲ್ಲ; ಯುಕ್ತವಲ್ಲ, ಪ್ರತಿಯೊಬ್ಬರೂ ಜವಾಬ್ದಾರಿಯುತವಾದಂಥ ಶಾಸಕರು ಮುಂದೆ ಏನಾಗುತ್ತದೆ, ಪರಿಣಾಮ ಏನಾಗುತ್ತದೆ, ಅದಕ್ಕಾಗಿ ಚಿಂತನೆ ಮಾಡತಕ್ಕಂಥಾದ್ದಲ್ಲ. If we refer to the Privilege Committee for some more investigation to be done, I think I am very sorry to say that we will be suspecting the integrity of all the members of this House. We will be suspecting the integrity of the entire House. We are incapable of this issue. We would like to be a bunch of hypocrites. ನಾವು ಯಾವಾಗಲೂ ಹೇಳುತ್ತೇವೆ. The Indians are very good at postponing the issuesಎಂದು. ನಾವು ಆರಂಭಶೂರರು. ಬೆಳಿಗ್ಗೆ ನಂಜೇಗೌಡರು ಬಹಳ ವೀರಾವೇಶದಿಂದ, ಬಹಳ ಜೋರಾಗಿ ಮಾತನಾಡಿಕೊಂಡು, ಬಹಳ ಎಮೋಷನಲ್ ಆಗಿ ಮಾತನಾಡಿಕೊಂಡು, ಮಧ್ಯಾಹ್ನದ ಮೇಲೆ ಪ್ರಿವಿಲೇಜ್ ಕಮಿಟಿಗೆ ಕಳುಹಿಸಿ, ಇವತ್ತು ತನಿಖೆಯಾಗಲಿ ಎಂದು ಹೇಳಿದರು. This is avoiding the responsibility. ಇದೊಂದು ಪಲಾಯನವಾದ ಆಗುತ್ತದೆ. Our conscious should be clear. If our conscious is clear and we are convinced that what reflections have been cast on the character of the women legislators today, if we have mothers, sisters and daughters, then definitely it will prick our conscious ಇಲ್ಲಿ ಕುಳಿತುಕೊಂಡು ಅದನ್ನು ಕೇಳುವುದಕ್ಕೆ ಇರತಕ್ಕಂಥವರಲ್ಲ ನಾವು. ಆ ಸಂಪ್ರದಾಯಕ್ಕೆ, ಆ ಪರಂಪರೆಗೆ ಸೇರಿದವರಲ್ಲ, ಈ ಭಾರತೀಯ ಸಂಸ್ಕೃತಿಯ ಜನಾಂಗ. As per Rule 194 and 195, if leave under rule 194 is granted, you have granted the leave, and you have allowed the substantive motion to be moved. The House may consider the question and come to a decision. After considering you have only two options left. i.e. to come to a decision or referring to a Committee of privileges. if this House is incapable of coming to a decision on the facts placed before this House. The materials which are published are very clear. Is there anything in between the lines? We have to see only the lines. There is nothing in between the lines.

SRI H. SHIVAPPA : Rule 197 can be adopted.

MR. SPEAKER : Rule 195...

SRI M. VEERAPPA MOILY : No. That's another aspect. 196 that is your Rule. It is about your privileges.

MR. SPEAKER : I am telling about rule 195. Rule 195 is a natural consequence of rule 194, provided somebody were to take objection for leave being granted, then I will have to take the course of asking the opinion of the House. Since no objection was taken for leave being granted, once the notice is

given, it is automatically natural consequence of 194 and I have taken the course under 195. Let there be no confusion.

ಶ್ರೀ ಎಂ. ವೀರಪ್ಪ ಮೊಯಿಲಿ : ಆದ್ದರಿಂದ, ಅಧ್ಯಕ್ಷರೇ, ಇದರ ಬಗ್ಗೆ It is a right decision. We have to come to a decision. But still, ಸುಮೋಟೋ ಅರ್ಬಿಟ್ರರಿಯಾಗಿ ಈ ಸದನ ನಿರ್ಣಯ ತೆಗೆದುಕೊಳ್ಳುವುದು ಬೇಡ. To that extent the lady members are very fair with all the heart feelings they have. But the restraint which has been exercised by the lady members will go on the record of this House. They have exercised utmost restraint. They have not said you punish him. They have not said that decision can be taken. Decision can be taken. But they don't want. They have exercised all restraint and surcharged emotions. ಅದು ಹೇಳುತ್ತಾ ಇದ್ದಾರೆ, You call for the explanation. Once the explanation is received, take appropriate action. It is a very fair proposal, which is presented by our lady members. ಆದ್ದರಿಂದ, ನಾವು ಇವತ್ತು ಇದು ಯಾವುದಕ್ಕೂ ಅವಕಾಶವನ್ನೇ ಕೊಡಬಾರದು. Even if there is no provision under the rule, principles of natural justice will have to be exercised by your kindself, by this House. ಆದ್ದರಿಂದ, ಅಧ್ಯಕ್ಷರೇ ಆ ಪ್ರಕಾರ ಇವತ್ತೇನು ನಮ್ಮ ಸಹೋದರಿ ಶಾಸಕಿಯರು, ಇವತ್ತು ಸಹೋದರಿ ಶಾಸಕಿರಿಯರ ಪರವಾಗಿ ಅಲ್ಲ, ನಮ್ಮೆಲ್ಲರ ಪರವಾಗಿ All of us, ನೀವು ಮೋಷನ್‌ಗೆ ದಸ್ಕತ್ ಹಾಕಿರಬಹುದು. ನಾವು ಭೌತಿಕವಾಗಿ ಮತ್ತು ಮಾನಸಿಕವಾಗಿ ಸಂಪೂರ್ಣ ತಮ್ಮ ಜೊತೆಯಲ್ಲಿ ಇದ್ದೇವೆ. We are all with you to support this Motion. There should be an exemplary treatment not a common ordinary treatment for an action of this kind. ಆದ್ದರಿಂದ ಸದನ ಈ ಬಗ್ಗೆ ಒಂದು ಐತಿಹಾಸಿಕವಾದಂಥ ನಿರ್ಣಯ ತೆಗೆದುಕೊಳ್ಳತಕ್ಕಂಥ ಹಂತಕ್ಕೆ ಇವತ್ತು ತಲುಪಿದ್ದೇವೆ, This will not happen. It has never happened. 1972 ರಿಂದ ಇದುವರೆಗೂ ಇದು ನಡೆದಿಲ್ಲ. ಇವತ್ತು ಪುನಃ "Exceptionally we are doing it. That is because of an extraordinary situation. When you are getting into 21st century, with the active participation of our sisters with us in the march of democracy in this country. ಆ ದೃಷ್ಟಿಯಿಂದ ಇವತ್ತು ಇದನ್ನು ಸ್ವೀಕಾರ ಮಾಡಬೇಕು. ಸರ್ವಾನುಮತದಿಂದ ಸ್ವೀಕಾರ ಆದರೆ this will communicate some message to this country, to the process of democracy that chivalry is not an age old outdated philosophy. Chivalry still lives in the hearts of millions and millions of people of this country. ಅದನ್ನು ಇವತ್ತು ಎತ್ತಿ ತೋರಿಸಬೇಕಾದಂತಹ ಜವಾಬ್ದಾರಿಯುತವಾದ ಸ್ಥಾನದಲ್ಲಿ ನಾವೆಲ್ಲಾ ಶಾಸಕರು ಇದ್ದೇವೆ, ಈ ಪ್ರಸ್ತಾವನೆಗೆ ನನ್ನ ಬೆಂಬಲವನ್ನು ಕೊಟ್ಟು ಎರಡು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ಯಾವ ಒಂದು ಹಕ್ಕುಚ್ಯುತಿ ನಿರ್ಣಯವನ್ನು ಮಾನ್ಯ ಸದಸ್ಯರಾದ ಪ್ರಮೀಳಾ ನೇಸರ್ಗಿಯವರು ತಂದಿದ್ದಾರೆ ಅದಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ಸೂಚಿಸಿ ಸನ್ಮಾನ್ಯ ವೀರಪ್ಪಮೊಯಲಿಯವರು ಸವಿಸ್ತಾರವಾಗಿ ಯಾವ ಕಾರಣಕ್ಕಾಗಿ ಯಾವ ಸಂದರ್ಭದಲ್ಲಿ, ಈ ಒಂದು ಹಕ್ಕುಚ್ಯುತಿ ನಿರ್ಣಯವನ್ನು ಮೂವ್ ಮಾಡುವಂತಹ ಸಂದರ್ಭ ಬಂತು, ಯಾವ ಒಂದು ಪರಿಸ್ಥಿತಿಯಲ್ಲಿ ನಮ್ಮ ಮಹಿಳಾ ಸದಸ್ಯರು ಕೆಲಸ ಮಾಡುತ್ತಿದ್ದಾರೆ. ಇವೆಲ್ಲವನ್ನೂ ಸವಿಸ್ತಾರವಾಗಿ ಹೇಳಿದ್ದಾರೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಕೆಲಸ ಮಾಡುವಂತಹ ಕಾಲದಲ್ಲಿ ನಮ್ಮೆಲ್ಲರಿಗೂ ಒಂದು ಜವಾಬ್ದಾರಿ ಇದೆ. ಶಾಸನ ಸಭೆಯಲ್ಲಿ ಕೆಲಸ ಮಾಡುತ್ತಿರುವ ನಾವು ಇರಬಹುದು, ಸರ್ಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವಂತಹ ನೌಕರ ವರ್ಗದವರು ಇರಬಹುದು, ಪತ್ರಿಕಾ ರಂಗದಲ್ಲಿ ಕೆಲಸ ಮಾಡುತ್ತಿರುವಂತಹ ನಮ್ಮ ಸ್ನೇಹಿತರು ಇರಬಹುದು, ಎಲ್ಲರಿಗೂ ಗೌರವ ಇದೆ, ಒಂದು ಲಕ್ಷಣ ರೇಖೆ ಇದೆ, ಸ್ಥಾನಮಾನ ಇದೆ, ಅದಕ್ಕೆ ಚ್ಯುತಿ ಬಂದಾಗ ಅನಿವಾರ್ಯವಾಗಿ ಈ ರೀತಿ ನಿರ್ಣಯಗಳನ್ನು ಕೈಗೊಳ್ಳಬೇಕಾದಂತಹ ಒಂದು ಸಂದರ್ಭ ಬರುತ್ತದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಮ್ಮ ಮಾಲೀಕರು ಈ ನಾಡಿನ ಜನರು. ಅವರ ಪ್ರತಿನಿಧಿಗಳಾಗಿ ನಾವು ಇಲ್ಲಿ ಕೆಲಸ ಮಾಡುವುದಕ್ಕೆ ಬಂದಿದ್ದೇವೆ. ಅವರು ಕೊಟ್ಟಿರುವ ಜವಾಬ್ದಾರಿಯನ್ನು ಅರಿತು ನಾವು ಸಂವಿಧಾನದ ಚೌಕಟ್ಟಿನಲ್ಲಿ ಕೆಲಸ ಮಾಡುವುದಕ್ಕೆ ಬಂದಿದ್ದೇವೆ. ಆ ರೀತಿಯ ನಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ನಾವು ವಿಫಲರಾದಾಗ ಪತ್ರಿಕಾ ರಂಗದಲ್ಲಿ ಕೆಲಸ ಮಾಡುತ್ತಾ ಇರತಕ್ಕಂಥ ನಮ್ಮ ಸ್ನೇಹಿತರು ನಿರ್ಭೀತಿಯಿಂದ ತಮ್ಮದೆ ಆದ ರೀತಿಯಲ್ಲಿ ಟೀಕೆ ಟಿಪ್ಪಣಿಗಳನ್ನು ಮಾಡುವುದಕ್ಕೆ ನಮ್ಮ ಲೇಖನಿಯನ್ನು ಉಪಯೋಗಿಸುವುದಕ್ಕೆ ಸಂಪೂರ್ಣ ಸ್ವಾತಂತ್ರ್ಯ ಇದೆ. ಮತ್ತೆ ತುರ್ತು ಪರಿಸ್ಥಿತಿ ಸಂದರ್ಭದಲ್ಲಿಯೂ ಸಹ ನಮ್ಮ ನಿರೀಕ್ಷೆಗೆ ಮೀರಿ ನಾವೆಲ್ಲಾ ಚುನಾಯಿತ ಪ್ರತಿನಿಧಿಗಳು, ಬೇರೆ ಬೇರೆ ಸ್ಥಾನಮಾನಗಳಲ್ಲಿ ನಮ್ಮ ಹಿರಿಯರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ವಿಫಲರಾದಾಗ ಪತ್ರಿಕಾ ರಂಗದ ಸ್ನೇಹಿತರು ಒಂದು ರೀತಿಯಲ್ಲಿ ಪ್ರಜಾತಂತ್ರ ವ್ಯವಸ್ಥೆಯನ್ನು ಯಶಸ್ವಿಯಾಗಿ ಮುಂದುವರಿಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡಿದರು, ಆ ಒಂದು ಹೋರಾಟದಲ್ಲಿ ತಮ್ಮದೇ ಆದ ಕರ್ತವ್ಯವನ್ನು ನಿರ್ವಹಿಸಿದ್ದಾರೆ ಅದನ್ನು ನಾವು ಶ್ಲಾಘನೆ ಮಾಡಲೇಬೇಕು. ಮಾನ್ಯ ಅಧ್ಯಕ್ಷರೇ, ನಾನು ತಿಳಿದುಕೊಂಡಿದ್ದೇನೆ. ನಮ್ಮ ಹೆಣ್ಣು ಮಕ್ಕಳಿಗೆ, ತಾಯಂದಿರಿಗೆ, ಮಹಿಳೆಯರಿಗೆ ಅತ್ಯಂತ ದೊಡ್ಡ ಸಂಪತ್ತು ಅಂದರೆ ಚಾರಿತ್ರ್ಯ. ಮತ್ತು ಅದು ನಮ್ಮ ಸಮಾಜದ ಹೆಗ್ಗಳಿಗೆ ಸಹ ಹೌದು. ನಮ್ಮ ಹೆಣ್ಣು ಮಕ್ಕಳನ್ನು ನಾವು ತಾಯಿ ಎನ್ನುವ ಭಾವನೆಯಿಂದ ನೋಡುತ್ತೇವೆ. ಆದರೆ ಇವತ್ತು ಅವರ ಗೌರವಕ್ಕೆ ಚ್ಯುತಿ ಬರುವ ರೀತಿಯಲ್ಲಿ ಅವರು ತಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಸಾಧ್ಯವಿಲ್ಲದ ಹಾಗೆ ಉಸಿರು ಕಟ್ಟಿಸುವಂತಹ ಒಂದು ಪರಿಸ್ಥಿತಿಯಲ್ಲಿ ಅವರ ಮೇಲೆ ಈ ರೀತಿಯ ಒಂದು ವರದಿಗಳನ್ನು ಲಂಕೇಶ್ ಪತ್ರಿಕೆ ಮೂಲಕ ಬರೆಯುವುದರ ಮೂಲಕ ಅವರು ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕೋ ಬೇಡವೋ ಎನ್ನುವ ಹಾಗೆ ಅವರು ಒಂದು ರೀತಿಯಲ್ಲಿ ತಪ್ಪು ಮಾಡದೇ ಸಮಾಜದಲ್ಲಿ ತಲೆ ತಗ್ಗಿಸುವ ರೀತಿಯಲ್ಲಿ ಅವರನ್ನು ನಿಲ್ಲಿಸುವಂತಹ ಒಂದು ವ್ಯವಸ್ಥಿತ ಷಡ್ಯಂತರ ಇವತ್ತು ಲಂಕೇಶ್ ಪತ್ರಿಕೆ ತಮ್ಮ ಪತ್ರಿಕೆಯಲ್ಲಿ ವರದಿ ಮಾಡಿದ್ದಾರೆ. ಗೌರವಾನ್ವಿತ ಕುಟುಂಬದಿಂದ ಮಹಿಳೆಯರು ರಾಜಕೀಯ ಕ್ಷೇತ್ರಕ್ಕೆ ಬರುವುದೇ ತುಂಬಾ

ಅಪರೂಪವಾದಂತಹ ಈ ಕಾಲದಲ್ಲಿ ಶಾಸಕಿಯರಾಗಿ ಮತ್ತು ಸಚಿವೆಯರಾಗಿ, ನಮ್ಮ ನಿರೀಕ್ಷೆಗೆ ಮೀರಿ ತುಂಬಾ ಗೌರವದಿಂದ ಕೆಲಸ ಮಾಡುತ್ತಿರುವಂತಹ ನಮ್ಮ ಸದಸ್ಯನಿಯರಿಗೆ ಏನೂ ತಪ್ಪು ಮಾಡದೇ ತಲೆ ತಗ್ಗಿಸುವಂತಹ ಲೇಖನಿಗಳನ್ನು ನಾವು ಖಂಡನೆ ಮಾಡಲೇಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ನಾವೆಲ್ಲಾ ದೊಡ್ಡ ರಾಜಕೀಯ ಪಕ್ಷಗಳಲ್ಲಿ ಕೆಲಸ ಮಾಡುತ್ತಿದ್ದೇವೆ. ಪಕ್ಷದಲ್ಲಿ ರಾಜ್ಯಮಟ್ಟದ, ರಾಷ್ಟ್ರ ಮಟ್ಟದ ಶಾಸನ ಸಭೆಗಳಲ್ಲಿ ಕೆಲಸ ಮಾಡುತ್ತಿದ್ದೇವೆ. ನಮ್ಮ ಜೊತೆಯಲ್ಲಿ ಮಹಿಳಾ ಪ್ರಮುಖರು ಓಡಾಟ ಮಾಡುತ್ತಾರೆ. ಒಟ್ಟಾಗಿ ನಾವು ಪ್ರವಾಸ ಮಾಡಬೇಕಾಗುತ್ತದೆ. ಹೊರರಾಜ್ಯಗಳಿಗೂ ನಾವು ಹೋಗಿ ಬರುತ್ತೇವೆ. ಈ ರೀತಿ ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡುವಂತಹ ಹೆಣ್ಣು ಮಕ್ಕಳನ್ನು ಅವರ ಗೌರವಕ್ಕೆ ಚ್ಯುತಿ ಬರುವ ರೀತಿಯಲ್ಲಿ ಈ ರೀತಿಯ ಲೇಖನಗಳನ್ನು ಬರೆಯುವುದಕ್ಕೆ ಪ್ರಯತ್ನ ಮಾಡುವಂಥಾದ್ದು ಅಕ್ಷಮ್ಯ ಅಪರಾಧ ಎಂದು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಮತ್ತೇ ಈ ಮನೆಯಲ್ಲಿ ಕೆಲಸ ಮಾಡುತ್ತಿರುವಂತಹ ಶಾಸಕಿಯರಲ್ಲಿ ನಾನು ವಿನಂತಿ ಮಾಡುತ್ತೇನೆ ಉದ್ದೇಶಪೂರ್ವಕವಾಗಿ ಚಾರಿತ್ರ್ಯ ವಧೆ ಮಾಡುವಂತಹ ಪತ್ರಿಕಾ ವರದಿಯಿಂದ ಯಾವುದೇ ಕಾರಣಕ್ಕೂ ತಾವು ತಮ್ಮ ಕರ್ತವ್ಯ ನಿರ್ವಹಿಸುವುದರಲ್ಲಿ ಹಿಂಜರಿಯುವಂತಹ ಅಗತ್ಯ ಇಲ್ಲ. ಈ ಸದನದ ಎಲ್ಲಾ ಸದಸ್ಯರು ಒಂದಾಗಿ ನಿಮ್ಮ ಜೊತೆ ಇದ್ದೇವೆ, ಈ ನಾಡಿನ ಜನ ಇದ್ದಾರೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪುರುಷರಿಗಿಂತ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿ ತೋರಿಸಿರುವಂತಹ ಅನೇಕ ಜನ ಮಹಿಳೆಯರನ್ನು ನಾವು ನೋಡುತ್ತಿದ್ದೇವೆ. ಅತ್ಯಂತ ದೊಡ್ಡ ಪ್ರಮಾಣದಲ್ಲಿ ಈ ಒಂದು ಭ್ರಷ್ಟಾಚಾರದಿಂದ ಈ ನಾಡನ್ನು ಈ ದೇಶವನ್ನು ವಿಮುಕ್ತಿ ಮಾಡುವುದಕ್ಕೆ ದೊಡ್ಡ ಪ್ರಮಾಣದಲ್ಲಿ ಮಹಿಳೆಯರು ಕೆಲಸ ಮಾಡಬೇಕು. ಎನ್ನುವ ಅಪೇಕ್ಷೆ ನಮಗೆ ಇದೆ. ಇಂತಹ ಸಂದರ್ಭದಲ್ಲಿ ತಮಗೆ ಏನು ನೋವಾಗಿದೆ ಅದರಲ್ಲಿ ನಾವೆಲ್ಲಾ ಭಾಗಿಗಳಾಗಿದ್ದೇವೆ. ಯಾವ ಕಾರಣಕ್ಕೂ ಸಹ ನೀವು ಚಿಂತನೆ ಮಾಡುವಂತಹ ಅಗತ್ಯ ಇಲ್ಲ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಿ ಇವತ್ತು ಪತ್ರಿಕಾ ರಂಗದಲ್ಲಿ ಕೆಲಸ ಮಾಡುವಂತಹ ನಮ್ಮ ಸ್ನೇಹಿತರು, ಒಂದು ಸಂದರ್ಭವನ್ನು ಉಪಯೋಗ ಮಾಡಿಕೊಂಡು ಪತ್ರಿಕಾ ರಂಗವನ್ನು ಅವಹೇಳನ ಮಾಡುವಂತಹ ಅವರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವಂತಹ ಭಾವನೆ ನಮ್ಮಲ್ಲಿ ಬರುವ ಅಗತ್ಯ ಇಲ್ಲ. ಪತ್ರಿಕಾ ರಂಗದಲ್ಲಿ ಕೆಲಸ ಮಾಡುತ್ತಿರುವಂತಹ ಎಲ್ಲಾ ಹಿರಿಯರ ಬಗ್ಗೆ ನಮಗೆ ಗೌರವ ಇದೆ. ಕೆಲವೊಂದು ಸಾರಿ ಗೊತ್ತಿದ್ದು ತಪ್ಪು ಮಾಡುತ್ತೇವೆ, ಗೊತ್ತಿಲ್ಲದೇ ತಪ್ಪು ಮಾಡುತ್ತೇವೆ. ಯಾವ ರೀತಿಯಲ್ಲಿ ನಾವು ಸದನದಲ್ಲಿ ಕೆಲಸ ಮಾಡುತ್ತೇವೆ, ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತೇವೆ ಅದಕ್ಕಿಂತ ದೊಡ್ಡ ಕೆಲಸ ತಾವು ಮಾಡುತ್ತಿದ್ದೀರಿ. ಜನವಿರೋಧಿ ನೀತಿಯನ್ನು, ಭ್ರಷ್ಟಾಚಾರದ ಹಗರಣಗಳನ್ನು, ಜನರಿಗೆ ನಾವು ಏನೋ ಹೇಳಿ ಏನೋ ಮಾಡುವುದನ್ನು ಮುಚ್ಚುಮೊರೆ ಇಲ್ಲದೆ ನಿರ್ಭೀತಿಯಿಂದ ಬರೆಯುತ್ತಿದ್ದೀರಿ. ಅದಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದು ಇನ್ನೂ ದೊಡ್ಡ ಪ್ರಮಾಣದಲ್ಲಿ ಆಗಬೇಕು. ಭ್ರಷ್ಟಾಚಾರವನ್ನು ಬಯಲು ಮಾಡುವುದು ಬೇರೆ, ಶಾಸಕರು ಸರ್ಕಾರ ತಮ್ಮ ಕರ್ತವ್ಯವನ್ನು ನಿರ್ವಹಿಸಲು ವಿಫಲವಾದಾಗ ಅದನ್ನು ಬರೆಯುವುದು ಬೇರೆ. ಉದ್ದೇಶಪೂರ್ವಕವಾಗಿ ಮಹಿಳಾ ಶಾಸಕರ ಮೇಲೆ ಅವರ ಗೌರವಕ್ಕೆ ಒಂದು ರೀತಿ ಚ್ಯುತಿ ಬರುವ ರೀತಿಯಲ್ಲಿ ಚಾರಿತ್ರ್ಯ ವಧೆ ಮಾಡುವಂತಹ ಲೇಖನಗಳು ಏನ ಇದೆ ಅದು ಬೇರೆ. ಅದಕ್ಕಾಗಿ ನಾವು

ಇಷ್ಟೊಂದು ಅಗ್ರಹವನ್ನು ಈ ಸದನದಲ್ಲಿ ಮಾಡುತ್ತಿದ್ದೇವೆ, ಬೆಳಿಗ್ಗೆಯಿಂದ ನಾವು ಇದಕ್ಕೆ ಸಮಯವನ್ನು ಇಟ್ಟಿದ್ದೇವೆ. ಮಹಿಳಾ ಶಾಸಕರು ಅವರದ್ದೇ ಆದ ಭಾವನೆಗಳನ್ನು ಈ ಸದನದಲ್ಲಿ ತೋಡಿಕೊಂಡಂತಹ ಸಂದರ್ಭದಲ್ಲಿ ನಿಜವಾಗಿಯೂ ಸಹ ಇಡೀ ಸದನ ನಾವು ಮುಂದೆ ಏನು ಮಾಡಬೇಕು ಎನ್ನುವುದು ತೋಚದ ರೀತಿಯಲ್ಲಿ ದಿಗ್ಭ್ರಾಂತರಾಗಿ ಕುಳಿತುಕೊಂಡೆವು. ಅದಕ್ಕಾಗಿ ನಾನು ಶಾಸಕೀಯರಲ್ಲಿ ವಿನಂತಿ ಮಾಡಿದೆ. ಇದು ತಮ್ಮ ಕೆಲಸ ಮಾತ್ರ ಅಲ್ಲ. ತಾವು ಬಂದು ಇಲ್ಲಿ ವೆಲ್‌ನಲ್ಲಿ ಕುಳಿತುಕೊಳ್ಳುವಂತಹ ಅಗತ್ಯಇಲ್ಲ, ಇಡೀ ಸದನ ನಾವು ನಿಮ್ಮ ಜೊತೆ ಇದ್ದೇವೆ, ತಮ್ಮ ಕೊಠಡಿಯಲ್ಲಿ ಕುಳಿತು ನಾವು ಚರ್ಚೆ ಮಾಡಿ ಇದು ಮತ್ತೆ ಮರುಕಳಿಸದಂತೆ, ತಪ್ಪು ಮಾಡಿದಂತಹ ವ್ಯಕ್ತಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದು ನಮ್ಮ ಕರ್ತವ್ಯ ಎಂದು ತಿಳಿದುಕೊಂಡೇ ಈ ನಿರ್ಣಯಕ್ಕೆ ನಾವು ಬಂದಿದ್ದೇವೆ ಹಾಗಾಗಿ ಮಾನ್ಯ ಸದಸ್ಯಿಣಿಯವರಾದ ಪ್ರಮೀಳಾ ನೇಸರ್ಗಿಯವರು ಏನು ಒಂದು ಹಕ್ಕುಚ್ಯುತಿ ನಿರ್ಣಯವನ್ನು ಮಂಡನೆ ಮಾಡಿದ್ದಾರೆ ಆ ಬಗ್ಗೆ ಮಾನ್ಯ ಅಧ್ಯಕ್ಷರು ಕನ್‌ವಿನ್ಸ್ ಆಗಿದ್ದರೆ ಎಂದು ನಾನು ತಿಳಿದುಕೊಂಡಿದ್ದೇವೆ. ಇದರ ಬಗ್ಗೆ ಹೆಚ್ಚು ಚರ್ಚೆ ಮಾಡದೆ ಒಪ್ಪಿಕೊಂಡು ತಮ್ಮ ನಿರ್ಣಯವನ್ನು ಕೊಡಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತಾ ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಈ ಒಂದು ವಿಶೇಷವಾದ ಪರಿಸ್ಥಿತಿಯಲ್ಲಿ ನಾವು ಇಲ್ಲಿ ಚರ್ಚೆಯನ್ನು ಮಾಡುತ್ತಿದ್ದೇವೆ. ಒಂದು ಲಂಕೇಶ್ ಪತ್ರಿಕೆಯಲ್ಲಿ ಈ ಶಾಸನ ಸಭೆಯ ಮಹಿಳಾ ಸದಸ್ಯರ ಮೇಲೆ ಬರೆದಿರತಕ್ಕಂಥ ಬರವಣಿಗೆ ಇದು ಹಕ್ಕುಚ್ಯುತಿಯೇ ಅಥವಾ ಮಾನನಷ್ಟವೇ ? ಹಕ್ಕುಚ್ಯುತಿ ಆಗುತ್ತದೆಯೇ ಇಲ್ಲವೇ ಎನ್ನತಕ್ಕಂಥಾದ್ದು, ಇದು ಹಕ್ಕುಚ್ಯುತಿ ಆಗುತ್ತದೆ ಎಂದು ಹೇಳಿ ಬೆಳಿಗ್ಗೆಯಿಂದ ನಿರಂತರವಾಗಿ ಚರ್ಚೆಗಳು ನಡೆದಿವೆ. ಪತ್ರಿಕೆಗಳು ಬರೆಯುವಾಗ ಉಪಯೋಗಿಸಿರುವಂತಹ ಭಾಷೆ, ಅದರಿಂದ ಮಹಿಳೆಯರಿಗೆ ಈ ಶಾಸನ ಸಭೆಯ ಮಹಿಳಾ ಸದಸ್ಯರಿಗೆ ಮನಸ್ಸಿಗೆ ನೋವಾಗಿದೆ.

6.30 ಪಿ.ಎಂ.

ಆ ನೋವಿನಲ್ಲಿ ನಾವೆಲ್ಲರೂ ಭಾಗಿಯಾಗಿದ್ದೇವೆ. ಸಾಮಾನ್ಯವಾಗಿ ಯಾರೇ ಮಹಿಳಾ ಸದಸ್ಯರಿಗಾಗಲಿ ಅಥವಾ ಪುರುಷರಿಗಾಗಲಿ ಅವರ ಮೇಲೆ ಅಪಮಾನಕಾರಿಯಾದ ಮಾತುಗಳನ್ನು ಬರವಣಿಗೆಯಲ್ಲಿ ಬರೆಯುವುದಾದರೆ ಅದು ಅತ್ಯಂತ ನೋವಿನ ಪ್ರಸಂಗ ಮತ್ತು ಆ ಬಗ್ಗೆ ಅನ್ಯಾಯ ಎಂದು ಹೇಳತಕ್ಕಂಥದ್ದು ಮತ್ತು ಬರೆದಿರತಕ್ಕಂಥ ಪತ್ರಿಕೆಗಳಿಗೆ ನೀವು ಬರೆದಿರತಕ್ಕಂಥದ್ದು ಸರಿಯಿಲ್ಲವೆಂದು ಉತ್ತರ ಕೊಡತಕ್ಕಂಥ ಅವಕಾಶ ನಮಗೆ ಇದೆ. ಯಾರ್‍ಯಾರ ಮೇಲೆ, ಅದು ಸರಿಯಿಲ್ಲ, ನಿಮ್ಮ ನಡತೆ ಮತ್ತು ನಿಮ್ಮ ವ್ಯವಸ್ಥೆ ಸರಿಯಿಲ್ಲ, ನಿಮ್ಮ ಆಡಳಿತ ಸರಿಯಿಲ್ಲ ಮತ್ತು ನೀವು ಹೋಗತಕ್ಕಂಥ ದಾರಿ ಸರಿಯಿಲ್ಲ ಎನ್ನತಕ್ಕಂಥದ್ದು ಪತ್ರಿಕೆಯಲ್ಲಿ ಬಂದಿರುತ್ತದೆ, ಅದಕ್ಕೆ ಪ್ರತಿ ಹೇಳಿಕೆಯನ್ನು ಕೊಡತಕ್ಕಂಥ ಅವಕಾಶ ನಮಗೆ ಸ್ಪಷ್ಟವಾಗಿ ಮತ್ತು ಮುಕ್ತವಾಗಿದೆ. ಒಂದು ಪತ್ರಿಕೆಯಲ್ಲಿ ಬಂದ ನಂತರ, ನಿಮ್ಮ ಪತ್ರಿಕೆಯಲ್ಲಿ ಈ ರೀತಿ ಬೇಜವಾಬ್ದಾರಿಯಾಗಿ ಬರೆದಿದ್ದೀರಿ, ಈ ಬರವಣಿಗೆಯ ಬಗ್ಗೆ ನಿಮ್ಮ ಸ್ಪಷ್ಟವಾದಂಥ ನೀತಿ ಏನು, ಇದನ್ನು ತಿಳಿಸಬೇಕೆಂದು ಹೇಳಿ ನೇರವಾಗಿ ಬರೆಯುವುದಕ್ಕೆ ನಮಗೆ

ಅವಕಾಶ ಇದೆ. ಆ ಮುಕ್ತ ಸ್ವಾತಂತ್ರ್ಯವನ್ನೂ ಯಾರೂ ಕಿತ್ತುಕೊಂಡಿಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾನು ಮಾತನಾಡುತ್ತೇನೆ ನಂತರ ನೀವು ಮಾತನಾಡಿ, ಎಲ್ಲರೂ ಮುಕ್ತವಾಗಿ ಮಾತನಾಡಿ. ಇತ್ತೀಚಿನ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದೇರೀತಿ ಇರತಕ್ಕಂಥದ್ದು, ಪತ್ರಿಕೆಗಳಲ್ಲಿ ನಮ್ಮ ವಿರುದ್ಧವಾಗಲಿ ಅಥವಾ ಪರವಾಗಲಿ ಅಥವಾ ಯಾವುದೇ ಹೇಳಿಕೆಗಳು ಅಥವಾ ಟೀಕೆಟಿಪ್ಪಣಿಗಳು ಬಂದಾಗ ಅದನ್ನು ನಾವು ತಿರಸ್ಕರಿಸತಕ್ಕಂಥದ್ದು, ನೀವು ಪತ್ರಿಕೆಯಲ್ಲಿ ಬರೆದಿರತಕ್ಕಂಥದ್ದು ಸರಿಯಿಲ್ಲ, ನಿಮ್ಮ ಪತ್ರಿಕೆ ಬರಹ ನನಗೆ ಈ ರೀತಿ, ಈ ಹಂತದಲ್ಲಿ ಅಪಮಾನವಾಗಿದೆ, ಅನ್ಯಾಯವಾಗಿದೆ ಎಂದು ಹೇಳತಕ್ಕಂಥ ಹಕ್ಕು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದೆ. ಇದೇನೂ ದಂಡಿನ ಆಳ್ವಿಕೆ ಎನ್ನಲ್ಲಿ, ಮಿಲಿಟರಿ ಪ್ರಭುತ್ವದ ರೀತಿ ಅವರು ಬರೆದಿರುವುದೇ ಸರಿ, ನಾವು ಅದಕ್ಕೆ ಉತ್ತರವನ್ನು ಕೊಡುವುದಕ್ಕೆ ಆಗುವುದಿಲ್ಲ, ಆ ಉತ್ತರದಲ್ಲಿ ಉತ್ತರವನ್ನೇ ತೆಗೆದುಕೊಳ್ಳುವುದಿಲ್ಲ ಎನ್ನತಕ್ಕಂಥ ಪ್ರಶ್ನೆ ಅಲ್ಲ. ಎರಡು ವ್ಯವಸ್ಥೆ ಇದೆ, ಆ ವ್ಯವಸ್ಥೆ ಆಗಿಲ್ಲ, ಪತ್ರಿಕೆಯಲ್ಲಿ ಬಂದಂತಹ ವರದಿಯನ್ನು ಸಾರಸಗಟಾಗಿ ತಿರಸ್ಕರಿಸತಕ್ಕಂಥದ್ದು, ಈಗ ಬಂದಿರತಕ್ಕಂಥ ಪ್ರಜಾತಂತ್ರ ವ್ಯವಸ್ಥೆ. ಈ ವ್ಯವಸ್ಥೆಯ ದಾರಿಗೆ ನಾವು ಹೋಗಿಲ್ಲ. ಆ ದಾರಿಗೆ ನಾವು ಹೋಗಿಲ್ಲ, ಮತ್ತು ನೇರವಾಗಿ ನಮಗೆ ಇಲ್ಲಿ ಹಕ್ಕಿದೆ, ನಾವು ಶಾಸಕರಾಗಿರುವುದರಿಂದ ನಮಗೆ ಈ ಸದನದಲ್ಲಿ ಸಂಪೂರ್ಣವಾದಂಥ ಹಕ್ಕು ಇದೆ. ಈ ಹಕ್ಕನ್ನು ನಾವು ಧಾರಾಳವಾಗಿ ಚಲಾಯಿಸಬಹುದು, ಅದನೇನೂ ಅಲ್ಲಗೆಳೆಯತಕ್ಕಂಥದ್ದಲ್ಲ. ನಮಗೆ ಸಂಪೂರ್ಣವಾದಂಥ ಹಕ್ಕು ಇದೆ ಎಂದು ಹೇಳಿ ಚಲಾಯಿಸುವಾಗ ಸ್ವಲ್ಪ ಚಿಂತನೆಯನ್ನು ಮಾಡಬೇಕೇ ಎನ್ನತಕ್ಕಂಥ ಆಲೋಚನೆ ನನ್ನ ತಲೆಯಲ್ಲಿ ಇದೆ. ಹಕ್ಕುಚ್ಯುತಿ ಮಂಡಿಸುವುದಕ್ಕೆ ಹಕ್ಕು ಇದೆ, ಹಕ್ಕುಚ್ಯುತಿ ಸಮಿತಿಗೆ ಕಳುಹಿಸುವುದಕ್ಕೆ ಹಕ್ಕು ಇದೆ, ಸಮಿತಿಯ ಮುಂಚೆ ಚರ್ಚೆ ಮಾಡುವ ಹಕ್ಕಿದೆ. ಅದು ಅಲ್ಲದೆ ನೇರವಾಗಿ ನಾವು ಛೀಮಾರಿ ಹಾಕುವುದಕ್ಕೆ ಮತ್ತು ಈ ಸದನಕ್ಕೆ ಕರೆಯಿಸುವಂಥ, ಸಂಪೂರ್ಣವಾದಂಥ ಅಧಿಕಾರ ಮತ್ತು ಸ್ವಾತಂತ್ರ ಇದೆ. ನಮ್ಮ ಕರ್ನಾಟಕ ಇತಿಹಾಸದಲ್ಲಿ ಬಹಳ ಅತ್ಯಂತ, ಹಿಂದೆ ವಿಧಾನಪರಿಷತ್ತಿನಲ್ಲಿ ಮಾನ್ಯ ಕೆ.ಟಿ. ಭಾಷ್ಯಂ ಎಂಬುವರ ಕಾಲದಲ್ಲಿ, ಚಮರಭಾಗವಾಲ ಎಂದು ಅವರ ಪತ್ರಿಕೆ ಬರುವಾಗ, ಆ ಕಾಲದಲ್ಲಿ ಇತಿಹಾಸದಲ್ಲಿ ಬಹುಶಃ ನನಗೆ ಸ್ವಾತಂತ್ರ್ಯದ ನಂತರ ಬಂದಂಥ ಸಂದರ್ಭದಲ್ಲಿ ನಡೆದಿದ್ದು ಬಿಟ್ಟರೆ.

ಅಧ್ಯಕ್ಷರು : ಪತ್ರಿಕೆಯ ಹೆಸರು 'ಸತ್ಯ'.

ಶ್ರೀ ವಾಟಾಳ್ ನಾಗರಾಜ್ : "ಸತ್ಯ" ಪತ್ರಿಕೆಯ ಮೇಲೆ 1953ನೇ ಇಸವಿ ಆ ಸಂದರ್ಭದಲ್ಲಿ, ಅದನ್ನು ಬಿಟ್ಟರೆ ನಂತರ ಈ ರೀತಿಯಾದಂಥ ಸಂದರ್ಭಗಳು ಬರಲಿಲ್ಲ. ಮೊನ್ನೆ ನಾನು ಒಂದು ಹಕ್ಕುಚ್ಯುತಿಯನ್ನು ಈ ಸದನದಲ್ಲಿ ತಂದಿದ್ದೆ. ಏನೆಂದರೆ, ಈ ರಾಜ್ಯದ ಲೋಕಸಭಾಸದಸ್ಯರೊಬ್ಬರು, ಮುಖ್ಯಮಂತ್ರಿಗಳು ಹುಚ್ಚರಿದ್ದಾರೆ ಮತ್ತು ಅವರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದಾರೆ ಅವರನ್ನು ತಪಾಸಣೆ ಮಾಡಿಸಬೇಕು ಎಂದು ಹೇಳಿದರು. ಅದು ನೇರವಾದ ಹಕ್ಕುಚ್ಯುತಿ ಆಗುತ್ತದೆ. ಒಬ್ಬ ಜವಾಬ್ದಾರಿಯುತ ಲೋಕಸಭಾಸದಸ್ಯರ ಮೇಲೆ, ಅದು ಈ ಲಂಕೇಶ್ ಪತ್ರಿಕೆಯಲ್ಲಿ ಬಂದಿರುವುದಿಲ್ಲ, ಭಾರಿ ದೊಡ್ಡ ಪತ್ರಿಕೆಯಾದ ಪ್ರಜಾವಾಣಿ ಮತ್ತು ಡೆಕನ್‌ಹೆರಾಲ್ಡ್ ಪತ್ರಿಕೆಯಲ್ಲಿ ಪ್ರಕಟವಾಗಿತ್ತು, ಅದನ್ನು ಹೇಳಿರತಕ್ಕಂಥ ಲೋಕಸಭಾಸಧಸ್ಯರು ತಳ್ಳಿ ಹಾಕಲಿಲ್ಲ, ನಾನು ಈ ರೀತಿ ಹೇಳಿಲ್ಲ ಎದು

ಒಂದು ಅಕ್ಷರವನ್ನೂ ಸಹ ಅವರು ಹೇಳಲಿಲ್ಲ, ಇದು ತೀವ್ರವಾದ ಹಕ್ಕುಚ್ಯುತಿ ಆಗುತ್ತದೆ ಅದನೇನೂ ತಳ್ಳಿ ಹಾಕುವ ಆಗಿಲ್ಲ. ಅದರ ಬಗ್ಗೆ ಈ ಸದನದಲ್ಲಿ ಸಮಗ್ರ ಚರ್ಚೆ ಆಗಲಿಲ್ಲ, ನಾವು ಯಾವುದೇ ಪಕ್ಷದಲ್ಲಿರಬಹುದು ಅದರ ಬಗ್ಗೆ ಸಮಗ್ರವಾಗಿ ಚರ್ಚೆ ಆಗಲಿಲ್ಲ, ಒಬ್ಬ ರಾಜ್ಯದ ಮುಖ್ಯಮಂತ್ರಿಗಳು ಅವರ ಮೇಲೆ ಹೇಳಿರತಕ್ಕಂಥ ಮಾತು, ಅಂದರೆ ಅವರು ಹುಚ್ಚರು ಎನ್ನುವ ರೀತಿಯಲ್ಲಿ ಮಾತನಾಡಬೇಕಾದರೆ ಈ ಸದನದಲ್ಲಿ ಅವರು ಇರುವುದಕ್ಕೆ ಆಗುವುದಿಲ್ಲ, ನಾನು ಮಾತನಾಡಿಲ್ಲ ಎಂದು ಹೇಳಿದರೆ ಅದು ಪತ್ರಿಕೆಯಲ್ಲಿ ಬಂದಿಲ್ಲವೆಂದು ಅರ್ಥ, ಎರಡನೇ ವಾದ ನಾನು ಹೇಳಿರತಕ್ಕಂಥದ್ದು ಸರಿಯಿಲ್ಲವೆಂದು ಇದು ಒಂದು ಭಾಗ, ಇತ್ತೀಚಿನ ದಿನಗಳಲ್ಲಿ ಬಂದಂಥ ಹಕ್ಕುಚ್ಯುತಿ, ಇವತ್ತು ಬೆಳಗಿನಿಂದಲೂ ಈ ಹಕ್ಕು ಚ್ಯುತಿಯ ಬಗ್ಗೆ ಸಮಗ್ರ ಚರ್ಚೆ ನಡೆದಿದೆ, ಮಾನ್ಯ ವೀರಪ್ಪಮೊಯಿಲಿಯವರು ಬಹಳ ಆವೇಶಭರಿತರಾಗಿ ಮಾತನಾಡಿದರು, ಮಹಿಳೆಯರ ಸಮಾಜಕ್ಕೆ ಬಹಳ ನೋವು ಆಗಿದೆ ಎನ್ನುವ ಧಾಟಿಯಲ್ಲಿ ಮಾತನಾಡಿದರು, ನನಗೂ ನೋವು ಆಗುತ್ತದೆ, ಈ ರಾಜ್ಯದ ಮತ್ತು ರಾಷ್ಟ್ರದ ಮಹಿಳೆಯರಿಗೆ ಅಪಮಾನ ಆಗುತ್ತದೆಂದರೆ ನಾವು ಸಹಿಸುವುದಕ್ಕೆ ಖಂಡಿತ ಸಾಧ್ಯವಿಲ್ಲ. ಅದನ್ನು ಯಾರೂ ಅಲ್ಲಗೆಳೆಯುವಂತಿಲ್ಲ. ಈಗ ಎರಡು ಪ್ರಶ್ನೆ, ಲಂಕೇಶ್ ಬರೆದಿರತಕ್ಕಂಥ ಪತ್ರಿಕೆಯಲ್ಲಿ, ಅದು ಹಕ್ಕುಚ್ಯುತಿಯೇ ಅಥವಾ ಮಾನನಷ್ಟವೇ ಇಲ್ಲಿ ಮಾನನಷ್ಟ ಹಾಕುವುದಕ್ಕೆ ನೇರವಾದ ಅವಕಾಶ ಇದೆ. ಹಾಗೆಯೇ ಅಂಥ ಅಲ್ಲ, ಹಿಗ್ಗಾಮುಗ್ಗ ಹಾಕಬಹುದು, ನೀವು ಅವರಿಗೆ ಪತ್ರ ಬರೆದು, ಆ ಪತ್ರಕ್ಕೆ ಅವರು ಉತ್ತರ ಕೊಡದೆ, ಅವರು ನಾನು ಬರೆದಿರುವುದೇ ಸರಿಯೆಂದು ಹೇಳಿದರೆ ನ್ಯಾಯಾಂಗದಲ್ಲಿ ಮಾನನಷ್ಟಕ್ಕೆ ಹಾಕುವುದಕ್ಕೆ ಸಮಗ್ರವಾದಂಥ ಅವಕಾಶ ವಿಫಲವಾಗಿದೆ. ಆದರೆ ಹಕ್ಕುಚ್ಯುತಿ ಆಗಿದೆ ಎನ್ನತಕ್ಕಂಥ ಜ್ಞಾನ ನನಗಂತೂ ಬರುತ್ತಿಲ್ಲ, ನಾನು ಬೆಳಿಗ್ಗೆಯಿಂದಲೂ ಈ ವಿಷಯದ ಬಗ್ಗೆ ತಲೆಕೆಡಿಸಿಕೊಂಡಿದ್ದೇನೆ, ಇದು ಹಕ್ಕುಚ್ಯುತಿ ಆಗುತ್ತಾ, ಯಾವ ಪದ ಹಕ್ಕುಚ್ಯುತಿ ಆಗುತ್ತದೆ, ಎಲ್ಲಿ ಆಗುತ್ತದೆ ಎನ್ನತಕ್ಕಂಥದ್ದನ್ನು ನಾನು ನಿರಂತರವಾಗಿ ನೋಡುತ್ತಿದ್ದೇನೆ, ಅದು ಹಕ್ಕುಚ್ಯುತಿ ನಿರ್ಣಯಕ್ಕೆ ಶಕ್ತಿ ಇಲ್ಲ ಎನ್ನತಕ್ಕಂಥದ್ದು ನನ್ನ ಸ್ಪಷ್ಟ ಅಭಿಪ್ರಾಯ. ಆದರೆ ಇದು ಮಾನನಷ್ಟಕ್ಕೆ ನೇರವಾಗಿದೆ, ಅದರ ಬಗ್ಗೆ ಏನೂ ಹೇಳಬೇಕಾಗಿಲ್ಲ, ಮತ್ತು ಮಾನ್ಯ ಅಧ್ಯಕ್ಷರೆ, ಸಮಗ್ರ ಮಹಿಳೆಯರಿಗೆ ಅಪಮಾನವಾಗಿದೆ ಎಂದು ವಿಶ್ವಸುಂದರಿ ಸ್ಪರ್ಧೆಯನ್ನು ನಿಲ್ಲಿಸಬೇಕೆಂದು ಇಡೀ ರಾಜ್ಯದ ಮಹಿಳೆಯರು ಕೂಗಾಡಿದಾಗ ಈ ಸರ್ಕಾರ ವಿಶ್ವಸುಂದರಿ ಸ್ಪರ್ಧೆಯನ್ನು ನಡೆಸಿತು.... ಅಲ್ಲ ಮಹಿಳೆಯರ ಬಗ್ಗೆ....

(ಗೊಂದಲ)

ಶ್ರೀ ಆರ್. ರೋಷನ್ ಬೇಗ್ : ಅದಕ್ಕೆ ಇದಕ್ಕೆ ಏನೂ ಸಂಬಂಧವಿಲ್ಲ, ನೀವು ಹಕ್ಕುಚ್ಯುತಿ ಬಗ್ಗೆ ಮಾತನಾಡಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಸಭಾಧ್ಯಕ್ಷರೆ, ಸರ್ಕಾರದ ಕಡೆಯಿಂದ ಯಾವುದೇ ವಿಶ್ವಸುಂದರಿ ಸ್ಪರ್ಧೆಯನ್ನು ಏರ್ಪಾಡು ಮಾಡಿರಲಿಲ್ಲ, ಅಲ್ಲಿ ಕಾನೂನಿನ ವ್ಯವಸ್ಥೆ ಮಾಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಿತೇ ಹೊರತು ವಿಶ್ವಸುಂದರಿ ಸ್ಪರ್ಧೆಯನ್ನು ಸರ್ಕಾರ ಏರ್ಪಾಡು ಮಾಡಿರಲಿಲ್ಲ; ಆ ರೀತಿಯ ಕೆಲಸ ಸರ್ಕಾರ ಮಾಡಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಭಾಧ್ಯಕ್ಷರೆ, ವಿಶ್ವಸುಂದರಿ ಸ್ಪರ್ಧೆಗೆ ಸರ್ಕಾರ ಎಲ್ಲಾ ಸಂಪೂರ್ಣವಾದಂಥ ಸವಲತ್ತುಗಳನ್ನು ಕೊಟ್ಟು, ಅಲ್ಲಿ ಇಡೀ ಪೊಲೀಸ್ ಇಲಾಖೆಯನ್ನು ನಿಲ್ಲಿಸಿ, ಅದು ಅನ್ಯಾಯ ಎಂದು ಪ್ರತಿಭಟನೆ ಮಾಡಿದಂಥ ಮಹಿಳೆಯರ ತಲೆಯನ್ನು ಹಿಡಿದು ಎಳೆದಂಥದ್ದನ್ನು ನೋಡಿದ್ದೇನೆ.

ಅಧ್ಯಕ್ಷರು : ಒಂದು ನಿಮಿಷ, ವಿಶ್ವ ಸುಂದರಿಗೆ ಇಲ್ಲೇನೂ ಸಂಬಂಧ ಇಲ್ಲ. ಅವಳು ಎಲ್ಲಿದ್ದಾಳೋ ನಮಗೆ ಗೊತ್ತಿಲ್ಲ. ನಮ್ಮ ಮುಂದೆ ಚರ್ಚೆ ಮಾಡಲು ಖಚಿತವಾದ ಬೇರೆ ಒಂದು ವಿಷಯ ಇದೆ. ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆಂದರೆ, ಶ್ರೀಮತಿ ಪ್ರಮೀಳಾ ನೇಸರ್ಗಿಯವರು, ಖಚಿತವಾದ ಆರೋಪಗಳನ್ನು ಮಾಡಿ ಇಂತಹ ವಿಷಯಗಳ ಬಗ್ಗೆ ಎಂದು ಹೇಳಿದ್ದಾರೆ, ಇದು ಈ ಸದನದ ಸದಸ್ಯರಾದ ನಮ್ಮ ಹಕ್ಕಿನ ಚ್ಯುತಿಯಾಗಿದೆಯೆಂದು ಒಂದು, ಎರಡು, ಮೂರು, ನಾಲ್ಕು ಹೀಗೆ ಕಾರಣಗಳನ್ನು ಕೊಟ್ಟು ಹೇಳಿದ್ದಾರೆ. ಶ್ರೀಮಾನ್ ಮೊಯಿಲಿಯವರು, ಮಾತನಾಡತಕ್ಕಂಥ ಸಂದರ್ಭದಲ್ಲಿ ಅದನ್ನು ಸಮರ್ಥಿಸಿದ್ದಾರೆ. ಅವರೂ ಸಹ ಒಂದೊಂದೇ ಘಟನೆ ಹೇಳಿದ್ದಾರೆ, ಅವರು ಕಮಿಟಿ ಛೇರ್ಮನ್ನರಾಗಿ ಮಾಡಿದ ಕೆಲಸದ ಬಗ್ಗೆಯೂ ವಾಖ್ಯಾನ ಮಾಡಿರತಕ್ಕಂಥಾದ್ದು, ಶ್ರೀಮತಿ ಹೇಮಾವತಿಯವರು ಪ್ರಶ್ನೆ ಕಳುಹಿಸಿರುವುದರ ಬಗ್ಗೆ, ಅದು ಹಕ್ಕು ಚ್ಯುತಿ ಆಗುತ್ತದೆಯೇ ಇಲ್ಲವೇ ಅಷ್ಟಕ್ಕೆ ಸೀಮಿತವಾಗಿ ಮಾತನಾಡಿದರೆ ಸಾಕು, ವಿಶ್ವಸುಂದರಿ ವಿಷಯವನ್ನು ಬೇರೆ ಸಂದರ್ಭದಲ್ಲಿ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ವೀರಪ್ಪಮೊಯಿಲಿಯವರು ಮಾತನಾಡಿದಾಗ ಇಡೀ ಸಮಗ್ರ ರಾಜ್ಯದ ಮಹಿಳೆಯರ ಬಗ್ಗೆ, ಅವರ ಸಮಗ್ರ ಕಲ್ಯಾಣದ ಬಗ್ಗೆ ಮಾತನಾಡಿದ್ದಾರೆ. ಅವರು ಮಾತನಾಡಿರುವುದು ಸರಿಯಿಲ್ಲವೆಂದು ನಾನು ಹೇಳುತ್ತಿಲ್ಲ. ಅದನ್ನು ನಾನು ಸಮರ್ಥನೆ ಮಾಡುತ್ತೇನೆ. ಆದರೆ, ಮಾತನಾಡತಕ್ಕಂಥ ಸಂದರ್ಭದಲ್ಲಿ ಮಹಿಳೆಯರ ಬಗ್ಗೆ ನಾವು ಯಾವ ರೀತಿ ನಡೆದುಕೊಂಡಿದ್ದೇವೆ ಎನ್ನುವ ವಿಷಯವನ್ನು ಜ್ಞಾಪಿಸುವುದೇ ಬೇಡ ಅಂತಿರಾ? ಅದರ ಬಗ್ಗೆ ಚರ್ಚೆನೇ ಬೇಡ ಅಂತೀರಾ?

ಶ್ರೀಮತಿ ಎನ್. ಜ್ಯೋತಿರೆಡ್ಡಿ : ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ನಾಗರಾಜ್ ಅವರು, ಇದರ ಬಗ್ಗೆ ಡೆಫಮೇಷನ್ ಕೇಸ್ ಹಾಕುವುದಕ್ಕೆ ಅವಕಾಶ ಇದೆ ಎಂದು ಹೇಳುತ್ತಿದ್ದಾರೆ. ಕೋರ್ಟ್‌ಗೆ ಹೋದಂಥ ಸಂದರ್ಭದಲ್ಲಿ ಏನಾಗುತ್ತದೆಂಬುದು ತಮಗೆಲ್ಲರಿಗೂ ಗೊತ್ತಿದೆ. 302, 307ನೇ ಸೆಕ್ಷನ್ ಪ್ರಕಾರ ಕೇಸ್ ಹಾಕಿಸಿಕೊಂಡವರಿಗೇ ಬೇಲ್ ಸಿಕ್ಕಿ ವಾಪಸ್ ಬರುತ್ತಿದ್ದಾರೆ, ಜೊತೆಗೆ ಆ್ಯಂಟಿಸಿಪೇಟರಿ ಬೇಲ್ ತೆಗೆದುಕೊಂಡು ರಾಜಾರೋಷವಾಗಿ ಓಡಾಡುವಂಥ ವ್ಯವಸ್ಥೆ ಇದೆ. Defamation case is a bailable case ನಾನು ಲಾಯರ್ ಅಲ್ಲ. ಆದರೂ, if I am correct, defamation is a bailable case. ಆ ಪತ್ರಿಕೆ ಮೇಲೆ ನಾವು ಡೆಫಮೇಷನ್ ಕೇಸ್ ಹಾಕಿದಾಗ, ಅವರು ಬೇಲ್ ತೆಗೆದುಕೊಂಡು ಆಚೆ ಬಂದು, ಇಡೀ ಕರ್ನಾಟಕ ಸದನ ನನ್ನನ್ನು ಏನೂ ಮಾಡಲಿಕ್ಕೆ ಯೋಗ್ಯತೆ ಇಲ್ಲ ಎಂದು ಆತ ಓಡಿಕೊಂಡು ತಿರುಗುವಾಗ it is a shame on our part. ಏಕೆ ಈ ಸದನ ಇರಬೇಕು?

ಅಧ್ಯಕ್ಷರು : ಬೆಳಿಗ್ಗೆ ಶ್ರೀಮತಿ ಪ್ರಮೀಳಾ ಅವರು ಮಾತನಾಡುವಾಗ ನಾನು ಸ್ಪಷ್ಟಪಡಿಸಿದ್ದೇನೆ, ಯಾವುದು ಮಾನನಷ್ಟಕ್ಕೆ ಸಂಬಂಧಿಸಿದ ವಿಚಾರ ಇರುತ್ತದೆ ಆ ವಿಚಾರದಲ್ಲಿ ನಿರ್ಣಯವನ್ನು ತೆಗೆದುಕೊಳ್ಳತಕ್ಕಂಥ ವ್ಯಾಪ್ತಿ ನಮಗೆ ಬರುವುದಿಲ್ಲ. ಅದಕ್ಕೆ ಸಂಬಂಧಿಸಿದವರು ಕೋರ್ಟ್‌ಗೆ ಹೋಗಬೇಕಾಗುತ್ತದೆ. ಸದನದ ಸದಸ್ಯರಾಗಿ ಅವರ ಕರ್ತವ್ಯ ನಿರ್ವಹಣೆಗೆ ಯಾವುದೇ ಚ್ಯುತಿ ಉಂಟಾಗಿದ್ದಲ್ಲಿ, ಆ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ, ಚರ್ಚೆ ಮಾಡುವುದಕ್ಕೆ, ನಿರ್ಣಯ ತೆಗೆದುಕೊಳ್ಳುವುದಕ್ಕೆ ಈ ಸದನಕ್ಕೆ ಅರ್ಹತೆ ಇರುತ್ತದೆ. ಅದಕ್ಕಾಗಿ ಈ ನಿರ್ಣಯದ ಬಗ್ಗೆ ಮಾತ್ರ ತಾವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಮಧ್ಯದಲ್ಲಿ ಅದನ್ನು ಒಂದು ಉದಾಹರಣೆಯಾಗಿ ಕೊಟ್ಟೆ ಅಷ್ಟೇ; ಅದನ್ನು ತಪ್ಪು ಎಂದು ಭಾವಿಸಬೇಕಾಗಿಲ್ಲ. ಭಾವನೆಗಳು ಯಾವ ಯಾವ ರೀತಿ ಇದೆ ಎನ್ನುವ ವಿಚಾರವನ್ನು ಹೇಳಿದೆ ಅಷ್ಟೇ. ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಸಾವಿರಾರು ಪತ್ರಿಕೆಗಳು ಇವೆ. ಲಂಕೇಶ್ ಪತ್ರಿಕೆಯಲ್ಲಿ ಬರುವ ಬರವಣಿಗೆ ತರಹವೇ ಬಹಳಷ್ಟು ಪತ್ರಿಕೆಗಳು ಬರೆಯುತ್ತವೆ. ಕರ್ನಾಟಕದ ಒಟ್ಟು 25 ಜಿಲ್ಲೆಗಳಲ್ಲೂ ಪ್ರಿಂಟ್ ಆಗುವ ಪತ್ರಿಕೆಗಳನ್ನೆಲ್ಲಾ ತರಿಸಿದರೆ, ನಾವು ಈ ಶಾಸನ ಸಭೆಯ ಕಾರ್ಯಕಲಾಪಗಳನ್ನು ಬಿಟ್ಟು ಆ ಪತ್ರಿಕೆಗಳಲ್ಲಿ ಬಂದಿರುವ ವಿಷಯಗಳ ಬಗ್ಗೆಯೇ ನಾವು ಚರ್ಚೆ ಮಾಡಿದರೆ ಸುಮಾರು ಹೆಚ್ಚು ಕಡಿಮೆ 5 ವರ್ಷಗಳ ಕಾಲ ಚರ್ಚೆ ಮಾಡಬಹುದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾನು ಮಾತನಾಡಲಿಕ್ಕೆ ತಾವು ಅವಕಾಶ ಕೊಟ್ಟಿದ್ದೀರಿ, ಅವರಿಗೆ ಅವಕಾಶ ಸಿಕ್ಕಿದಾಗ ಅವರು ಮಾತನಾಡಲಿ.

ಅಧ್ಯಕ್ಷರು : ಜ್ಯೋತಿಯವರು ಏನೋ ಮಾತನಾಡುತ್ತಾರೆ, ಏನಮ್ಮಾ ಜ್ಯೋತಿ?

ಶ್ರೀಮತಿ ಎನ್. ಜ್ಯೋತಿ ರೆಡ್ಡಿ : ಮಾನ್ಯ ಗೌರವಾನ್ವಿತ ನಾಗರಾಜ್‌ರವರು ಮಾತನಾಡುತ್ತಾ ರಾಜ್ಯದಲ್ಲಿ ನೂರಾರು ಪತ್ರಿಕೆಗಳು ಇವೆಯೆಂದು ಹೇಳಿದರು. ನಿಜ. ಇವತ್ತು ಯಾರಿಗೆ ಬೇಕೋ ಅವರೆಲ್ಲಾ ಒಂದೊಂದು ಪತ್ರಿಕೆಯನ್ನು ತೆಗೆದು ಅವರಿಗೆ ಇಷ್ಟ ಬಂದ ಹಾಗೆ ಬರೆಯುತ್ತಿದ್ದಾರೆ. ಇಲ್ಲಿ ಬಂದಿರುವಂಥ ಪ್ರಾಬ್ಲಮ್ ಅದಲ್ಲ ಅಧ್ಯಕ್ಷರೆ, ಪರ್ಟಿಕ್ಯುಲರ್ ಆಗಿ ಒಬ್ಬ ರಿಪೋರ್ಟರ್ ಮತ್ತು ಸಂಪಾದಕರು ಏನಿದ್ದಾರೆ, ಅವರು ತಮ್ಮ ಪತ್ರಿಕೆಯಲ್ಲಿ ಹೆಡ್ ಲೈನ್ ಮೂಲಕ ಇಡೀ ಮಹಿಳಾ ಶಾಸಕರುಗಳ ಬಗ್ಗೆ ಕೆಲವು ಅಸಹ್ಯವಾದ ವಿಷಯವನ್ನು ಬರೆದಿದ್ದಾರೆ. ಡೆಫಮೇಷನ್ ಆಗರಲಿ, ಹಕ್ಕು ಚ್ಯುತಿಯಾಗಿರಲಿ, ಏನಾದರೂ ಆಗಿರಲಿ, ಅದನ್ನು ಪಾಯಿಂಟ್ ಔಟ್ ಮಾಡಬೇಡಿ ಎಂದು ಅವರನ್ನು ಕೇಳಿಕೊಳ್ಳುತ್ತಿದ್ದೇನೆ. ಇಡೀ ಮಹಿಳಾ ಶಾಸಕರ ಬಗ್ಗೆ, ಮತ್ತು ಇನ್ನು ಮುಂದಕ್ಕೆ ಶೇಕಡಾ 33 ರಷ್ಟು ಮಹಿಳೆಯರು ಏನು ಬರಬೇಕಾಗಿದೆ. ಈ ಉದ್ದೇಶದ ಬಗ್ಗೆ ಎಲ್ಲಾ ಪಕ್ಷದವರೂ ಒಪ್ಪಿದ್ದಾರೆ. ಇಂಥ ಸಮಯದಲ್ಲಿ, ಯಾರೋ ಪತ್ರಿಕೆಯವರು ಏನೋ ಬರೆದರು, ಅದರ ಬಗ್ಗೆ ದೊಡ್ಡದಾಗಿ ಇಶ್ಯೂ ಮಾಡಿ ಕೂಗಾಡಿಕೊಂಡರು ಎನ್ನುವ ಭಾವನೆ ಬರುವುದು ಬೇಡ. ಯಾರು ಈಗ ಕ್ರೈಮ್ ಮಾಡಿದ್ದಾರೆ

ಮತ್ತು ಯಾರ ಬಗ್ಗೆ ನಾವು ಪರ್ಟಿಕ್ಯುಲರ್ ಆಗಿ ಮಾತನಾಡುತ್ತಿದ್ದೇವೆ, ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೊರಟಿದ್ದೇವೆಯೇ ಹೊರತು, ಎಲ್ಲಾ ಪತ್ರಿಕೆಗಳು, ಅದರಲ್ಲಿ ಯಾರು ಯಾರು ಏನೇನು ಬರೆದಿದ್ದಾರೆ ಎಂಬ ಬಗ್ಗೆ ನಾವು ಮಾತನಾಡುವುದಕ್ಕೆ ಹೋಗಿಲ್ಲ. ಆದ್ದರಿಂದ, ಮಾನ್ಯ ನಾಗರಾಜ್‌ರವರಿಗೂ ಅಕ್ಕ ತಂಗಿಯವರು ಇದ್ದಾರೆ, ಹೆಣ್ಣು ಮಕ್ಕಳು ಇದ್ದಾರೆ, ಅವರಿಗೆ ಹೆಣ್ಣು ಮಕ್ಕಳು ಇದ್ದಾರೋ ಇಲ್ಲವೊ ನನಗೆ ಗೊತ್ತಿಲ್ಲ. ದಯವಿಟ್ಟು take it in a broad sense. ನಮ್ಮ ನೋವವನ್ನು ಅರ್ಥ ಮಾಡಿಕೊಳ್ಳಬೇಕು. ಏನೋ ಮಾತನಾಡಬೇಕು, ಖಂಡನೆ ಮಾಡಬೇಕು ಎನ್ನುವ ಉದ್ದೇಶ ಬೇಡ ಅವರಿಗೆ. ದಯವಿಟ್ಟು ಅರ್ಥ ಮಾಡಿಕೊಂಡು ನಾವು ಏನು ಹಕ್ಕುಚ್ಯುತಿಯನ್ನು ಮಂಡನೆ ಮಾಡಿದ್ದೇವೆ, ಅದಕ್ಕೆ ಸಂಪೂರ್ಣ ಸಹಕಾರ ಕೊಡಬೇಕು. ಅವರು ಇನ್ನೇನೂ ಮಾತನಾಡುವುದಕ್ಕೆ ಹೋಗಬಾರದು.

ಶ್ರೀ ವಾಟಾಳ್ ನಾಗರಾಜ್ : ನಾನು ಏನು ಮಾತನಾಡಬಾರದೆಂದು ಹೇಳಿದರೆ, ಈ ಸದನದಲ್ಲಿ ಅದೊಂದು ಹಕ್ಕು ಚ್ಯುತಿ ಆಗುತ್ತದೆ. ಅದು ಆಗಬಾರದು.

ಅಧ್ಯಕ್ಷರು : ಅವರು ಆರ್ಡರ್ ಮಾಡಿಲ್ಲ. ದಯವಿಟ್ಟು ಎಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ತಾವು ಏನು ತಿಳಿದುಕೊಂಡುಬಿಟ್ಟಿದ್ದೀರೆಂದರೆ ನಾನು ಈ ರೀತಿ ಮಾತನಾಡಿದ ತಕ್ಷಣ, ವಾಟಾಳ್ ನಾಗರಾಜ್ ಮಹಿಳೆಯರ ವಿರುದ್ಧವೇನೋ ಎನ್ನುವ ಭಾವನೆ ಬರತಕ್ಕಂಥಾದ್ದು ಇದೆಯಲ್ಲಾ, ಅದು ಸರಿಯಲ್ಲ ನನಗೂ ಮಗಳು ಇದ್ದಾಳೆ, ನನಗೂ ಹೆಂಡತಿ ಇದ್ದಾಳೆ. ನನಗೆ ಅವರಿಲ್ಲವೆಂದು ತಿಳಿದುಕೊಳ್ಳುವುದು ಬೇಡ. ನನ್ನನ್ನು ಶ್ರೀರಾಮರೆಡ್ಡಿ ತರಹ ಎಂದು ತಿಳಿದುಕೊಳ್ಳುವುದು ಬೇಡ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಯಾವ ಯಾವುದಕ್ಕೋ ನನ್ನನ್ನು ತೆಗೆದುಕೊಂಡು ಬಂದು ಏಕೆ ಬಲಿಪಶು ಮಾಡುತ್ತಾರೆಂದರೆ ಗೊತ್ತಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಶ್ರೀ ರಾಮರೆಡ್ಡಿಯವರಿಗೆ ತಾಯಿಯವರು ಇದ್ದಾರೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನನಗೆ ತಾಯಿ ಇದ್ದಾರೆ, ಅತ್ತಿಗೆ ಇದ್ದಾರೆ, ಅಕ್ಕ ಇದ್ದಾರೆ, ಎಲ್ಲರೂ ಇದ್ದಾರೆ.

ಅಧ್ಯಕ್ಷರು : ದಯಮಾಡಿ ಎಲ್ಲಾ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಸಾಮಾನ್ಯವಾಗಿ ಬಿಗು ವಾತಾವರಣ ಇದ್ದಾಗ ಸ್ವಲ್ಪ ಹಾಸ್ಯ ಮಾಡತಕ್ಕಂಥ ಪ್ರವೃತ್ತಿ ನನ್ನಲ್ಲಿ ಇದ್ದರೂ ಕೂಡಾ, ಈ ದಿವಸಕ್ಕೆ ದಯಮಾಡಿ ಯಾರೂ ಕೂಡ ಆ ಕೆಲಸಕ್ಕೆ ಪ್ರಯತ್ನಪಡತಕ್ಕಂಥಾದ್ದು ಬೇಡ. ಬಹಳ ತೀವ್ರವಾದಂಥ ಸನ್ನಿವೇಶದಲ್ಲಿ ನಾವು ಇದ್ದೇವೆ. ದಯಮಾಡಿ ತಾವು ವಿಷಯಕ್ಕೆ ಬನ್ನಿ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಲಂಕೇಶ್ ಒಬ್ಬ ಪ್ರತಿಭಾನ್ವಿತ ವ್ಯಕ್ತಿ. ಯಾರೂ ಅದನ್ನು ತಳ್ಳಿಹಾಕುವ ಹಾಗಿಲ್ಲ ಮತ್ತು ಅಲ್ಲಗೆಳೆಯುವಂತಿಲ್ಲ. ಒಳ್ಳೆಯ ದೊಡ್ಡ ಸಾಹಿತಿ, ಕೇಂದ್ರ ಅಕಾಡಮಿ

ಪ್ರಶಸ್ತಿ ಕೂಡಾ ಅವರಿಗೆ ಬಂದಿದೆ. ಅವರ ಪತ್ರಿಕೆಯಲ್ಲಿ ಇಡೀ 5 ವರ್ಷಗಳ ಕಾಲ ನನ್ನ ವಿರುದ್ಧ ಬರೆದು ಟೀಕೆ ಮಾಡಿದ್ದಾರೆ. ಒಂದಲ್ಲ, ಎರಡಲ್ಲ ಅನೇಕ ಬಾರಿ ಟೀಕೆ ಮಾಡಿದ್ದಾರೆ. ಅದರ ಬಗ್ಗೆ ನಾನು ಯಾವತ್ತೂ ಸಹಾ, ನನ್ನನ್ನು ಟೀಕೆ ಮಾಡಿದ್ದಾರೆಂದು ಈ ಸದನದಲ್ಲಿ ಕುಳಿತುಕೊಂಡು ಮಾತನಾಡಿಲ್ಲ. ತಾವೇ ಒಂದು ದಿವಸ ಜ್ಞಾಪಿಸಿ, ಮಾಜಿ ಮಂತ್ರಿಯವರಾದ ಶ್ರೀಮಾನ್ ಜೀವರಾಜ್ ಆಳ್ವ ಅವರು ನಿರಂತರವಾಗಿ ಆ ಪತ್ರಿಕೆ ಬಗ್ಗೆ ಮಾತನಾಡುತ್ತಿದ್ದಂಥ ಸಂದರ್ಭದಲ್ಲಿ ತಾವು ಏನು ಹೇಳಿದರೆಂದು ಇನ್ನೂ ನನಗೆ ಜ್ಞಾಪಕ ಇದೆ. ಆ ಪತ್ರಿಕೆ ಉದಯವಾದಾಗಿನಿಂದ ಇಲ್ಲಿಯವರೆಗೂ ವಾಟಾಳ್ ನಾಗರಾಜ್‌ರವರ ಬಗ್ಗೆ ನಿರಂತರವಾಗಿ ಬಯ್ದು ಬರೆದಿದ್ದಾರೆ ಅವರೇ ಮೌನವಾಗಿ ಕುಳಿತಿದ್ದಾರೆ, ತಾವು ಆವೇಶರಾಗಿದ್ದೀರಿ ಎನ್ನುವ ಮಾತನ್ನು ತಾವು ಆವಾಗ ಹೇಳಿದ್ದಿರಿ. ಇದನ್ನು ಮತ್ತೆ ತಮಗೆ ಜ್ಞಾಪಿಸುತ್ತಿದ್ದೇನೆ. ಈ ಪ್ರಶ್ನೆಯನ್ನು ಇಷ್ಟೊಂದು ಗಾಢವಾಗಿ, ಸಮಗ್ರವಾಗಿ ಚರ್ಚೆ ಮಾಡುವುದು ಅವಶ್ಯಕತೆ ಇದೆಯೇ ಎನ್ನುವ ಸಮಸ್ಯೆಯನ್ನು ನನ್ನನ್ನು ಕಾಡುತ್ತಿದೆ. ಈ ರೀತಿ ಸಮಗ್ರವಾಗಿ ಚರ್ಚೆ ಮಾಡಬೇಕಾದರೆ, ಈ 5 ವರ್ಷಗಳಲ್ಲಿ ಈ ರೀತಿ ಯಾರ ಮೇಲೂ ಬರೆದಿಲ್ಲವೊ? ಇಡೀ 5 ವರ್ಷಗಳಲ್ಲಿ ಪ್ರತಿ ವಾರದ ಪತ್ರಿಕೆಯಲ್ಲೂ ಒಂದಲ್ಲ ಒಂದು ಟೀಕೆ ಮಾಡಿದ್ದಾರೆ. ಆವತ್ತಿನಿಂದ ಇಲ್ಲಿಯವರೆಗೆ ಸುಮಾರು 500, ಅಥವಾ 1000 ಹಕ್ಕು ಚ್ಯುತಿಯಾಗತಕ್ಕಂಥ ಟೀಕೆಗಳು ಬಂದಿವೆ. ಮಂತ್ರಿಗಳ ಮೇಲೆ, ಶಾಸಕರುಗಳ ಮೇಲೆ, ಸಾರ್ವಜನಿಕರುಗಳ ಮೇಲೆ, ಸಾಹಿತಿಗಳ ಮೇಲೆ, ಕವಿಗಳ ಮೇಲೆ, ಮಠಾಧಿಪತಿಗಳ ಮೇಲೆ ಹೀಗೆ ಎಲ್ಲರ ಮೇಲೂ ಒಂದಲ್ಲ ಒಂದು ರೀತಿಯಲ್ಲಿ ಬರೆದೇ ಇದ್ದಾರೆ. ಅವರು ಯಾರನ್ನೂ ಬಿಟ್ಟಿಲ್ಲ, ಎಲ್ಲರ ಮೇಲೂ ಬರೆದಿದ್ದಾರೆ. ಅದೆಲ್ಲವನ್ನೂ ತೆಗೆದರೆ, ಹೆಜ್ಜೆ ಹೆಜ್ಜೆಗೂ, ನಿಮಿಷ ನಿಮಿಷಕ್ಕೂ ಆ ಪತ್ರಿಕೆಯನ್ನು ಹಕ್ಕು ಚ್ಯುತಿಗೆ ಸಿಕ್ಕಿಸಬಹುದು. ಈಗ ನಾನು ಏನು ಹೇಳುತ್ತಿದ್ದೇನೆಂದರೆ, ಇದನ್ನು ಈಗ ಭೂತ ಮಾಡುತ್ತಿದ್ದೇವೆ, ರಸ್ತೆಯಲ್ಲಿ ಹೋಗತಕ್ಕಂಥಾದ್ದು ಈ ಸಭೆಯೊಳಗೆ ತಂದು ಭೂತವನ್ನು ಸೃಷ್ಟಿ ಮಾಡುತ್ತಿದ್ದೇವೆ. ತಕ್ಷಣ ಇದನ್ನು ತಿರಸ್ಕರಿಸಿದ್ದೇವೆಂದು ಹೇಳಬೇಕು. ಕಿತ್ತೂರಿ ರಾಣಿಯಂಥ ವೀರ ರಾಣಿ ಹುಟ್ಟಿದಂಥ ಮತ್ತು ಅಕ್ಕಮಹಾದೇವಿ ಹುಟ್ಟಿದಂಥ ಈ ಕರ್ನಾಟಕದಲ್ಲಿ ಇಂಥಾ ಬರವಣಿಗೆಗೆ ನಾವು ಏಕೆ ಬೆಲೆ ಕೊಡಬೇಕು?

ಶ್ರೀ ಎನ್. ರಾಜಣ್ಣ : ಅಕ್ಕಮಹಾದೇವಿಯವರು ಈಗ ಇದ್ದಿದ್ದರೆ, ಅವರಿಗೂ ಇದೇ ಪರಿಸ್ಥಿತಿ ಬರುತ್ತಿತ್ತು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಪಾಯಿಂಟ್ ಆಫ್ ಆರ್ಡರ್, ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿರತಕ್ಕಂಥ ಅಂಶದಲ್ಲಿ, ಈ ಪತ್ರಿಕೆಯು ಕಳೆದ 5 ವರ್ಷಗಳಿಂದ ಎಲ್ಲರ ಮೇಲೂ ಸಾಕಷ್ಟು ಬರೆದಿದೆ ಎಂದು ಹೇಳಿದ್ದಾರೆ. ಭಾರತದ ಶ್ರೇಷ್ಠವಾದಂಥ ಲೋಕಸಭೆಯಲ್ಲಿ ಮಹಿಳೆಯರಿಗೆ 33 ಪರ್‌ಸೆಂಟ್‌ನಷ್ಟು ಮೀಸಲಾತಿಯ ಬಗ್ಗೆ ಬಿಲ್ ಚರ್ಚೆಯಾಗತಕ್ಕಂಥ ಸಂದರ್ಭದಲ್ಲಿ, ಅದನ್ನು ಇವೊತ್ತಿನ ದಿವಸ ಹೆಡ್ಡಿಂಗ್‌ನಲ್ಲಿ ಅವರು ಬರೆದಿರತಕ್ಕಂಥಾದ್ದು. ಇವೊತ್ತು ಪತ್ರಿಕೆಯಲ್ಲಿ ಬಂದಿರತಕ್ಕಂಥ ಹೆಡ್ಡಿಂಗ್ ನೋಡಿದಾಗ 33 ಪರ್‌ಸೆಂಟ್‌ನಷ್ಟು ರಾಜಕೀಯ ಮೀಸಲಾತಿಯು ಮಹಿಳೆಯರಿಗೆ ಇಷ್ಟಕ್ಕೆ ನಿಂತಿರತಕ್ಕಂಥದ್ದು ಎಂದು ಹೇಳಿದ್ದಾರಲ್ಲಾ, ಅದು ನಮಗೆ ಬಹಳ ನೋವಾಗಿದೆ.

ಕಾಕತಾಳೀಯನ್ಯಾಯ ಇವೊತ್ತಿನ ದಿವಸ ಆಗಿದೆ. ಭಾರತ ದೇಶದಲ್ಲಿ ಮಹಿಳೆಯರಿಗೆ ಮೀಸಲಾತಿಯನ್ನು ನೀಡುವ ಬಗ್ಗೆ ಮೊದಲನೇ .ಬೀಜವನ್ನು ಬಿತ್ತಿರತಕ್ಕಂಥಾದ್ದು ಕರ್ನಾಟಕದಲ್ಲಿ. ರಾಜಕೀಯದಲ್ಲಿ ನಾವೇನು ಇವೊತ್ತಿನ ದಿವಸ ಆಶೆಯನ್ನು ಇಟ್ಟುಕೊಂಡಿದ್ದೇವೆ, ಯಾವುದಕ್ಕಾಗಿ ಹೋರಾಟ ಮಾಡುತ್ತಾ ಇದ್ದೇವೆ, ಅದಕ್ಕೆ ತಥ್‌ವಿರುದ್ಧವಾಗಿ ಮಹಿಳೆಯರು ರಾಜಕೀಯಕ್ಕೆ ಬಾರದ ಹಾಗೆ, ಚಾರಿತ್ರ್ಯ ವಧೆಯನ್ನು ಮಾಡಿ ಇಲ್ಲಿಗೇ ಮುಗಿಸಿ ಬಿಟ್ಟರೆ ಯಾರೂ ಮುಂದಕ್ಕೆ ರಾಜಕೀಯಕ್ಕೆ ಬಾರದೇ ಇರತಕ್ಕಂಥ ಪ್ರಸಂಗ ಇವತ್ತು ಉದ್ಭವವಾಗಿದೆ. ಪತ್ರಿಕೆಯ ಹೇಳಿಕೆಯ ಬಗ್ಗೆ ನಾವು ಇವೊತ್ತು ಎಚ್ಚರಿಕೆ ವಹಿಸುತ್ತಾ ಇದ್ದೇವೆ ಎಂದು ಹೇಳಬಯಸುತ್ತೇನೆ.

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಅಧ್ಯಕ್ಷರೇ, ಶೇಕಡಾ 33 ಭಾಗ, ಮಹಿಳೆಯರಿಗೆ ಲೋಕ ಸಭೆಯಲ್ಲಿ, ಶಾಸನಸಭೆಯಲ್ಲಿ, ಮೀಸಲಾತಿಯನ್ನು ಕೊಡುವುದಕ್ಕೆ ನನ್ನ ತಕರಾರು ಏನೂ ಇಲ್ಲ. ಅದಕ್ಕೆ ನನ್ನ ಸಂಪೂರ್ಣ ಬೆಂಬಲವು ಇದೆ. 33 ಅಲ್ಲ 40 ಮಾಡಿದರೂ ನನ್ನ ಅಭ್ಯಂತರವೇನೂ ಇಲ್ಲ. ಈಗಲೇ ಬೇಕಾದರೆ ಆ ನಿರ್ಣಯವನ್ನು ತನ್ನಿ ನನ್ನ ಸಂಪೂರ್ಣವಾದ ಮತವನ್ನು ಕೊಡುತ್ತೇನೆ. ಆ ಬಗ್ಗೆ ನನ್ನ ತಕರಾರು ಇಲ್ಲ. ನಾನು ತಕರಾರು ಹೇಳುತ್ತಿದ್ದೇನೆ ಎಂದು ತಾವು ತಪ್ಪು ತಿಳಿದುಕೊಳ್ಳಬಾರದು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ತಮ್ಮ ತಪ್ಪು ಇದೆಯೆಂದು ನಾನು ಹೇಳುತ್ತಿಲ್ಲ. ಪತ್ರಿಕೆಯವರು ಈ ರೀತಿಯಾಗಿ ಹೈಲೈಟ್ ಮಾಡಿ ಅದಕ್ಕೆ ತಕರಾರುಗಳನ್ನು ಒಡ್ಡುತ್ತಿದ್ದಾರೆ ಎಂಬುದು ನಮ್ಮ ಭಾವನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನಾವು ಭೂತವನ್ನು ಸೃಷ್ಟಿ ಮಾಡುತ್ತಾ ಇದ್ದೇವೆ. ಈ ಭೂತಕ್ಕೆ ಕೈ-ಕಾಲು ಕೊಟ್ಟು ಹೊಸ ರೂಪವನ್ನು ಕೊಡುತ್ತಾ ಇದ್ದೇವೆ. ಇದನ್ನು ಯಾವುದೋ ಒಂದು ಹಂತದಲ್ಲಿ ತಳ್ಳಿ ಹಾಕಬಹುದಾಗಿತ್ತು. ಬ್ರಹ್ಮಾಸ್ತ್ರವನ್ನು ಯಾವ ಸಂದರ್ಭದಲ್ಲಿ ಉಪಯೋಗಿಸಬೇಕು ಎಂಬುದನ್ನು ಮರೆತು ಎಲ್ಲೋ ಹೋಗುತ್ತಾ ಇದ್ದೇವೆ ಎನ್ನತಕ್ಕಂಥಾದ್ದು ನನ್ನ ಭಾವನೆ. ಈ ನಿರ್ಣಯಕ್ಕೆ ಬೆಂಬಲ ಕೊಟ್ಟರೆ ಇವರ ಬೆಂಬಲ. ಇಲ್ಲದಿದ್ದರೆ ಮಹಿಳಾ ಕುಲಕ್ಕೆ ನಾನು ವಿರೋಧ ಎನ್ನುವ ಭಾವನೆಯು ಇಲ್ಲಿ ಕೆಲವರಿಗೆ ಏನಿದೆ, ಆ ಭಾವನೆಗಿಂತ ಹೆಚ್ಚಾಗಿ, ಈ ಸದನವು ಈ ರೀತಿಯಾಗಿ ಬೆಳಿಗ್ಗೆಯಿಂದ ಇಲ್ಲಿಯವರೆಗೆ ಕುಳಿತುಕೊಂಡು ಯಾವುದೋ ಒಂದು ಪತ್ರಿಕೆಯಲ್ಲಿ ಬಂದಂಥ ವಿಚಾರವನ್ನು ತಾವು ಗಮನಕ್ಕೆ ತೆಗೆದುಕೊಳ್ಳದೆ, ತಾವೆಲ್ಲರೂ ಅದನ್ನು ತಿರಸ್ಕರಿಸಬೇಕಾಗಿತ್ತು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಇದೊಂದು ಬಾರಿ ಅಲ್ಲ. ಎಷ್ಟೋ ಬಾರಿ ಈ ಸದನದ ಸಮಯವನ್ನು ಹಾಳು ಮಾಡಿದ್ದಾರೆ. ಆ ಬಗ್ಗೆ ಬೇಕಾದಷ್ಟು ದಾಖಲೆಗಳಿವೆ. ಕೆಲಸಕ್ಕೆ ಬಾರದ ವಿಷಯಗಳನ್ನು ಎತ್ತಿಕೊಂಡು ಎಷ್ಟು ದಿವಸಗಳ ಕಾಲ ಇಲ್ಲಿ ಹಾಳು ಮಾಡಿದ ಬಗ್ಗೆ ದಾಖಲೆಗಳು ಇದ್ದಾವೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ನನ್ನನ್ನು ಒಬ್ಬನನ್ನು ಬಿಟ್ಟು ಇಡೀ ಸದನವೇ ಒಂದು ಪತ್ರಿಕೆಯ ಎದುರು ನಿಂತಿರತಕ್ಕಂಥಾದ್ದು ಒಂದು ಆಶ್ಚರ್ಯ. ಇದು ಬಹಳ ಆಶ್ಚರ್ಯ ಅದರಲ್ಲೇನೂ ಬೇರೆ

ಮಾತಿಲ್ಲ. ಮಾನ್ಯ ಸಚಿವೆಯವರು ನಾನು ಮಾತನಾಡಿದ ಮೇಲೆ ಮಾತನಾಡಲಿ ತಮಗೆ ಹಕ್ಕು ಇದೆ. ನನಗೆ ಕೂಡ ಇಲ್ಲಿ ಮಾತನಾಡತಕ್ಕಂಥ ಅವಕಾಶ ಇದೆ. ನಾನು ಮಾತನಾಡಿದ ಮೇಲೆ ತಾವು ದಯಮಾಡಿ ಮಾತನಾಡಿ.

ಅಧ್ಯಕ್ಷರು : ನಾಗರಾಜ್‌ರವರೇ, ನಾನು ಒಂದು ಮಾತನ್ನು ಹೇಳುತ್ತೇನೆ. ತಾವುಗಳು ಬಹಳ ಹಿರಿಯ ಸದಸ್ಯರು. ತಾವು ಇಡೀ ಸದನ ಆ ಪತ್ರಿಕೆಯ ಮೇಲೆ ಬಿದ್ದಿದೆ ಎಂದಿದ್ದೀರಿ. ಇದು ಯುದ್ಧವೇನಲ್ಲ. ನನ್ನ ಒಬ್ಬನನ್ನು ಬಿಟ್ಟು ಇಡೀ ಸದನವೇ ಆ ಪತ್ರಿಕೆಯ ಮೇಲೆ ಬಿದ್ದಿದೆ ಎಂದು ಹೇಳಿದ್ದೀರಿ. ತಾವು ದಯಮಾಡಿ ಕೇಳಿ, ಇಲ್ಲಿ ಒಂದು ನಿರ್ಣಯವನ್ನು ಮಂಡಿಸಿದ್ದಾರೆ, ನಿರ್ಣಯವು ಚರ್ಚೆಗೆ ಬರುತ್ತಾ ಇದೆ,....

ಶ್ರೀ ವಾಟಾಳ್ ನಾಗರಾಜ್ : ಯುದ್ಧ ಅಂದರೆ ನೇರವಾಗಿ ಕತ್ತಿ ತೆಗೆದುಕೊಂಡು ಹೋಗಿ ಹೊಡೆಯ ಬೇಕಾಗಿಲ್ಲ. ಆ ಪ್ರಶ್ನೆ ಬೇರೆ ಇರಲಿ. ನಾನು ಅದರ ವಿವರಕ್ಕೆ ಹೋಗುವುದಿಲ್ಲ. ಇಂಥ ಸಂದರ್ಭದಲ್ಲಿ ನಾವು ಇದನ್ನು ತಳ್ಳಿಹಾಕತಕ್ಕಂಥಾದ್ದು ಒಂದು. ನಮ್ಮಲ್ಲಿ ಪತ್ರಿಕಾ ಸ್ವಾತಂತ್ರ್ಯ ಇದೆ. ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಅನೇಕ ವಿರ್ಮಶೆಗಳು, ಚಿಂತನೆಗಳು ಇವೆ. ನಾನು ಅವರು ಬರೆದಿರುವುದು ಸರಿ ಎಂದು ಹೇಳುತ್ತಾ ಇಲ್ಲ. ದಯಮಾಡಿ ತಾವುಗಳು ತಪ್ಪು ತಿಳಿದುಕೊಳ್ಳಬೇಡಿ. ಆದರೆ ಈ ಚರ್ಚೆಯು ಇವೊತ್ತು ಬೇಕೇ ಎಂಬುದನ್ನು ಹೇಳುತ್ತಿದ್ದೇನೆ.

ಶ್ರೀ ಕೆ. ಎಂ. ಕೃಷ್ಣಮೂರ್ತಿ (ಕಡೂರು) : ಒಂದು ವೇಳೆ ನಿಮ್ಮ ಮನೆಯವರ ಮೇಲೆ ಹೀಗೆ ಬರೆದಿದ್ದರೆ ನೀವು ಹಕ್ಕುಚ್ಯುತಿ ತರುತ್ತಿರಲಿಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ನನ್ನ ಮನೆಯವರ ಮೇಲೆ ಬರೆದಿದ್ದರೆ ನಾನು ಹಕ್ಕುಚ್ಯುತಿ ತರುತ್ತಿರಲಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅವರು ಈ ಸದನದ ಸದಸ್ಯರು ಅಲ್ಲ ಎಂಬ ಕಾರಣಕ್ಕೆ ತಾವು ಹಕ್ಕುಚ್ಯುತಿ ತರುತ್ತಿರಲಿಲ್ಲ ಅಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ಈಗ ಮಾನ್ಯ ಸದಸ್ಯರು ನನ್ನನ್ನು ಹಾಗೆ ಕೇಳಿದರು ಎಂದು ನಾನು ಹಾಗೆ ಹೇಳಿದೆ. ಈ ನನ್ನ ಮಾತುಗಳು ಬಹಳ ಜನರಿಗೆ ಹಿಡಿಸದೇ ಇರಬಹುದು, ನನ್ನ ಮೇಲೆ ಕೋಪತಾಪಗಳು ಬಂದಿರಬಹುದು. ಆದರೂ ನಾನು ಅದರ ಬಗ್ಗೆ ಚಿಂತೆಪಡುವುದಿಲ್ಲ. ಬಹಳ ಜನರಿಗೆ ಕೋಪತಾಪ ಇದೆ ಎಂದು ನನಗೆ ಗೊತ್ತಿದೆ. ಆ ಕೋಪತಾಪಕ್ಕೆ ನಾನು ಚಿಂತಿಸುವುದಿಲ್ಲ. ನಾನು ಇಲ್ಲಿನ ಸದಸ್ಯನಾಗಿದ್ದೇನೆ. ನನ್ನ ಹಕ್ಕನ್ನು ನಾನು ತಮ್ಮ ಮೂಲಕ ಪಡೆದುಕೊಂಡಿದ್ದೇನೆ. ವಾಟಾಳ್ ನಾಗರಾಜ್ ಈ ರೀತಿಯಾಗಿ ಮಾತನಾಡುತ್ತಿದ್ದಾರೆ ಎಂದು ಯಾರೂ ನನ್ನ ಬಗ್ಗೆ ಕೋಪಮಾಡಬೇಕಾಗಿಲ್ಲ ಮತ್ತು ನನ್ನ ಬಗ್ಗೆ ಕರುಣೆಯೂ ಬೇಕಾಗಿಲ್ಲ, ಇದು ಸ್ಪಷ್ಟ. ಅದರ ಬಗ್ಗೆ ಯಾವು ಚಿಂತನೆಯೂ ಇಲ್ಲ. ಅದ್ದರಿಂದ ಈ ಪ್ರಸ್ತಾವನೆಯನ್ನು ಕಳುಹಿಸಿ, ಬೆಳಿಗ್ಗೆ ಇಂದ ಸಂಜೆಯವರೆಗೆ ಇಲ್ಲಿ ಚರ್ಚೆ ಮಾಡಿ, ಇನ್ನೇನು ನೇಣುಗಂಬಕ್ಕೆ ತೆಗೆದುಕೊಂಡು ಹೋಗುತ್ತೇವೆ ಎಂಬ ಧಾಟಿಯಲ್ಲಿ ತೆಗೆದುಕೊಂಡು ಹೋಗತಕ್ಕಂಥ

ಪರಿಸ್ಥಿತಿ ನನಗೆ ಸರಿಕಾಣಲಿಲ್ಲ. ನಾನು ಸುಮಾರು 1967 ರಿಂದ ಸದಸ್ಯನಾಗಿದ್ದೇನೆ. ಆದ್ದರಿಂದ ನನಗೆ ಇದು ಅಷ್ಟು ಉಚಿತವಾಗಿ ಕಂಡಿಲ್ಲ. ಈ ಪ್ರಸ್ತಾವನೆಯ ಬಗ್ಗೆ ನಾನು ಅದನ್ನು ಬೆಂಬಲಿಸತಕ್ಕಂಥ ಮನುಸ್ಸು ನನಂಗತೂ ಇಲ್ಲ. ನಾನು ಬಹಳ ಮಾತನಾಡ ಬೇಕೆಂದಿದ್ದರೂ ತಾವು....

ಶ್ರೀ ಕೆ. ಎಂ. ಕೃಷ್ಣಮೂರ್ತಿ (ಕಡೂರು) : ಮಹಿಳೆಯ ವಿರುದ್ಧ ಬಂದಂಥ ಲೇಖನದ ವಿರುದ್ಧ ಸಭೆಯಲ್ಲಿ ಒಂದು ಪ್ರಸ್ತಾವನೆಯನ್ನು ತಂದಂಥ ಸಂದರ್ಭದಲ್ಲಿ ನೀವು ಬೆಂಬಲಿಸದೇ ಇದ್ದರೆ ಅದು ನಿಮಗೆ ಶೇಮ್...ಏಕೆಂದರೆ ನಮ್ಮ ಸಮಾಜದಲ್ಲಿ ಮಹಿಳೆಯರಿಗೆ ಅಪಾರ ಗೌರವವಿದೆ.

ಶ್ರೀ ವಾಟಾಳ್ ನಾಗರಾಜ್ : ನಾನು ಮಹಿಳೆಯರ ವಿರುದ್ಧ ಇಲ್ಲ ಎಂದು ಹೇಳುತ್ತಾ ಇದ್ದೇನೆ. ನೀವು ಹೇಳುತ್ತಿರುವುದಾದರೂ ಏನು? ನಾವು ಇಲ್ಲಿ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ, ಎಲ್ಲಾ ಶಾಸಕರುಗಳನ್ನು ಗೋಡೆಯ ಪಕ್ಕದಲ್ಲಿ ನಿಂತು ಬೈಯ್ಯುತ್ತಾರೆ. ಅದನ್ನು ಕೇಳಿಸಿಕೊಂಡು ಇಲ್ಲಿ ಬಂದು ಹಕ್ಕುಚ್ಯುತಿ ಮಾಡಲು ಆಗುತ್ತದೆಯೇ?

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ನಾಗರಾಜ್‌ರವರೇ, ಎಲ್ಲರೂ ಇದರ ಬಗ್ಗೆ ಚಿಂತನೆ ಮಾಡುವಾಗ ತಾವೊಬ್ಬರು ವಿರುದ್ಧವಾಗಿ ಮಾತನಾಡುವುದು .....

ಶ್ರೀ ವಾಟಾಳ್ ನಾಗರಾಜ್ : ಹೌದು ಅದೇ ನನ್ನ ವಿಶೇಷ...... ನಾನು ನಿನ್ನೆ ಮೊನ್ನೆ ಬಂದಿರತಕ್ಕಂಥ ಶಾಸಕನಲ್ಲ. 1967 ರಿಂದ ಇಲ್ಲಿ ಇದ್ದೇನೆ. ನೀವು ಏನೇ ಹೇಳಿದರೂ ನನ್ನ ಮಾತನ್ನು ತಡೆಯಲು ಆಗುವುದಿಲ್ಲ. ನನಗೂ ಗೊತ್ತಿದೆ. ಏನು ಮಾತನಾಡಬೇಕು ಮತ್ತು ಯಾವರೀತಿಯಲ್ಲಿ ಮಾತನಾಡಬೇಕೆಂದು ಗೊತ್ತಿದೆ. ನಾನು ಮಾತನಾಡಿರತಕ್ಕಂಥ ಒಂದು ಪದದಲ್ಲಿಯೂ ಮಹಿಳೆಯರ ಬಗ್ಗೆ ಒಂದು ಅಕ್ಷರವನ್ನು ಕೂಡ ಪ್ರಾಮಾಣಿಕವಾಗಿ ಟೀಕೆ ಮಾಡಿಲ್ಲ. ಆದರೆ ಈಗ ನಾನು ಪರಿಸ್ಥಿತಿಯನ್ನು ವಿಶ್ಲೇಷಣೆ ಮಾಡುತ್ತಾ ಇದ್ದೇನೆ. ಅದು ನಿಮಗೆ ಅರ್ಥವಾಗಲಿಲ್ಲ, ಅದರ ಬಗ್ಗೆ ನನ್ನ ವ್ಯಾಖ್ಯಾನ ಸರಿಯಾಗಿಲ್ಲ ಅಂದರೆ, ನನ್ನ ಬಾಯಿ ಮುಚ್ಚಿಸತಕ್ಕಂಥ ನೀತಿಯು ಏನಿದೆ, ಅದು ಒಳ್ಳೆಯದಲ್ಲ ಎನ್ನುವ ಮಾತನ್ನು ಹೇಳಿ, ನನ್ನ ಮನಸ್ಸಿನ ನೋವನ್ನು ಹೇಳಿಕೊಂಡು, ಮಹಿಳೆಯರು ನಿಮ್ಮ ಪರವಾಗಿ ಇದ್ದೇವೆ, ಈ ಪತ್ರಿಕೆಯ ಮೇಲೆ ಹಕ್ಕುಚ್ಯುತಿ ತಂದಾಕ್ಷಣಕ್ಕೆ... ಮಾನ್ಯ ಸದಸ್ಯರಾದ ಕೃಷ್ಣಮೂರ್ತಿಯವರು ನಮ್ಮ ಪರವಾಗಿ ನೀವು ಬರುವುದು ಬೇಡ ಬೇಕಾಗಿಲ್ಲ ಎಂದು ಹೇಳಿದರು, ಅವರು ಬೇಡ ಅಂದರೆ ಬೇಡ. ನಿಮಗೆ ಬೇಕಾಗಿಲ್ಲ ಅಂದರೆ ಅವರ ಪರವಾಗಿ ನಿಲ್ಲುತ್ತೇವೆ. ಅವರೂ ಬೇಡ ಅಂದರೆ ನಿಮ್ಮ ಪರವಾಗಿ ಬರುತ್ತೇವೆ. ನೀವು ಬೇಡ ಅಂದರೆ ಹೊರಗಡೆ ನಿಂತಿರುವವರ ಪರವಾಗಿ ಹೋಗುತ್ತೇವೆ. ಆದ್ದರಿಂದ ಈ ನಿರ್ಣಯವನ್ನು...........

ಶ್ರೀಮತಿ ವಿಜಯಲಕ್ಷ್ಮೀ ಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ) : ಮಾನ್ಯ ಸದಸ್ಯರು ಇಷ್ಟು ಹೊತ್ತಿನ ತನಕ ಮಾತನಾಡಿದ್ದೀರಿ. ಎಲ್ಲಾ ಮಹಿಳೆಯರ ಬಗ್ಗೆ ಏನೂ ಬರೆದಿಲ್ಲ ಎಂಬ ರೀತಿಯಲ್ಲಿ ಮಾತನಾಡಿದ್ದೀರಿ. ಆದರೂ ಕೂಡ ತಾವು ಒಬ್ಬ ಶಾಸಕರಾಗಿ ಇಷ್ಟು ಜನ ಮಹಿಳಾ ಶಾಸಕರಾಗಿ ಇದ್ದವರಿಗೆ ಹೀಗೆ ಆದಾಗ..... ಅಂದರೆ ನಾವು ಮನೆ ಮಾಡುವಷ್ಟು ಇಲ್ಲ, ಏನೂ ಮಾಡುವಷ್ಟು ಇಲ್ಲ.

ಅಂದರೆ ನಾವೇನು ಬೀದಿಗಳಲ್ಲಿ ಮಲಗಬೇಕೇ? ಒಬ್ಬರು ಸೆರಗು ಹಾಕಿಕೊಂಡು ಬರುವುದೇ ಒಂದು ಅಪರಾಧವೇ? ಒಂದು ಚೆನ್ನಾದ ಸೀರೆಯನ್ನು ಉಟ್ಟುಕೊಂಡು ಬರುವುದು ಒಂದು ಅಪರಾಧವೇ? ಸೀರೆ ಇರುವವರು ಉಟ್ಟುಕೊಂಡು ಬರುತ್ತಾರೆ. ಸೀರೆ ಇಲ್ಲದವರು ಒಂದು ಕಾಟನ್‌ಸೀರೆ ಉಟ್ಟುಕೊಂಡು ಬರಬಹುದು, ಹರಿದುಹೋದ ಸೀರೆಯನ್ನು ಉಟ್ಟುಕೊಂಡು ಬರಬಹುದು. ಇಂಥ ಸಣ್ಣ ಸಣ್ಣ ವಿಷಯಗಳನ್ನು ಮಾತನಾಡಿದಾಗ, ಪತ್ರಿಕೆಯಲ್ಲಿ ಹಾಕಿದಾಗ ಪತ್ರಿಕೆಯನ್ನು ಎಲ್ಲರೂ ಓದುತ್ತಾರೆ. ಪರಿಣಾಮ ಏನಾಗುತ್ತದೆ? ನಮಗೂ ಲಂಕೇಶ್ ಪತ್ರಿಕೆ ಮೇಲೆ ಅಭಿಮಾನವಿದೆ, ಎಲ್ಲವೂ ಇದೆ. ಆದರೂ ಕೂಡ ನಾವು ನಮ್ಮ ಕ್ಷೇತ್ರಗಳಿಗೆ ಹೋದಾಗ ಕ್ಷೇತ್ರದವರು ನಮ್ಮ ಬಗ್ಗೆ ಏನು ಹೇಳುತ್ತಾರೆ ಎಂಬುದನ್ನು ನೀವು ತಿಳಿದುಕೊಂಡು ಮಾತನಾಡಿ. ಮಾನ್ಯ ಸದಸ್ಯರ ಬಗ್ಗೆಯೂ ಅಭಿಮಾನವಿದೆ, ತಾವು ಕೂಡ ಮಹಿಳೆಯರ ಬಗ್ಗೆ ಇದ್ದೀರಿ ಎಂದೂ ಗೊತ್ತಿದೆ. ಅದೇ ತಾವು ವಿರೋಧವಾಗಿ ಮಾತನಾಡಿದರೆ ಅದಕ್ಕೆ ಬೆಲೆ ಇದೆಯೆ?

7.00 ಪಿ.ಎಂ.

+ ಶ್ರೀ ಸಿ. ಹೆಚ್. ವಿಜಯಶಂಕರ್ (ಹುಣಸೂರು) : ಸನ್ಮಾನ್ಯ ಅಧ್ಯಕ್ಷರೆ, ಬೆಳಗಿನಿಂದ ಈ ಇಡೀ ಸದನದಲ್ಲಿ ಬಹಳ ಗಂಭೀರವಾಗಿ ಒಂದು ಮಹತ್ವದ ವಿಚಾರದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಬಹುಶಃ ಈ ಮೊದಲು ಮಾತನಾಡಿದಂಥ ನಮ್ಮ ಹಿರಿಯರ ಧಾಟಿ ಹೇಗಿದೆ ಎಂದರೆ ಇಡೀ ಸದನ ಪತ್ರಿಕಾ ರಂಗದ ವಿರುದ್ಧ ಬಹುಶಃ ಬಂಡೇಳುತ್ತಿದೆಯೋನೊ, ಅವರ ವಿರುದ್ಧ ಒಂದು ಹೋರಾಟವನ್ನು ಸಾರುತ್ತಿದೆಯೇನೊ ಎಂಬ ಭಾವನೆ ಬರುವಂಥ ರೀತಿಯಲ್ಲಿ ಮಾತನಾಡಿದ್ದಾರೆ. ಇದು ಖಂಡಿತವಾಗಿಯೂ ಕೂಡ ಸಲ್ಲದು. ಪತ್ರಿಕಾ ಧರ್ಮದ ಬಗ್ಗೆ ನಮಗೆ ಅಪಾರವಾದ ಗೌರವ ಇದೆ. ಅವರ ಸಂವಿಧಾನಾತ್ಮಕ ಹಕ್ಕಿನ ಬಗ್ಗೆ ನಮಗೆ ಅಭಿಮಾನ ಇದೆ. ಪತ್ರಿಕಾ ರಂಗವನ್ನು, ಪತ್ರಿಕಾ ಧರ್ಮವನ್ನು ನಾವೆಲ್ಲಾ ಸ್ವಾಗತಿಸಿದ್ದು ಅದು ನಮ್ಮ ಜೀವನದ ಅವಿಭಾಜ್ಯ ಅಂಗ ಎಂದು ನಾವು ತಿಳಿದುಕೊಂಡಿದ್ದೇವೆ. ಆದರೆ ಇಲ್ಲಿ ಚರ್ಚೆಯಾಗುತ್ತಿರುವುದನ್ನು ನೋಡಿದರೆ ಯಲ್ಲೋ ಜರ್ನಲಿಸಂ ಬಗ್ಗೆ ಯಾರು ತಮ್ಮ ಧರ್ಮವನ್ನು ಮರೆತು, ತಮ್ಮ ನೀತಿಯನ್ನು ಮರೆತು ಬಹುಶಃ ಈ ಸಮಾಜದ ಮಹಿಳೆಯರ ಬಗ್ಗೆ ಅವರ ಗೌರವವನ್ನು ಕಾಪಾಡುವಂಥ ವಿಚಾರದಲ್ಲಿ ತಮ್ಮ ವ್ಯವಸ್ಥೆಯ ಹದ್ದುಬಸ್ತನ್ನು ಮೀರಿ ಪತ್ರಿಕಾ ಧರ್ಮವನ್ನು ದುರುಪಯೋಗ ಮಾಡಿಕೊಂಡು ಈ ಸ್ವಾತಂತ್ರ್ಯವನ್ನು ದುರುಪಯೋಗ ಮಾಡಿಕೊಂಡು ಅವರ ಗೌರವವನ್ನು ಹರಣ ಮಾಡುವಂಥ ವ್ಯವಸ್ಥೆಯಲ್ಲಿ ಯಾರು ಹೆಜ್ಜೆಯನ್ನು ಹಾಕಿದ್ದಾರೆ, ಆ ಯಲ್ಲೋ ಜರ್ನಲಿಸಂ ಬಗ್ಗೆ ಇಲ್ಲಿ ಚರ್ಚೆಯಾಗುತ್ತಿದೆ. ಎರಡನೆಯದಾಗಿ, ಬೆಳಗಿನಿಂದ ಏತಕ್ಕೆ ಈ ಚರ್ಚೆ ಎಂದು ಕೆಲವು ಹಿರಿಯರು ಬಹುಶಃ ಇಲ್ಲಿ ಪ್ರಶ್ನೆ ಮಾಡಿದರು. ಕೊನೆಯ ಪಕ್ಷ ಇವತ್ತಿನ ದಿವಸ ಏನು ಮಹಿಳೆಯ ಬಗ್ಗೆ, ತಾಯಂದಿರ ಬಗ್ಗೆ ಬೆಳಗಿನಿಂದ ಚರ್ಚೆಯಾಯಿತು ಆ ಚರ್ಚೆಯ ಮೂಲಕ ಬಂದಂಥ ಆಪಾದನೆ ಸುಳ್ಳಾಯಿತು ಎಂದು ಅವರ ಕ್ಷೇತ್ರಕ್ಕೆ ಮಾಹಿತಿ ಹೋಗುತ್ತದೆ. ಪತ್ರಿಕೆಯಲ್ಲಿ ಅವರ ವೈಯಕ್ತಿಕ ಜೀವನದ ಬಗ್ಗೆ ಏನು ವರದಿಯಾಗಿದೆ ಅದ ಸುಳ್ಳು, ಪತ್ರಿಕೆಯಲ್ಲಿ ಬಂದಂಥ ವರದಿ ಸುಳ್ಳು, ಅವರ ಬಗ್ಗೆ ಚರ್ಚೆಯಾಗಿದ್ದು ಸುಳ್ಳು ಎನ್ನುವಂಥದ್ದಾದರೂ ಕೊನೆಯ ಪಕ್ಷ ಅವರ ಕ್ಷೇತ್ರಕ್ಕೆ ಮಾಹಿತಿ ಹೋಗುತ್ತದೆ. ಇದನ್ನು ಅಲ್ಲಿಗೆ ಕೈಬಿಟ್ಟಿದ್ದರೆ, ಪತ್ರಿಕೆಯಲ್ಲಿ ಈ ರೀತಿ ಬರೆಯುತ್ತಾರೆ, ನನ್ನ ವಿರುದ್ಧ 5

ವರ್ಷ ಬರೆದರು, ನನ್ನ ವಿರುದ್ಧ 10 ವರ್ಷ ಬರೆದರು ಎಂದು ಕೈಬಿಟ್ಟಂಥ ಪಕ್ಷದಲ್ಲಿ ಬಹುಶಃ ಅವರು ಯಾವ ರೀತಿ ಹೋಗಿ ತಮ್ಮ ಕ್ಷೇತ್ರಕ್ಕೆ ಮುಖ ತೋರಿಸಬೇಕು ಜನತೆಗೆ ಏನು ಹೇಳಬೇಕು? ಈ ವ್ಯವಸ್ಥೆಗೋಸ್ಕರ ಏನು ತಮ್ಮ ಧರ್ಮವನ್ನು ಮರೆತು ಯಲ್ಲೋ ಜರ್ನಲಿಸಂ ಮೂಲಕ ವೈಯಕ್ತಿಕವಾಗಿ ಯಾರದೋ ಮಾನ ಹರಣ ಮಾಡುವಂಥ ವ್ಯವಸ್ಥೆ ಏನಾಗಿದೆ ಅದರ ವಿರುದ್ಧ ಇಲ್ಲಿ ಬೆಳಗಿನಿಂದ ಚರ್ಚೆಯಾಗುತ್ತಿದೆಯೇ ವಿನಃ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆಯಾಗಲಿ ಅಥವಾ ಅವರಿಗೆ ಸಂವಿಧಾನದಲ್ಲಿ ಕೊಟ್ಟಂಥ ಹಕ್ಕಿನ ಬಗ್ಗೆಯಾಗಲಿ ಇಲ್ಲಿ ಚರ್ಚೆಯಾಗುತ್ತಿಲ್ಲ. ಅನೇಕ ಪತ್ರಿಕೆಗಳ ಬಗ್ಗೆ ನಮಗೆ ಅಪಾರ ಗೌರವವಿದೆ, ವಿಶ್ವಾಸವಿದೆ. ಸರ್ಕಾರದ ಗೆಜೆಟ್‌ನಲ್ಲಿ ಏನು ಬರುತ್ತದೆ ಅದರ ವರದಿಯೂ ಒಂದೇ ಪತ್ರಿಕಾ ವರದಿ ಕೂಡ ಒಂದೇ ಎನ್ನುವ ಭರವಸೆಯನ್ನು ಸಾರ್ವಜನಿಕರೂ ಇಟ್ಟುಕೊಂಡಿದ್ದಾರೆ, ನಾವೂ ಸಹ ಇಟ್ಟುಕೊಂಡಿದ್ದೇವೆ. ಆ ರೀತಿಯ ಅನೇಕ ಮಹತ್ವದ ಪತ್ರಿಕೆಗಳೂ ಸಹ ನಮ್ಮ ಮಧ್ಯೆ ಇವೆ. ಆದರೆ ಇಡೀ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಅಥವಾ ಇಡೀ ಪತ್ರಿಕೆಗಳ ಬಗ್ಗೆ ಇಲ್ಲಿ ಸಮರವನ್ನೇನೂ ಸಾರಿಲ್ಲ. ಬಹುಶಃ ಯಾರು ಆ ಧರ್ಮವನ್ನು ಮರೆತು ಹೆಜ್ಜೆ ಹಾಕಿದ್ದಾರೆ ಅದರ ಬಗ್ಗೆ ಬೆಳಗಿನಿಂದ ಏನು ಚರ್ಚೆಯಾಗಿದೆ. ಅದು ಬಹಳ ಅಗತ್ಯವಾದ ಚರ್ಚೆಯಾಗಿದ್ದು ನಾನು ಖಂಡಿತ ಅದಕ್ಕೆ ನನ್ನ ಸಹಮತವನ್ನು ವ್ಯಕ್ತ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಕೊನೆಯದಾಗಿ ತಾವು ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ಆ ಲಂಕೇಶ್ ಪತ್ರಿಕೆಯಲ್ಲಿ ಮಹಿಳೆಯರ ಮೇಲೆ ಏನು ಬರವಣಿಗೆ ಬರೆಯಲ್ಪಟ್ಟಿದೆ ಅದು ನಾನು ಮೊದಲೇ ಹೇಳಿದಂತೆ ಒಂದು ಹಕ್ಕುಚ್ಯುತಿ ಆಗುತ್ತದೆಯೋ, ಇಲ್ಲವೋ ಎಂಬುದು ಒಂದು ಮತ್ತು ಅದು ಮಾನನಷ್ಟವಾಗುತ್ತದೆ ಎನ್ನುವುದು ಇನ್ನೊಂದು. ಈ ಮೂಲಕ ಲಂಕೇಶ್ ಪತ್ರಿಕೆ ಮತ್ತು ಪತ್ರಿಕಾ ಸಂಪಾದಕರಿಗೆ ನಾನು ಒಂದು ಮನವಿ ಮಾಡಿಕೊಳ್ಳುವುದೇನೆಂದರೆ ಇದು ಪತ್ರಿಕೆಯಲ್ಲಿ ಬಂದಿರತಕ್ಕಂಥದ್ದು ಮತ್ತು ತಾವು ಬರೆದಿರತಕ್ಕಂಥದ್ದು ಸ್ಪಷ್ಟವಾಗಿ ನಿಜವಾಗಿ ನೀವು ಬರೆದಿದ್ದೀರಿ, ಆ ಬಗ್ಗೆ ಸ್ಪಷ್ಟಪಡಿಸಬೇಕು.

ಶ್ರೀ ಎಂ. ಶ್ರೀನಿವಾಸ್ : ಬರೆದಾದ ಮೇಲೆ ಸ್ಪಷ್ಟಪಡಿಸುವ ಪ್ರಶ್ನೆಯೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಅದನ್ನು ಕೇವಲ ಒಂದು ಸಲ ಬರೆದಾಕ್ಷಣಕ್ಕೆ ಅದು ಸರಿಯಲ್ಲ ಎಂದು ಹೇಳುವ ಹಕ್ಕು ನಮಗೆ ಇದೆ. ಆದುದರಿಂದ ಇದು ಇಷ್ಟೊಂದು ಸಮಗ್ರವಾಗಿ ಚರ್ಚೆಯಾಗುವುದು ನನಗೆ ಹಿತವಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನನಗನಿಸುತ್ತದೆ ಈ ಬಗ್ಗೆ ಇಷ್ಟೊಂದು ಚರ್ಚೆಯ ಅವಶ್ಯಕತೆ ಇರಲಿಲ್ಲ. ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸಿದಾಗ ಇದು ಹಕ್ಕುಚ್ಯುತಿಗೆ ಬರುತ್ತದೆ ಎಂದು ಹೇಳಿದಂಥ ಸಂದರ್ಭದಲ್ಲಿ ನೀವು ಅದನ್ನು ಒಪ್ಪಿ ಅಥವಾ ನಿರಾಕರಿಸಿ ಒಂದು ನಿರ್ಣಯ ತೆಗೆದುಕೊಂಡಿದ್ದರೆ ಇಷ್ಟೆಲ್ಲಾ ಚರ್ಚೆಯಾಗತಕ್ಕಂಥ ಅವಶ್ಯಕತೆ ಇರಲಿಲ್ಲ. ಈಗಲೂ ನಾನು ಅದನ್ನೇ ಹೇಳುತ್ತಿದ್ದೇನೆ, ಅದು ಕಾನೂನಿನ ಪ್ರಕಾರವಾಗಿ ಹಕ್ಕುಚ್ಯುತಿಗೆ ಬರತಕ್ಕಂಥದ್ದು ಎಂದು ತಮ್ಮ ಅವಗಾಹನೆಗೆ ಬಂದರೆ ಅದನ್ನು ತಾವು

ಒಪ್ಪಿಕೊಳ್ಳಬೇಕು. ನಮ್ಮ ಪರಿಸ್ಥಿತಿ ಇವೊತ್ತು ಏನಾಗಿದೆ ಎಂದರೆ ಅಂದು ಈ ಪಾಂಡವರ ಪರಿಸ್ಥಿತಿ ಏನಾಗಿತ್ತು ಆ ರೀತಿ ನಮ್ಮ ಪರಿಸ್ಥಿತಿ ಆಗಿದೆ. ಒಂದು ಕಡೆ ದ್ರೌಪದಿಯ ವಸ್ತ್ರಾಪಹರಣ ನಡೆಯುತ್ತಿದೆ, ನಾವು ಪಾಂಡವರಾಗಿ ಕುಳಿತಿದ್ದೇವೆ. ಏನು ಮಾಡುವುದಕ್ಕೂ ಸಾಧ್ಯವಿಲ್ಲ, ದುಶ್ಯಾಸನನನ್ನು ವಧೆ ಮಾಡತಕ್ಕಂಥ ಶಕ್ತಿ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ನಾವು ಪಾಂಡವರಾಗಿದ್ದೇವೆ. ಕುರು ಸಾರ್ವಭೌಮ ಧೃತರಾಷ್ಟ್ರನ ಅಸ್ಥಾನದಲ್ಲಿ ಅವೊತ್ತು ಪಾಂಡವರ ಪರಿಸ್ಥಿತಿ ಏನಾಗಿತ್ತು ಅಂಥ ಸ್ಥಿತಿಗೆ ನಾವು ಬಂದಿದ್ದೇವೆ. ಈ ಸ್ಥಿತಿಗೆ ನಾವು ಬರಬಾರದಾಗಿತ್ತು. ಬೆಳಗ್ಗೆಯೇ ನಮ್ಮ ಶಾಸಕಿಯವರಾದ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಮಂಡಿಸಿದಂಥ ನಿರ್ಣಯ ತಮ್ಮ ಅವಗಾಹನೆಯಲ್ಲಿ xx

ಅಧ್ಯಕ್ಷರು : ತಾವು ದಯವಿಟ್ಟು ಒಂದು ನಿಮಿಷ ಕುಳಿತುಕೊಳ್ಳಿ, ನಿಮಗೆಲ್ಲಾ ಬಹಳ ಮರೆವು ಜಾಸ್ತಿ. ಬೆಳಿಗ್ಗೆ ಶ್ರೀಮತಿ ಪ್ರಮೀಳ ಅವರು ನೋಟಿಸ್ ಕೊಟ್ಟರು, ನೋಟಿಸ್ ಕೊಟ್ಟಾದ ಮೇಲೆ ನೀವು ಏನು ಹೇಳಬೇಕು ಎಂದಿದ್ದೀರಿ ಅದನ್ನು ಹೇಳಿ ಎಂಬುದಕ್ಕೆ ನಾನು ಅವಕಾಶ ಕೊಡಬೇಕು. ಪ್ರಿವಿಲೇಜ್‌ಗೆ ನೋಟಿಸ್ ಕೊಟ್ಟಾಗ ತಕ್ಷಣವೇ ಪ್ರಶ್ನೋತ್ತರದ ನಂತರ ಅದನ್ನು ತೆಗೆದುಕೊಳ್ಳಬೇಕೆಂದು ನಮ್ಮ ನಿಯಮಾವಳಿ ಇರತಕ್ಕಂಥದ್ದು. ಅವರು ಹೇಳಿರತಕ್ಕಂಥ ಸನ್ನಿವೇಶದಲ್ಲಿ ಉಂಟಾದಂಥ ವಾತಾವರಣ ಏನಿತ್ತು ಆ ಸಂದರ್ಭದಲ್ಲಿ ಸಭೆಯಲ್ಲಿ ಎಲ್ಲರ ಅಭಿಪ್ರಾಯವನ್ನು ಪಡೆದು ನಾನು ಸಭೆಯನ್ನು ಮುಂದಕ್ಕೆ ಹಾಕಿ ಎಲ್ಲರನ್ನೂ ಕೂಡ ನನ್ನ ಕಚೇರಿಗೆ ಕರೆದು ಇದರ ಆಗುಹೋಗುಗಳ ಬಗ್ಗೆ ಚರ್ಚೆ ಮಾಡುವಾಗ ನಿಮ್ಮೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡೆ. ಇದನ್ನು ನೇರವಾಗಿ ಸಮಿತಿಗೆ ಒಪ್ಪಿಸಬೇಕೇ ಅಥವಾ ಸದನದಲ್ಲೇ ಚರ್ಚೆಯಾಗಬೇಕೇ ಎನ್ನುವುದರಲ್ಲಿ ಅಷ್ಟು ಜಿಜ್ಞಾಸೆ ಆದುದ್ದಕ್ಕೆ ಅಷ್ಟು ಹೊತ್ತು ನಾವು ಸದನವನ್ನು ಮುಂದೂಡಿ ಒಳಗೆ ಕುಳಿತುಕೊಳ್ಳಬೇಕಾಯಿತು. ನಾನು ಮಹಿಳಾ ಸದಸ್ಯರನ್ನೂ ಕರೆಸಿ, ಕೇಳಿದೆ, ಆ ಎಲ್ಲಾ ಹೆಣ್ಣು ಮಕ್ಕಳು ಬಂದಾಗ ನೀವು ಕಮಿಟಿಗೆ ಒಪ್ಪಿಸಿ ಯಾವತ್ತೋ ಅದು ಇತ್ಯರ್ಥವಾಗುವುದಾದರೆ ನಮ್ಮ ಮಾನ ಮರ್ಯಾದೆಗೆ ನೀವು ಯಾವ ರಕ್ಷಣೆ ಕೊಟ್ಟಂತೆ ಆಗುವುದಿಲ್ಲ. ಅದು ಸದನದಲ್ಲಿ ಚರ್ಚೆಯಾಗಬೇಕು ಎಂದು ಒಂದು ಪಟ್ಟು ಹಿಡಿದರು. ವಾಪಸ್ ಬಂದು ಎಲ್ಲರನ್ನೂ ಕೇಳಿದಾಗ ಸನ್ಮಾನ್ಯ ವೀರಪ್ಪ ಮೊಯಿಲಿಯವರ ಆದಿಯಾಗಿ ಎಲ್ಲಾ ಹಿರಿಯರೆಲ್ಲರೂ ಕೂಡ ಸದನದಲ್ಲಿ ಚರ್ಚೆಯಾಗಲಿ, ಈ ಸಂಪ್ರದಾಯ ಹೊಸದಾದರೂ ಕೂಡ ಒಂದು ಅನುಕರಣೀಯವಾದ ಸಂಪ್ರದಾಯವಾಗಲಿ, ಇದೇನೂ ತಪ್ಪಲ್ಲ ಎನ್ನತಕ್ಕಂಥ ಮಾತನ್ನು ಹೇಳಿದರು. ನಾನೇ ಒಂದು ನಿರ್ಣಯವನ್ನೂ ನಾನೇ ಕೊಟ್ಟು ಬಿಡಬಹುದಾಗಿತ್ತು, ನಾನು ಅಲೋ ಮಾಡುತ್ತಿದ್ದೇನೆ ಎನ್ನುವ ರೀತಿಯಲ್ಲಿ ಮಾತನಾಡತಕ್ಕಂಥದ್ದನ್ನು let that not go into record. Every decision, from the morning till now, most of it was the result of the consensus of the entire House. It is not my decision. Let there be no wrong message given to anybody.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೆ ನಾನು ಹೇಳುವುದು ನಿಮ್ಮ ಬಗ್ಗೆ ಅಲ್ಲ.

ಅಧ್ಯಕ್ಷರು : ನೀವು ಮಾತನಾಡುವಾಗ ಆ ರೀತಿ ಅರ್ಥ ಆಗುತ್ತದೆ.

---

xx ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಆ ಅಭಿಪ್ರಾಯದಲ್ಲಿ ನಾನು ಮಾತನಾಡಿಲ್ಲ.

+ ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಅಧ್ಯಕ್ಷರೆ ಈಗ ನಮ್ಮ ಶ್ರೀರಾಮರೆಡ್ಡಿಯವರು ಪುರಾಣದ ಕಥೆಯನ್ನು ಹೇಳಿಬಿಟ್ಟರು. ನಾವು ಪಾಂಡವರ ಹಾಗೆ ಕುಳಿತುಕೊಂಡಿದ್ದೇವೆ ಅವರು (ಮಹಿಳೆಯರು) ದ್ರೌಪದಿ ತರಹ ಇದ್ದಾರೆ, ಏನೂ ಮಾಡುವುದಕ್ಕೆ ಆಗಿಲ್ಲ ಎಂದು ಹೇಳಿದರು. ಆದರೆ ಅದರಲ್ಲಿ ಕೂಡ ಒಂದು ಸತ್ಯ ಇದೆ, ಆ ದ್ರೌಪದಿಗೆ ಅಪತ್ತು ಬಂದಂಥ ಸಂದರ್ಭದಲ್ಲಿ "ಕೃಷ್ಣಾ" ಎಂದು ಕರೆದಳು, ಆ ಕೃಷ್ಣ ಯಾರು, ತಾವೇ ಅದರಲ್ಲಿ ಏನೂ ತಪ್ಪಿಲ್ಲ. ಕೃಷ್ಣ ಪರಮಾತ್ಮನ ರೀತಿ ತಾವು ತೀರ್ಪು ಕೊಡಬೇಕು ಎಂದು ಕೇಳಿದರು. ಅದರಲ್ಲೇನು ತಪ್ಪಿದೆ?

MR. SPEAKER : I could have straight away referred the matter. What was the option open to me? I am not making counter allegation against you, I am only clarifying the position. There were only two options open to me. One is, referring the matter to the Privileges Committee. The other is, disallowing it. The third option was to take up for discussion on the floor of the House by way of substantive motion. The consenus of the House, which I tried to collect in my chambers, was definitely not in favour of referring the matter to the privileges committee, if I am right all you are here.

Hon. Members : Yes, yes.

MR. SPEAKER : Then I could not have said there is no breach of privilege. The only option open to me was, after taking all of you into confidence to allow for a discussion. At least they (Press) should be clear as to what has happened because they were not present when we deliberated all these things in my chamber. Truth shold not be suppressed at any point of time.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಹಕ್ಕು ಚ್ಯುತಿಯ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಬೇಕಾದ್ದು ಈ ಸದನ, ಸಭಾಧ್ಯಕ್ಷರಲ್ಲ. ಸದನ ಯಾವ ತೀರ್ಮಾನ ತೆಗೆದುಕೊಳ್ಳುತ್ತದೆ ಆ ತೀರ್ಮಾನವನ್ನು ಮಾನ್ಯ ಸಭಾಧ್ಯಕ್ಷರು ಒಪ್ಪಬೇಕಾಗುತ್ತದೆ. ಸದನ ಒಪ್ಪುವುದಿಲ್ಲ ಎಂದರೆ ಸಭಾಧ್ಯಕ್ಷರು ಏನೂ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ನಾನು ಹೇಳುತ್ತೇನೆ, ಹಕ್ಕುಚ್ಯುತಿಯ ನಿರ್ಣಯಕ್ಕೆ ಸಂಬಂಧಪಟ್ಟಂತೆ ಎಲ್ಲರೂ ಒಂದಾಗಿ ಇದರಲ್ಲಿ ಸದನ ತೀರ್ಮಾನ ತೆಗೆದುಕೊಳ್ಳಬೇಕೇ ಹೊರತು ಸಭಾಧ್ಯಕ್ಷರಲ್ಲ. ಆದುದರಿಂದ ಇವೊತ್ತು ಈ ಸದನದಲ್ಲಿ ನಾವು ಈ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿರುವಂಥದ್ದಕ್ಕೆ ಮಾನ್ಯ ಸಭಾಧ್ಯಕ್ಷರ ಕೊಠಡಿಯಲ್ಲಿ ನಾವೆಲ್ಲರೂ ಸೇರಿದಾಗ ಸಭಾಧ್ಯಕ್ಷರಿಗೆ ನೀವು ಇದನ್ನು ಹಕ್ಕುಚ್ಯುತಿಗೆ ವಹಿಸಿ ಎಂದು ಹೇಳತಕ್ಕಂಥದ್ದೂ ಸಹ ಸದನವೇ. ಅಥವಾ ಈ ಸದನವೇ ಇದನ್ನು ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕು

ಎಂಬುದನ್ನೂ ಈ ಸದನವೇ ಹೇಳಬೇಕು. ಆದುದರಿಂದ ಇವೊತ್ತು ತೆಗೆದುಕೊಂಡಿರುವ ತೀರ್ಮಾನ ಈ ಸದನದ್ದು. ಇಲ್ಲಿ ಸಭಾಧ್ಯಕ್ಷರು ಯಾವುದೇ ಸಂದರ್ಭದಲ್ಲಿ ಮುಂದಕ್ಕೆ ಬರುವುದಿಲ್ಲ. ಅವರು ತೆಗೆದುಕೊಳ್ಳುತ್ತಿರುವುದು ಸದನದ ತೀರ್ಮಾನವನ್ನು ಪ್ರಕಟ ಮಾಡುವುದೊಂದನ್ನು ಬಿಟ್ಟರೆ ಬಾಕಿ ಅವರಿಗೆ ಈ ಒಂದು ಹಕ್ಕುಚ್ಯುತಿ ನಿರ್ಣಯಕ್ಕೆ ಮಾತ್ರ ಸಂಬಂಧಪಟ್ಟ ಹಾಗೆ ಅವರಿಗೆ ಯಾವ ತರಹ ಅಧಿಕಾರವೂ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಆ ಅರ್ಥದಲ್ಲಿ ಹೇಳಿದಂಥದ್ದಲ್ಲ.

MR. SPEAKER : It's alright.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಈಗಲೂ ಹೇಳುತ್ತೇನೆ, ಮಾನ್ಯ ಶಾಸಕಿ ಅವರು ಏನು ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸಿದ್ದಾರೆ, ಅದರ ಬಗ್ಗೆ ಹಿರಿಯರೆಲ್ಲಾ ಮಾತನಾಡಿದ್ದಾರೆ. ಅದರ ಅರ್ಹತೆಯ ಆಧಾರದ ಮೇಲೆ ನೀವು ಒಪ್ಪಿ ಅದನ್ನು ತೆಗೆದುಕೊಳ್ಳಬಹುದು.

ಅಧ್ಯಕ್ಷರು : ಈ ಕಡೆಯಿಂದ ನೀವು ಯಾರು ಮಾತನಾಡುತ್ತೀರಿ, ಮಾತನಾಡಿ. I would then ask the Leader of the Opposition, Deputy Leader of the Opposition, Bharathiya Janata Party Mr. Nanjegowda and so many others are waiting. Shall I ask Mr. Nanjegowda to begin or Mr. Suresh kumar.

+ ಶ್ರೀ ಹೆಚ್. ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಸಭಾಧ್ಯಕ್ಷರೆ, ಈ ಸಭೆಯ ಚರಿತ್ರೆಯಲ್ಲಿ ಇವತ್ತು ಒಂದು ವಿಶೇಷ ದಿನವೆಂದು ನಾನು ಅಂದು ಕೊಂಡಿದ್ದೇನೆ. ಅನೇಕ ವಿಚಾರಗಳು ಇವತ್ತು ಪ್ರಸ್ತಾಪವಾಗಿದೆ. ನಮ್ಮ ನಡವಳಿಕೆಗಳು ಹಕ್ಕುಭಾದ್ಯತೆ ಇದಕ್ಕೆ ಚ್ಯುತಿ ಉಂಟಾಗತಕ್ಕಂಥಾದ್ದು ಇವುಗಳೆಲ್ಲವನ್ನೂ ನಾನು ಬ್ರಿಟಿಷ್ ಪಾರ್ಲಿಮೆಂಟಿನಿಂದ ಬಳುವಳಿಯಾಗಿ ಪಡೆದುಕೊಂಡು ಬಂದಿದ್ದೇವೆ. ಒಂದು ಹಂತದಲ್ಲಿ ಜಿಜ್ಞಾಸೆ ಬಂದಿದೆ. ಏಕೆಂದರೆ ತಾವು ಹೇಳಿದಿರಿ ಮಾನನಷ್ಟ ಬೇರೆ ಹಕ್ಕು ಚ್ಯುತಿ ಬೇರೆ ಎಂದು. ಮಾನನಷ್ಟವೂ ಹಕ್ಕುಚ್ಯುತಿಯಾಗುತ್ತದೆ. ಕೆಲವು ಸಂದರ್ಭದಲ್ಲಿ ಮಾನನಷ್ಟ ಇಲ್ಲದಿದ್ದರೆ ಹಕ್ಕುಚ್ಯುತಿಯಾಗುತ್ತದೆ. ಮಾನನಷ್ಟವಾದಂತಹ ವಿಚಾರಗಳನ್ನು ಬರೆದರೆ ಹಕ್ಕುಚ್ಯುತಿ ಸೇರಿಸಿಕೊಂಡು ಅದು ವಿಪರೀತ ಹಕ್ಕುಚ್ಯುತಿಯಾಗುತ್ತದೆ. ನಮ್ಮಲ್ಲಿನ ನಮ್ಮ ರಾಷ್ಟ್ರದಲ್ಲಿರತಕ್ಕಂತಹ ಪದ್ಧತಿ ಕಾನೂನು ಏನು ಇದೆ ಅದರ ಬಗ್ಗೆ ವಿಚಾರ ಮಾಡಬೇಕಾಗಿದೆ. Law of Torts, tortious liability ಇಂಗ್ಲೇಂಡಿನಲ್ಲಿ ಇಂತಹ ಪತ್ರಿಕೆಗಳೇ ಸಿಕ್ಕುವುದು ಕಷ್ಟ. ಡ್ಯಾಮೇಜ್ ಸೂಟ್ ಅಲ್ಲಿ ಹಾಕಿದರೆ ಅದಕ್ಕೆ ಪರಿಹಾರ ಕೊಡತಕ್ಕಂಥಾದ್ದಕ್ಕೆ ಅವರು ನೆಲ ಕಚ್ಚಿ ಹೋಗಬೇಕು. ಆದರೆ ಇಲ್ಲಿ ಅಂತಹ ಪದ್ಧತಿ ಏನೂ ಇಲ್ಲ. ಕೋರ್ಟ್‌ಗಳಿಗೆ ಹೋದರೆ ಏನಾಗುತ್ತದೆಂದು ನಮಗೆಲ್ಲಾ ತಿಳಿದಿದೆ. ನನ್ನದೇ ಒಂದು ಉದಾಹರಣೆ ಹೇಳುತ್ತೇನೆ. ನಾನು ಮಂತ್ರಿ ಕೆಲಸವನ್ನು 74 ರಲ್ಲಿ ಬಿಟ್ಟಿದ್ದೆ. ಮಾನ್ಯ ಮೊಹಿದ್ದಿನ್ ಅವರಿಗೆ ಗೊತ್ತು. ಬ್ಲಿಡ್ಜ್ ಪತ್ರಿಕೆಯಲ್ಲಿ ಒಂದು ಪುಟ ಪೂರ್ತಿ ಬರೆದರು. ಮಾಜಿ ಮಂತ್ರಿ ಹೆಚ್. ಎನ್. ನಂಜೇಗೌಡ ಗೊಬ್ಬರವನ್ನು ಕದ್ದು ಸಾಗಾಣಿಕೆಯಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆಂದು, ಶಾಮೀಲಾಗಿದ್ದಾನೆಂದು

ಅಲ್ಲ. ನಾನೇ ಮಾಡಿ ಸಿಕ್ಕಿ ಹಾಕಿಕೊಂಡಿದ್ದಾನೆಂದು ಬ್ಲಿಡ್ಜ್ ಪತ್ರಿಕೆಗೆ ಲಾಯರ್ ನೋಟೀಸ್ ಕೊಡಿಸಿದೆ. ಒಂದು ರಿಗ್ರೆಟ್ ಲೆಟರ್ ಕಳುಹಿಸಿ ಇದನ್ನು ಮುಂದಿನ ಪತ್ರಿಕೆಯಲ್ಲಿ ಹಾಕುತ್ತೇವೆಂದು ಹೇಳಿದರು. ಒಂದು ಪುಟ ಹುಡುಕಿ ಹುಡುಕಿ ನಾನು ಓದಿಕೊಳ್ಳಬೇಕಾಯಿತು. ಹೇಗೆ ಚಾರಿತ್ರ್ಯ ವಧೆಯಾಗುತ್ತದೆ ಇಲ್ಲಿ ನಾವು ಸಭೆಗಳಲ್ಲಿ ಹೇಗೆ ಫಂಕ್ಷನ್ ಮಾಡುವುದು. What is Breach of privilege obstructing a Member from performing his/her duties obstructing in any manner. ಇವತ್ತು ಮಾನ್ಯ ಪ್ರಮೀಳಾರವರು ವಿಷದವಾಗ ಇಲ್ಲಿ ಯಾವ ರೀತಿಯಾಗಿದೆ ಎಂದು ತಿಳಿಸಿದರು. ಶ್ರೀಮತಿ ವಿಮಲಾಬಾಯಿ ದೇಶಮುಖ್ ಅವರು ಕಣ್ಣಲ್ಲಿ ನೀರು ಹಾಕಿದರು. ನನಗೆ ಏಕೆ ಬೇಕು ಅಧಿಕಾರ? ಮನೆತನದ ಗೌರವ ಮುಖ್ಯ ಎಂದರು. ಸದಸ್ಯರು ಫಂಕ್ಷನ್ ಮಾಡಬೇಕಲ್ಲವೇ? ಇವತ್ತು ಇದನ್ನೂ ಏಕೆ ನಾವು ಗಂಭೀರ ತೆಗೆದುಕೊಂಡೆವು ಎಂಬುದನ್ನು ವಿಚಾರ ಮಾಡಬೇಕಾಗಿದೆ. ಪತ್ರಿಕಾ ಸ್ವಾತಂತ್ರ್ಯ ಎಲ್ಲಾ ಇದೆ ನಾನು ಅದಕ್ಕೆ ನಂತರ ಬರುತ್ತೇನೆ ಮಾನ್ಯ ವಾಟಾಳ್ ಅವರು ಹೇಳಿದ ಹಾಗೆ ಇಂತಹ ಹತ್ತಾರು ಪತ್ರಿಕೆಗಳು ಇದರಲ್ಲಿ ಇರಬಹುದು. ಮಾನ್ಯ ವಾಟಾಳ್‌ರವರು ಹೇಳಿದ ಹಾಗೆ ಲಂಕೇಶ್ ಸಾಮಾನ್ಯರಲ್ಲ. ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಬಂದಿದೆ. ಇಂತಹ ಜವಾಬ್ದಾರಿ ಇರುವ ಮನುಷ್ಯ ಇಂತಹ ಬೇಜವಾಬ್ದಾರಿ ಕೆಲಸ ಮಾಡಿದ್ದಾರೆ. ಸಾಹಿತ್ಯ ಅಕಾಡಮಿ ಬಹುಮಾನ ತೆಗೆದುಕೊಂಡೂ ಸಮಾಜದಲ್ಲ ಎಷ್ಟು ಜವಾಬ್ದಾರಿ ಇರಬೇಕು. ಆದರೆ ಇಂತಹ ಬೇಜವಾಬ್ದಾರಿ ಕೆಲಸ ಮಾಡಿದ್ದಾರೆ. ನಾನು ಎಲ್ಲವನ್ನೂ ಹೇಳಲಿಕ್ಕೆ ಹೋಗುವುದಿಲ್ಲ. ಒಂದು ಹಂತದಲ್ಲಿ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಸರ್ಚ್ ಲೈಟ್ ಕೇಸ್‌ನಲ್ಲಿ ಏನು ಹೇಳಿದ್ದಾರೆಂದು ಹೇಳುತ್ತೇನೆ ಇದು ಬಹಳ ದೊಡ್ಡದು. ಅದೆಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಅವರು ಒಂದು "ಕೋಟ್" ಅನ್ನು ವಿಲಿಯಂ ಬ್ಲಾಸ್ಟನ್‌ರವರ ಜಡ್ಜ್‌ಮೆಂಟಿನಲ್ಲಿ ಬರೆಯುತ್ತಾರೆ. ಪ್ರೆಸ್ ಲಿಬರ್ಟಿ ಬಗ್ಗೆ. The liberty of the press is indeed essential to the nature of a free state. ನಾವು ಇದನ್ನು ಪ್ರಶ್ನೆ ಮಾಡುವುದಿಲ್ಲ. Liberty of the Press is indeed essential. We agree. "But this consists in laying no previous restraint upon publication but not in any freedom from censor for criminal matter when published. Every free man has an undoubted right to lay what sentiment he pleases before the public. To forbid this, is to destroy the freedom of the press".

We do agree. "But if he publishes what is improper, mischievous or illegal he must take the consequences of his own temerity". ತನ್ನ ಅಪರಾಧಕ್ಕೆ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ನಾನು ಮೊದಲೇ ಹೇಳಿದ ಹಾಗೆ ನಮ್ಮಲ್ಲಿ ಲಾ ಆಫ್ ಟಾರ್ಟ್ಸ್ ಇಲ್ಲ. ಅದೇನೂ ಅಂತಹ ಪರಿಣಾಮಕಾರಿಯಾಗಿಲ್ಲ. ಕೋರ್ಟಿನಲ್ಲಿ ಅಪಾಲಜಿ ಕೇಳಿದರೆ ಕೇಸ್ ಮುಗಿದು ಹೋಯಿತು ಕೇಸ್ ಡಿಸ್‌ಮಿಸ್ ಮಾಡುತ್ತಾರೆ. ಆದರೆ ಇಂಗ್ಲೇಂಡಿನಲ್ಲಿ ಲಾ ಆಫ್ ಟಾರ್ಟ್ಸ್ ಅದರ ಒಂದು ಕೇಸ್ ಹಾಕಿದರೆ ಒಂದು ಇಂತಹ ತಪ್ಪು ಮಾಡಿದರೆ ಆ ಪತ್ರಿಕೆ ಮುಚ್ಚುವುದಲ್ಲದೆ ಅವನ ಮನೆ ಹಾಳಾಗುತ್ತದೆ ಅವರು ಹಾಕುವ ಫೈನ್ ಕಟ್ಟಲಿಕ್ಕಾಗುವುದಿಲ್ಲ. Tortions liabilityಗೆ ಆದರೆ ಇಲ್ಲಿ ನಮ್ಮಲ್ಲಿ ಆ ರೀತಿ ಇಲ್ಲ. ಅಪಾಲಜಿ ಕೇಳಿದರೆ ಮುಗಿದು ಹೋಯಿತು. ಬರೆಯುವುದು ಬರೆಯುತ್ತಾರೆ

ನಂತರ ರಿಗ್ರೆಟ್ ಲೆಟರ್ ಅನ್ನು ಬೇಕಾದರೆ ಹತ್ತು ಸಲ ಕೊಡುತ್ತಾರೆ. ಇದೆಲ್ಲಾ ಹಿಂದೆ ಆಗಿದೆ. ಅನೇಕ ಪತ್ರಿಕೆಗಳ ಮೇಲೆ ಕೋರ್ಟಿಗೆ ಹೋಗಿ ಇದು ಆಗಿದೆ. ಇಂತಹ ಪರಿಸ್ಥಿತಿಯಲ್ಲಿ ಶಾಸಕಾಂಗ, ಶಾಸನ ಸಭೆಗಳ ಜವಾಬ್ದಾರಿ ಈ ರಾಷ್ಟ್ರದಲ್ಲಿ ನಾವೇ ಇದನ್ನು ರೆಗ್ಯುಲೇಟ್ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಭಯ ಇಲ್ಲದೆ ಭಕ್ತಿ ಬರುವುದಿಲ್ಲ ಭೀತಿ ಇಲ್ಲದೆ ಭಕ್ತಿ, ಜವಾಬ್ದಾರಿಯೂ ಬರುವುದಿಲ್ಲ. ಬೇಜವಾಬ್ದಾರಿ ಬರವಣಿಗೆಗೆ ಕಡಿವಾಣ ಹಾಕಲೇ ಬೇಕಾಗುತ್ತದೆ. ನಾವು ಎಲ್ಲಾ ಪತ್ರಿಕೆಗಳ ಬಗ್ಗೆ ಹೇಳುತ್ತಿಲ್ಲ. ಈ ರೀತಿ ಕ್ಯಾರೆಕ್ಟರ್ ಅಸ್ಯಾಸಿನೇಷನ್ ಮಾಡುವುದೇ ಒಂದು ಕಸುಬು. ಇಂತಹ ಪತ್ರಿಕೆಗಳ ಬಗ್ಗೆ ನಾವು ಕಡಿವಾಣ ಹಾಕಬೇಕು. ನಾವು ಎಲ್ಲಾ ಪತ್ರಿಕೆಗಳ ಬಗ್ಗೆ ಹೇಳುತ್ತಿಲ್ಲ. ಈ ರೀತಿ ಕ್ಯಾರೆಕ್ಟರ್ ಅಸ್ಯಾಸಿನೇಷನ್ ಮಾಡುವುದೇ ಒಂದು ಕಸುಬು. ಇಂತಹ ಪತ್ರಿಕೆಗಳ ಬಗ್ಗೆ ನಾವು ಕಡಿವಾಣ ಹಾಕಬೇಕು. ಇನ್ನೊಂದು ಕೇಸ್‌ನಲ್ಲಿ ತನಿನಿರಾಂ ಪತ್ರಿಕೆಯ ಮ್ಯಾನೇಜಿಂಗ್ ಎಡಿಟರ್ ಬಗ್ಗೆ ಇದು ಕೇರಳದಲ್ಲಿ ಆಗಿದ್ದು ಪ್ರಿವಿಲೇಜ್ ಸಮಿತಿಗೆ ಹಾಕಿದ್ದರು. ಅಲ್ಲಿ ಅವನಿಗೆ ರಿಟರ್ನ್ ಎಕ್ಸ್‌ಪ್ಲನೇಷನ್‌ಗೆ ಮಾತ್ರ ಅವಕಾಶ ಕೊಟ್ಟರು ಅವನು ಬಂದು ಅಪಿಯರ್ ಆಗಲಿಕ್ಕೂ ಅವಕಾಶ ಕೊಡಲಿಲ್ಲ. ಲಾಯರ್ ಅನ್ನು ಇಟ್ಟುಕೊಳ್ಳಲಿಕ್ಕೆ ಕೂಡ ಅವಕಾಶ ಕೊಡಲಿಲ್ಲ. ಇವತ್ತು ಈ ಕೇಸಿನಲ್ಲಿ ನಾವು ಬಹುಶಃ ನೋಟೀಸ್ ಕೊಡಬೇಕಾಗಿರಲಿಲ್ಲ. ನ್ಯಾಚುರಲ್ ಜಸ್ಟೀಸ್ ಎಂದು ಹೇಳುತ್ತೇವೆ. ಎಕ್ಸ್‌ಪ್ಲನೇಷನ್ ಕೇಳುವುದಕ್ಕೇನು ಇದೆ? ಇಲ್ಲಿ ಪ್ರಿಂಟಾಗಿದೆ. ಎಕ್ಸ್‌ಪ್ಲನೇಷನ್ ಇಲ್ಲಿ ಕೇಳಬೇಕಾದ್ದು ಇಲ್ಲ. ಪ್ರಿಂಟಾದದ್ದು ಇದೆ. ಅದು ಬ್ರೀಚ್ ಆಫ್ ಪ್ರಿವಿಲೇಜ್ ಅಲ್ಲವೋ ಅಷ್ಟೇ ಇರತಕ್ಕಂಥಾದ್ದು. ಲಂಕೇಶ್ ಇದು ನನ್ನ ಪತ್ರಿಕೆ ಅಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಎಡಿಟರ್ ಆಗಲೀ, ಪಬ್ಲಿಷರ್ ಆಗಲೀ, ರೈಟರ್ ಆಗಲೀ they cannot disown. They won't disown also. ಮಾನ್ಯ ಪ್ರಮೀಳಾ ಅವರು ತಂದಿರತಕ್ಕಂತಹ ಸಬ್‌ಸ್ಟ್ಯಾನ್‌ಟೀವ್ ಮೋಷನ್‌ನಲ್ಲಿ ಒಂದು ಅಮೆಂಡ್‌ಮೆಂಟ್. ಇಲ್ಲಿ ಕಾಲಮಿತಿ ಹಾಕಿಲ್ಲ. ನೀವು ಕೇಳಿ. ನ್ಯಾಚುರಲ್ ಜಸ್ಟೀಸ್‌ಗೋಸ್ಕರ ಒಂದು ಅವಕಾಶ ಕೊಡಬೇಕಾಗುತ್ತದೆಂದು ಹೇಳಿದರು ಈಗ ಅವರು ಅಪಾಲಜಿ ಕೊಟ್ಟರೂ ನಾವು ಅಕ್ಸೆಪ್ಟ್ ಮಾಡಬಾರದು. ನಾನು ಈಗಲೇ ಅಡ್ವಾನ್ಸ್ ಆಗಿ ಹೇಳುತ್ತಿದ್ದೇನೆ. ಅಪಾಲಜಿ ಕೊಡತಕ್ಕಂಥಾದ್ದು ಸುಲಭ. 'We regret what we have published or written' ಎಂದು ಅಪಾಲಜಿ ಕೇಳಿದರೂ ಇದು ಕ್ಷಮಿಸತಕ್ಕಂಥಾದ್ದಲ್ಲ. ಒಂದು ಸಲ ನಾವು ಶುರು ಮಾಡಬೇಕು. ಇದು ಸರಿ ಇಲ್ಲವೆನ್ನುವುದನ್ನು ಖಚಿತ ಪಡಿಸಬೇಕು. ಅಪಾಲಜಿಯನ್ನು ಸುಲಭದಲ್ಲಿ ಕೇಳುತ್ತಾರೆ. ನಮ್ಮಲ್ಲಿ ಅದೇ ಒಂದು ಪರಿಪಾಠವಾಗಿದೆ. ಕೆಲವು ಪತ್ರಿಕೆಯವರಿಗೆ ರಾಷ್ಟ್ರದಾದ್ಯಂತ ಹಕ್ಕುಚ್ಯುತಿ ಬರತಕ್ಕಂಥಹ ಆರ್ಟಿಕಲ್ಸ್ ಪಬ್ಲಿಷ್ ಮಾಡುವುದು ನಂತರ ಒಂದು ರಿಗ್ರೆಟ್ ಲೆಟರ್ ಕಳುಹಿಸುವುದು. ಇಂತಹ ಅನೇಕವು ಇವೆ ನಾನು ಇಲ್ಲಿ ಓದುತ್ತೇನೆ. ರಿಗ್ರೆಟ್ ಲೆಟರ್ ಕಳುಹಿಸಿ ಅಪಾಲಜಿ ಕೇಳಿದ ತಕ್ಷಣ ಪ್ರಿವಿಲೇಜ್ ಸಮಿತಿಯವರು ಕೈ ಬಿಟ್ಟಿದ್ದಾರೆ. ಕೇಸ್ ಕ್ಲೋಸ್ ಹಾಗಾಗಬಾರದು. ಇದೊಂದು ಉದಾಹರಣೆಯಾಗಿ ರಾಷ್ಟ್ರದಲ್ಲಿ ಈ ಸಭೆ ತೆಗೆದುಕೊಳ್ಳತಕ್ಕಂತಹ ನಿರ್ಣಯ ಮಾದರಿಯಾಗಬೇಕು. From the above mentioned persons, explanation in this respect ನಾನು ಹೇಳುತ್ತೇನೆ From the above mentioned persons, within 6th of September 1997, explanation should reach, ಎಂದು. ಅವತ್ತಿನ ಒಳಗಡೆ ಕೊಡಬೇಕು. ನಾವೇನು ಸಭೆ ಸೇರುತ್ತಿದ್ದೇವೆ ಅಷ್ಟರಲ್ಲಿ

ಕೊಡಬೇಕು. 8ನೇ ತಾರೀಖು ಏನು ಶಿಕ್ಷೆಕೊಡಬೇಕೆಂಬ ನಿರ್ಣಯವನ್ನು ನಾವು ಈ ಸಭೆಯಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಇಷ್ಟನ್ನು ಹೇಳಿ ಭಾರಿ ಪರಿಣಾಮಕಾರಿಯಾಗಿ ನಮ್ಮ ಹಿರಿಯ ಸದಸ್ಯರಾದ ಮಾನ್ಯ ಮೊಯಿಲಿಯವರು ಈ ವಿಚಾರವನ್ನು ಸಮರ್ಥಿಸಿದ್ದಾರೆ. ಬಹುಶಃ ಇದಕ್ಕೆ ಹೆಚ್ಚಿಗೆ ಇದು ಸಂಶಯಾತೀತವಾಗಿ ಹಕ್ಕುಚ್ಯುತಿ ಉಂಟಾಗಿರುವುದರಿಂದ ಇದರ ಮೇಲೆ ಹೆಚ್ಚಿಗೆ ವಾದವಿವಾದ ಮಾಡತಕ್ಕಂಥದ್ದು ಅನವಶ್ಯಕ ಎನ್ನುವ ಅಭಿಪ್ರಾಯದಿಂದ ಇನ್ನ್ಯಾವುದೇ ಕೇಸುಗಳನ್ನು ನಾನು ಕೋಟ್ ಮಾಡದೆ ಅವುಗಳನ್ನು ತಂದಿಟ್ಟು ಕೊಂಡಿದ್ದರೂ ಕೂಡ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ದಿವಸ ಬೆಳಿಗ್ಗೆಯಿಂದ ಈ ವಿಚಾರದ ಬಗ್ಗೆ ಚರ್ಚೆಯಾಗಿದೆ. ಇಲ್ಲಿ ಎರಡು-ಮೂರು ಆಯಾಮಗಳಿಂದ ಈ ವಿಚಾರದ ಬಗ್ಗೆ ಯೋಚನೆಯನ್ನು ಮಾಡಬೇಕಾಗುತ್ತದೆ. ಒಂದನೆಯದು ಪ್ರತಿಯೊಂದು ವೃತ್ತಿ ಅಥವಾ ಸಾರ್ವಜನಿಕ ಬದುಕಿನಲ್ಲಿರತಕ್ಕಂಥ ಒಬ್ಬ ವ್ಯಕ್ತಿ ಅಥವಾ ಜವಾಬ್ದಾರರಾಗಿರತಕ್ಕಂಥವರಿಗೆ ನೀತಿ ಸಂಹಿತೆ ಎನ್ನತಕ್ಕಂಥದ್ದು ಇರಲೇಬೇಕು. ನಾವೆಲ್ಲರೂ ಕೂಡ ಅಧಿಕಾರದ ಸ್ಥಾನದಲ್ಲಿರುವುದರಿಂದ ಹೆಚ್ಚು ಜವಾಬ್ದಾರಿಯುತವಾಗಿ ನಾವೆಲ್ಲಾ ವರ್ತಿಸಬೇಕು ಎನ್ನುವ ಕಾರಣಕ್ಕಾಗಿ ನಮ್ಮನ್ನು ಸದಾಕಾಲ ಸಂಶಯಕ್ಕೆ ಅನುಮಾನದಿಂದ ನೋಡತಕ್ಕಂಥದ್ದು ಕೂಡ ಇರಬೇಕು. ಈ ದೃಷ್ಟಿಯಿಂದಲೇ ಮೊದಲೆಲ್ಲಾ ಇದ್ದಂಥದ್ದು ಕೇವಲ ಮೂರು ಎಸ್ಟೇಟ್‌ಗಳು ಎಂದು ಕರೆಯುತ್ತಿದ್ದರು. ಎಡ್ಮಂಡ್ ಬರ್ಕ್‌ರವರು ಬರೀ ಈ ಮೂರು ಎಸ್ಟೇಟಲ್ಲ, ಅಂದರೆ ನಾಲ್ಕನೇ ಒಂದು ಅಂಗ ಏನಿದೆ, ಇದು ಪತ್ರಿಕಾ ರಂಗ. ಈ ರಂಗವೂ ಕೂಡ ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗ ಇವುಗಳ ಬಗ್ಗೆ ವಿಮರ್ಶೆ ಮಾಡುವ, ಟೀಕೆ ಮಾಡುವ ಹಕ್ಕನ್ನು ಅಂತರ್ಗತವಾಗಿ ಅದು ಪಡೆದಾಗ ಮಾತ್ರ ಪ್ರಜಾಪ್ರಭುತ್ವ ಸರಿಯಾಗಿ ನಡೆಯುತ್ತದೆ ಎಂದು ಹೇಳಿದ್ದರು. ನಾವೂ ಕೂಡ ಅಂಥ ಜವಾಬ್ದಾರಿ ಸ್ಥಾನಕ್ಕೆ ಅರ್ಹರಾಗುವಂಥ ರೀತಿಯಲ್ಲಿ ಕೆಲಸವನ್ನು ನಿರ್ವಹಿಸಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಅದು ಅಪೇಕ್ಷಣೀಯವೂ ಕೂಡ. ಪತ್ರಿಕೆಗಳು ಟೀಕೆ ಟಿಪ್ಪಣಿಯನ್ನು ಮಾಡಿದರೆ ಅದನ್ನು ನಾವು ಸ್ವಾಗತವನ್ನು ಮಾಡಬೇಕಾಗುತ್ತದೆ. ಮತ್ತು ತಿದ್ದಿಕೊಳ್ಳುವ ಪ್ರಯತ್ನವನ್ನೂ ಕೂಡ ಮಾಡಿಕೊಳ್ಳಬೇಕಾಗುತ್ತದೆ. ಆದರೆ ಹೀಗೆ ಟೀಕೆ ಮಾಡತಕ್ಕಂಥ ಸಂದರ್ಭದಲ್ಲಿ ಅದು ಎಷ್ಟು ಸಾಪೇಕ್ಷವಾಗಿರುತ್ತದೆ ಎಂದರೆ ಅವರು ತಮ್ಮ ಸಾರ್ವಜನಿಕ ಬದುಕಿನ ಅಧಿಕಾರದ ಕರ್ತವ್ಯ ನಿರ್ವಹಣೆಯಲ್ಲಿ ತಪ್ಪಿರುವಂಥ ವಿಷಯಗಳಿಗೆ ತಮ್ಮದೇ ಆಗಿರುವ ವ್ಯಾಖ್ಯಾನವನ್ನು ಕೊಡಬಹುದು. ಅದಕ್ಕೆ ತೌಲನಿಕವಾಗಿರುವ ರೀತಿಯಲ್ಲಿ ಪ್ರತಿಕ್ರಿಯಿಸಬಹುದು. ಆದರೆ ಒಬ್ಬ ವ್ಯಕ್ತಿಯನ್ನು ವಿನಾಕಾರಣವಾಗಿ ಅವರ ವ್ಯಕ್ತಿತ್ವಕ್ಕೆ ಕಳಂಕ ಬರುವಂತೆ ಟೀಕೆ ಮಾಡುವಂಥದ್ದು ಅನಗತ್ಯ. ಇಲ್ಲಿ ಈ ಸದನಗಳಲ್ಲಿ ಕೆಲಸ ಮಾಡುವ ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿಯ ಗೌರವಕ್ಕೆ ಚ್ಯುತಿ ಬರುವ ರೀತಿ ಬರವಣಿಗೆ ಇದ್ದರೆ ನನಗೆ ಒಂದು ಆಶ್ಚರ್ಯ ಮತ್ತು ಡೈಕಾಟಮಿ ಎಂತಲೂ ಕೂಡ ನಾನು ಕರೆಯುತ್ತೇನೆ. ಇದರ ವೈರುಧ್ಯಗಳು ಹೇಗಿವೆ ಎಂದರೆ ನಾವು ಲಂಕೇಶ್‌ರನ್ನು ಗೌರವಿಸಿದ್ದು ಪ್ರೀತಿಸಿದ್ದು ಅವರ ಬರಹಗಳ ಮೂಲಕವಾಗಿ ನಮ್ಮ ಅನೇಕ ಚಿಂತನೆಗಳ ರೀತಿಯೂ ಕೂಡ ಅವರ ಬರವಣಿಗೆಯಿಂದ ಪ್ರಭಾವಿತವಾಗಿರುವಂಥದ್ದು. ಅವರೊಬ್ಬ ಅತ್ಯಂತ ಪ್ರಗತಿದಾಯಕವಾದಂಥ ಒಬ್ಬ ವ್ಯಕ್ತಿ. ಅಂಥ ವಿಚಾರಗಳನ್ನು ಪ್ರತಿಪಾದಿಸುತ್ತಾರೆ. ದುರ್ಬಲ, ವರ್ಗದ, ಶೋಷಿತ ವರ್ಗದ

ಮಹಿಳೆಯರ ಅಲ್ಪಸಂಖ್ಯಾತರ ಲೇಖಕರ ಲೇಖನಿಗಳು ಅನೇಕ ಸಂದರ್ಭಗಳಲ್ಲಿ ಬಾಲಿಷ -ವಾಗಿದ್ದರೂ ಕೂಡ ಅವರಿಗೆ ಪ್ರೋತ್ಸಾಹ ಕೊಡಬೇಕೆನ್ನುವಂಥ ಕಾರಣದಿಂದ ಪ್ರತಿಪಾದಿಸಿದ್ದು ಕೂಡ ಉಂಟು. ಹಾಗಿರತಕ್ಕಂಥವರು ಮತ್ತು ಇಲ್ಲಿ ಶೋಷಣೆಗೆ ಒಳಗಾಗಿರುವ ಒಂದು ಮಹಿಳಾವರ್ಗಕ್ಕೆ ಹೆಚ್ಚು ಸಕ್ರಿಯವಾಗಿ ಸಾಮಾಜಿಕವಾದಂಥ ಜೀವನದಲ್ಲಿ ಅವರು ಯಾವಾಗಲೂ ನಿರತರಾಗಿರಬೇಕು, ಕ್ರಿಯಾತ್ಮಕ ಚಟುವಟಿಕೆಗಳಲ್ಲಿ, ಸೃಜನಾತ್ಮಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕೆನ್ನುವ ಮುಖ್ಯ ಅಂಶವನ್ನು ಅವರು ಪ್ರತಿನಿಧಿಸುತ್ತಾರೆ. ಅವರ ನಾಟಕಗಳಲ್ಲಿ, ಅವರ ಕಾದಂಬರಿಗಳಲ್ಲಿ ಇಂಥ ಆಶಯಗಳನ್ನು ನಾವು ಕಂಡಿದ್ದೇವೆ. ಅವರ ಟೀಕೆ ಟಿಪ್ಪಣಿಗಳಲ್ಲಿ ಅವರ ಆಶಯವನ್ನು ಕಂಡಿದ್ದೇವೆ. ಆದರೆ ಇದಕ್ಕೆ ವಿರುದ್ಧವಾದ ನಿಲುವು ಹೇಗಿದೆ ಎಂದರೆ ತುಂಬಾ ಚೆನ್ನಾಗಿ ಅವರು ಬಟ್ಟೆ ಬರೆ ಹಾಕಿಕೊಂಡರೆ ಅಥವಾ ಅವರು ಹೆಚ್ಚು ವಿಶಾಲವಾಗಿ ವರ್ತಿಸತಕ್ಕಂಥ ಪ್ರವೃತ್ತಿಯನ್ನು ಕಂಡರೆ ಅಲ್ಲಿ ಯಾವುದೋ ಒಂದು ಸಂಶಯದ ಬೀಜವನ್ನು ಇಟ್ಟುಕೊಳ್ಳುವುದಾಗಿದ್ದರೆ ಇದೊಂದು ಉದಾಹರಣಾರ್ಥವಾಗಿ ಶ್ರೀಮತಿ ಜ್ಯೋತಿರೆಡ್ಡಿಯವರಿಗೂ ಫ್ಯೂಡಲ್ ಆಟಿಟ್ಯೂಡ್ ಇದೆ ಎನ್ನುವ ಮಾತನ್ನು ಅವರು ಬರೆಯುತ್ತಾರೆ. ಯಾವುದು ಫ್ಯೂಡಲ್ ಈ ದೇಶದ ಫ್ಯೂಡಲಿಸಂ ಎನ್ನುವುದು ಹೇಗಿದೆ, ಸರ್ಫ್‌ಡಂ ಎನ್ನುವುದು ಹೇಗಿದೆ ಎಂದು ಎಲ್ಲರಿಗೂ ಗೊತ್ತಿರುವಂಥದ್ದು. ಅಂದರೆ ಅದೊಂದು ಊಳಿಗಮಾನಪದ್ಧತಿ ಎನ್ನುವುದು ಆಗಿದ್ದರೆ ಪುರುಷ ಅಹಂಕಾರದ ಊಳಿಗಮಾನವೂ ಕೂಡ ಅತ್ಯಂತ ಪ್ರತಿಗಾಮಿಗಳು ಪ್ರಗತಿಪರವಾಗಿರುವ ಜನಗಳ ಮನಸ್ಸಿನ ಆಳದಲ್ಲಿ ಅಂಥ ಒಂದು ಪುರುಷ ಖುಷಿ ಅಹಂಕಾರದ ಬೀಜ ಇದೆ. ಒಬ್ಬ ಮಹಿಳೆ ತನ್ನ ನಡವಳಿಕೆ ಬಟ್ಟೆ ಬರೆ, ಅಲಂಕಾರ, ಮಾತು ಇವುಗಳ ಮೂಲಕವಾಗಿ ಅವರ ವ್ಯಕ್ತಿತ್ವವನ್ನು ತೂಕ ಮಾಡುತ್ತೇವೆ ಎನ್ನುವಂಥದ್ದೇನು, ಅದು ಬರೀ ದಾರ್ಶ್ನಿಕ ಪ್ರಶ್ನೆಯಲ್ಲ. ಅದಕ್ಕಿಂತ ಹೆಚ್ಚಾಗಿ ಪುರುಷ ಪ್ರವೃತ್ತಿಯ ಮತ್ತು ಪುರುಷ ಪ್ರಧಾನವಾದ ಸಮಾಜದ ಆ ಒಂದು ಬೀಜವನ್ನು ನಮ್ಮ ಪ್ರಗತಿ ಪರವಾಗಿರತಕ್ಕಂಥ ಲೇಖನಗಳ ಆ ಹಿನ್ನೆಲೆಯಲ್ಲಿ ಎಲ್ಲೋ ಒಂದು ಕಡೆಗೆ ಹುದುಗಿಸಿಕೊಂಡಿದ್ದಾರೆ ಎನ್ನುವುದು ಇಲ್ಲಿ ಕಂಡು ಬರುತ್ತದೆ. ಆದ್ದರಿಂದ ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವುದು ಲೀಲಾದೇವಿಯವರು, ವಿಮಲಾದೇವಿಯವರು ಅಥವಾ ಇಲ್ಲಿ ಶಾಸಕರಾಗಿ ಕೆಲಸ ನಿರ್ವಹಿಸುವಾಗ ಅವರು ತಪ್ಪಿದ್ದಾರೆ ಎನ್ನುವಂಥದ್ದು ತೌಲನಿಕವಾದ ಅಧ್ಯಯನ ಮಾಡಿದರೆ ಅದು ಇಲ್ಲಿ ಟೀಕೆಗೆ ಅರ್ಹವಾಗಿರುವುದಲ್ಲ. ಅದು ಹಕ್ಕುಚ್ಯುತಿಯೂ ಆಗಲಾರದು. ಸ್ವಲ್ಪಮಟ್ಟಿಗೆ ನಾವು ಬಹಳ ಮಟ್ಟಿಗೆ ಉದಾರಿಗಳಾಗಿರಬೇಕು ಮತ್ತು ಒಂದೊಂದು ಸಂದರ್ಭದಲ್ಲಿ ಭಾಷೆಯ ಸಾಧ್ಯತೆಗಳ ಬಗ್ಗೆ ಅವರು ಬರೆದಿರತಕ್ಕಂಥದ್ದನ್ನು ನಾವು ಅತ್ಯಂತ ಪ್ರೀತಿಯಿಂದ ಗೌರವಿಸುತ್ತೇವೆ. ಒಂದು ಹೊಸ ಅಧ್ಯಾಯವನ್ನೇ ಪತ್ರಿಕಾ ರಂಗದ ವಿಚಾರದಲ್ಲಿ ಅವರು ಪ್ರಾರಂಭ ಮಾಡಿದರು. ಅವರ ಕಾದಂಬರಿ, ನಾಟಕಗಳಂತೆ ಈ ಪತ್ರಿಕಾ ರಂಗದ ಭಾಷೆಯ ಸಾಧ್ಯತೆ ಮತ್ತು ಎಲ್ಲೆಗಳ ಕುರಿತಾಗಿ ಅವರು ಮಾಡಿರುವುದು ಒಂದು ಮೈಲುಗಲ್ಲು. ಅದನ್ನು ನಾವು ಒಪ್ಪುತ್ತೇವೆ. ಆದರೆ ನಾವು ಇವತ್ತು ಹಕ್ಕುಚ್ಯುತಿಗೆ ಸಂಬಂಧಿಸಿದಂತೆ ಮಾತನಾಡಿದಾಗ ಅನಾವಶ್ಯಕವಾಗಿರತಕ್ಕಂಥದ್ದು, ಸಾಬೀತು ಅಲ್ಲದೇ ಇರತಕ್ಕಂಥದ್ದು ಒಬ್ಬ ವ್ಯಕ್ತಿಯನ್ನು ಅನಾವಶ್ಯಕವಾಗಿ ಅವರ ವ್ಯಕ್ತಿತ್ವಕ್ಕೆ ಕುಂದು ಬರುವ ರೀತಿಯ, ಶೀಲವನ್ನೂ ಶಂಕಿಸುವಂಥ ರೀತಿಯ ದ್ವಂದ್ವದ ಲೇವಡಿಯ ಮಾತುಗಳನ್ನು

ಮಾತನಾಡಿದರೆ ಏನಾಗಬಹುದು? ಆದ್ದರಿಂದ ಯಾವ ಅಪೇಕ್ಷಿತ ಫಲವನ್ನು ಪಡೆಯಲಿಕ್ಕೆ ಪ್ರಯತ್ನವಾಗುತ್ತದೆ? ಏನೋ ಒಂದು ಕಡೆಗೆ ಲೇವಡಿ ಮಾಡತಕ್ಕಂಥದ್ದು, ಯಾವುದೊ ಕಡೆಗೆ ಗೇಲಿ ಮಾಡತಕ್ಕಂಥದ್ದು ಅದರಲ್ಲಿ ಅಧಿಕಾರದಲ್ಲಿರುವವರ ಬಗ್ಗೆ ಹೆಚ್ಚು ಲೇವಡಿಯನ್ನು ಮಾಡತಕ್ಕಂಥದ್ದು ಒಂದು ವೇಳೆ ಸಹಜ ಎಂದೆನಿಸಿದರೂ ಕೂಡ ಅದಕ್ಕೂ ಕೂಡ ಒಂದು ಮಿತಿ ಇರುತ್ತದೆ. ಆ ದೃಷ್ಟಿಯಿಂದ ಇವತ್ತು ಏನು ಮಹಿಳಾ ಸದಸ್ಯರಿದ್ದರೆ ಅವರು ತಮ್ಮ ಕರ್ತವ್ಯವನ್ನು ನಿಭಾಯಿಸುವಂಥ ವಿಚಾರಗಳ ಬಗ್ಗೆ ಅಲ್ಲಿ ಟೀಕೆ ಇಲ್ಲ. ಅದು ಸಪೇಕ್ಷೆವಾಗಿರತಕ್ಕಂಥ ಸಾಪೇಕ್ಷವಾದಂಥ ಟೀಕೆ. ಆದರೆ ಅವರ ಇನ್ನುಳಿದ ವಿಚಾರಗಳ ಬಗ್ಗೆ ಬರೆದಿರತಕ್ಕಂಥ ವ್ಯಂಗ್ಯ ಏನಿದೆ, ಅದು ಉದ್ಧಟತನ ನೀತಿ ಮತ್ತು ಅನಪೇಕ್ಷಣೀಯ. ಒಬ್ಬ ವ್ಯಕ್ತಿ ಈ ರೀತಿಯಾಗಿ ತನ್ನ ಅಧಿಕಾರವನ್ನು ನಾವು ಹೇಗೆ ದುರುಪಯೋಗಪಡಿಸಿಕೊಳ್ಳಬಾರದೋ ಹಾಗೆಯೇ ಪತ್ರಿಕಾಕರ್ತರು ಇದನ್ನು ದುರುಪಯೋಗಪಡಿಸಿಕೊಳ್ಳತಕ್ಕಂಥದ್ದಲ್ಲ. ಮತ್ತೆ ಅವರಿಗೂ ಕೂಡ ತಮ್ಮದೇ ಆದಂಥ ಎಷ್ಟೆಷ್ಟು ಹೆಚ್ಚು ಅಧಿಕಾರವಿರುತ್ತದೆ, ಅಷ್ಟಷ್ಟು ಹೆಚ್ಚು ಸಂಯಮ ಇರಬೇಕು ಎನ್ನುವಂಥ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಸಂಯಮರಹಿತವಾಗಿರುವ ಅಧಿಕಾರ ಅದು ಯಾವಾಗಲೂ ಕೂಡ ಅದು ನಿರಂಕುಶ ಪ್ರಭುತ್ವವಾಗಿದೆ. It becomes a tyrannical ಆ ದೃಷ್ಟಿಯಿಂದ ಇವತ್ತೇನು ಅವರು ಶ್ರೀಮತಿ ಪ್ರಮೀಳಾನೇಸರ್ಗಿಯವರು ತಂದಿದ್ದಾರೆ, ಬೇರೆ ಸದಸ್ಯರೂ ಕೂಡ ಈ ವಿಚಾರದಲ್ಲಿ ಏನೊಂದು ಗೊತ್ತುವಳಿಯನ್ನು ತಂದಿದ್ದಾರೆ, ಆ ಗೊತ್ತುವಳಿಯನ್ನು ನಾವು ಸ್ವಾಗತ ಮಾಡುತ್ತೇವೆ. ಮತ್ತು ಆ ದೃಷ್ಟಿಯಿಂದ ಅವರೇನು ಉತ್ತರವನ್ನು ಕೊಡುತ್ತಾರೋ ಕೊಡಲಿ. ಇಲ್ಲಿ ನಾನು ಶ್ರೀಮಾನ್ ನಂಜೇಗೌಡರು ಹೇಳಿದಷ್ಟು ದೂರ ಹೋಗಲಿಕ್ಕೆ ತಯಾರಿಲ್ಲ. ಅಥವಾ ನನಗೆ ವೈಯಕ್ತಿಕವಾದಂಥ ಅಭಿಪ್ರಾಯ ಇತ್ತು, ವೀರಪ್ಪಮೊಯಿಲಿಯವರು ಅದನ್ನು ಪದೇ ಪದೇ ಕೇಳಿದರು, ಪ್ರಕಾಶ್ ನೀವು ಹೇಳುತ್ತೀರಿ ಎಂದು. ಅದಕ್ಕೆ ನನ್ನ ಅಭಿಪ್ರಾಯ ಬೇರೆ ಇತ್ತು. ನನಗೆ ಅದು ಪ್ರಿವಿಲೇಜ್ ಕಮಿಟಿಗೆ ಹೋಗಬೇಕು ಎನ್ನುವ ಅಭಿಪ್ರಾಯವಿತ್ತು. ಆದರೆ ಅದು ಮುಖ್ಯವಾಗಿರತಕ್ಕಂಥದ್ದಲ್ಲ. ಅಲ್ಲಿ ಒಂದು ಸ್ವಾತಂತ್ರ್ಯವನ್ನು ಎತ್ತಿ ಹಿಡಿಯಬೇಕಾದ ಸಂದರ್ಭ ಬಂದಾಗ ಅದು ಕಮಿಟಿಗೆ ಹೋಗಬೇಕು ಎನ್ನುವ ಅಭಿಪ್ರಾಯವಿತ್ತು. ಆದರೆ ಒಟ್ಟಾಗಿ ಇಡೀ ಒಂದು ಸದನದ ಅಭಿಪ್ರಾಯವನ್ನು ಕ್ರೋಢೀಕರಿಸಿದಂಥ ಸಂದರ್ಭಗಳಲ್ಲಿ ಅದು ನಿಜವಾಗಿಯೂ ತಪ್ಪು ಮಾಡಿದ್ದಾರೆ ಎಂದು ಕಂಡುಕೊಂಡಿರುವ ಸಂದರ್ಭಗಳಲ್ಲಿ ನಾನು ಹೇಳುವ ಮಾತು ಇಷ್ಟೆ. ನಾವು ಹೆಚ್ಚು ಅಧಿಕಾರವನ್ನು ಬೇರೆ ಬೇರೆ ಮಾಧ್ಯಮಗಳ ಹಿಡಿತದ ಮೂಲಕವಾಗಲಿ, ಸಾಂಸ್ಕೃತಿಕ ರಂಗದ ಮೂಲಕವಾಗಲಿ, ಬರವಣಿಗೆಗಳ ಮೂಲಕವಾಗಿ, ಭಾಷಣದ ಮೂಲಕವಾಗಿ ಸಮಾಜಕ್ಕೆ ನಾಯಕತ್ವ ಕೊಡಬೇಕಾಗಿರುವ ಗುಂಪುಗಳು ಅಥವಾ ಸಂಘಟನೆಗಳು, ಪತ್ರಿಕೆಗಳು, ಮಾಧ್ಯಮಗಳು ಅದಕ್ಕೆ ವಿರೋಧವಾಗಿರತಕ್ಕಂಥ ವಿರೋದಾಭ್ಯಾಸದ ನಿಲುವುಗಳನ್ನು ತೆಗೆದುಕೊಳ್ಳುವಂಥದ್ದು ಸರಿಯಾದುದಲ್ಲ. ಇಲ್ಲಿ ಅವರಿಗೆ ಪಾಠ ಕಲಿಸಬೇಕೆನ್ನುವುದೂ ಅಲ್ಲ. ಅಥವಾ ಅವರೊಂದು ವೇಳೆ ಕ್ಷಮೆಯನ್ನು ತೋರಿಸಿದರೆ ಅದನ್ನು ನಾವು ತಿರಸ್ಕರಿಸಬೇಕೆನ್ನುವಂಥ ನಂಜೇಗೌಡರ ಮಾತನ್ನೂ ಕೂಡ ನಾನು ಒಪ್ಪುವುದಿಲ್ಲ. ಮತ್ತೆ ಸದನ ಇದರ ಬಗ್ಗೆ ಯೋಚನೆಯನ್ನು ಮಾಡಲಿ. ಅದು ಅವರ ವೈಯಕ್ತಿಕ ಅಭಿಪ್ರಾಯ. ಏಕೆಂದರೆ ಇದಕ್ಕೊಂದು ಯಾವುದಾದರೂ ಮುಕ್ತಾಯದ ಹಾಡನ್ನು, ಚರಮಗೀತೆಯನ್ನು ಹಾಡಬೇಕೆನ್ನುವಂಥ ಮಾತು ಇರಬಹುದು. ಆದರೆ ಕ್ಷಮಾರಹಿತವಾಗಿರುವ

ಅಪರಾಧ ಯಾವುದೂ ಇಲ್ಲ. ಯಾವುದೇ ಅಪರಾಧಕ್ಕೆ ಕ್ಷಮೆಯೇ ಅಂತಿಮವಾಗಿರುವುದು. ಅಥವಾ ಅವರೇನು ಮಾಡುತ್ತಾರೆ ಎನ್ನುವುದು ಗೊತ್ತಿಲ್ಲ ವಿಷಾದಿಸಬಹುದು, ಕ್ಷಮಿಸಬಹುದು. ಅಥವಾ ನಾನು ಬರೆದಿದ್ದೇ ಸರಿ ಎನ್ನುವಂಥ ನಿಲುವನ್ನು ಅವರು ತಾಳಬಹುದು. ಅದೇನೇ ಇರಲಿ, ಈ ದಿವಸದ ಗೊತ್ತುವಳಿಯ ಪ್ರಕಾರ ನಾನೂ ಕೂಡ ಮಾನ್ಯ ಮಹಿಳಾ ಸದಸ್ಯರಿಗೆ ಅಭಿನಂದಿಸುತ್ತೇನೆ. ಅವರು ಅವರಿಂದ ಉತ್ತರವನ್ನು ತರಿಸಿಕೊಳ್ಳಲಿ. ಸ್ಪಷ್ಟೀಕರಣವನ್ನು ಕೇಳಿ, ಸ್ಪಷ್ಟೀಕರಣದ ನಂತರ ನಾವು ಪಕ್ಷಾತೀತವಾಗಿ ಮತ್ತು ನಿಷ್ಪಕ್ಷಪಾತವಾಗಿ ನಿರ್ಣಯವನ್ನು ತೆಗೆದುಕೊಳ್ಳಿ ಎನ್ನುವಂಥದ್ದು ಏನು ಗೊತ್ತುವಳಿ ಇದೆ, ಇದು ಬಹಳ ಅರ್ಥಪೂರ್ಣವಾದ ಗೊತ್ತುವಳಿ. ಏಕೆಂದರೆ ನಾವೆಲ್ಲಾ ಅಪಾಯಕ್ಕೆ ಸಿಕ್ಕತಕ್ಕಂಥವರು ಆಗಿದ್ದೇವೆ. ಎಲ್ಲರ ಮೇಲೆ ಕೂಡ ಟೀಕೆಟಿಪ್ಪಣಿ ಇರತಕ್ಕಂಥದ್ದು ಇರುವುದರಿಂದ ಆ ಟೀಕೆ ಟಿಪ್ಪಣಿಗಳ ಕಾರಣಕ್ಕಾಗಿ ಅವರ ಮೇಲೆ ನಾವು ಪೂರ್ವಗ್ರಹಪೀಡಿತರಾಗಿದ್ದೇವೆ ಎನ್ನುವ ಅಪಾದನೆಗಳೂ ಬರಬಹುದು.

7.30 ಪಿ.ಎಂ.

You are all biased because I have discussed about your character about your functioning. I am one of vocal and voltalie critic of your functioning. ಎನ್ನುವಂತಹ ಮಾತನ್ನು ಅವರು ಬೇರೆ, ಬೇರೆ ರಂಗದಲ್ಲಿ ತರುವುದಕ್ಕೆ ವೇದಿಕೆಗಳ ಮೇಲೆ ತರುವುದಕ್ಕೆ ಸಾಧ್ಯ ಇದೆ. ಆದುದರಿಂದ ನಾವು ಯಾವುದೇ ನಿರ್ಣಯವನ್ನು ಈ ಸದನ ತೆಗೆದುಕೊಂಡಾಗ ಆ ನಿರ್ಣಯ ಒಂದು ಐತಿಹಾಸಿಕ ದಾಖಲೆಯ ನಿರ್ಣಯವಾಗುತ್ತದೆ. ಬೇರೆ ಒಂದು ಸಂದರ್ಭಗಳಲ್ಲಿ, ಬೇರೆ ಒಂದು ಸದನ ಮತ್ತು ಸಮಾಜದಲ್ಲಿ ಇದು ಒಂದು ಉದಾಹರಿಸಲ್ಪಟ್ಟ ಒಂದು ನಿರ್ಣಯವಾಗುವುದರಿಂದ ನಾವು ಹೆಚ್ಚು ಜಾಗೃತರಾಗಿ, ಸಂಯಮಯುತವಾಗಿ ನೋಡ ಬೇಕಾಗಿರುವುದರಿಂದ ದಯವಿಟ್ಟು ಶ್ರೀಮತಿ ಪ್ರಮೀಳಾ ಅವರು ಮತ್ತು ಮಹಿಳಾ ಸದಸ್ಯರು ಏನು ಕೊಟ್ಟಿದ್ದಾರೆ ಅದರ ಮೂಲಕವಾಗಿ ಇಡೀ ಸದನದ ಅಭಿಪ್ರಾಯ ಏನು ಇದೆ, ಅವರು ಈ ವಿಚಾರದಲ್ಲಿ ಏನು ಸ್ಪಷ್ಟೀಕರಣ ಕೊಡುತ್ತಾರೆ ಈ ವಿಚಾರದಲ್ಲಿ ಅಥವಾ ಅದನ್ನು ಸರಿಪಡಿಸಿಕೊಡುತ್ತಾರೆ ಎನ್ನುವುದರ ನಂತರ ಮತ್ತೆ ಈ ಸದನ ತನ್ನ ವಿವೇಕದ ಮೂಲಕವಾಗಿ ನಿರ್ಣಯವನ್ನು ತೆಗೆದುಕೊಳ್ಳುವ ಹಕ್ಕನ್ನು ಕಾದಿರಿಸಿ ಇದನ್ನು ನಾವು ಸ್ವಾಗತಿಸುತ್ತೇವೆ ಎಂದು ಹೇಳಿ, ತಾವು ಇಷ್ಟು ಸಮಯ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಸನ್ಮಾನ್ಯ ಅಧ್ಯಕ್ಷರೆ, ಎರಡೂವರೆ ವರ್ಷಗಳಲ್ಲಿ ಮೊದಲನೆ ಬಾರಿಗೆ ನಾನು ಈ ಸದನದಲ್ಲಿ ಸಾತ್ವಿಕ ಕೋಪವನ್ನು ನೋಡಿದ್ದೇನೆ. ಇಡೀ ಸದನ ತನ್ನ righteous indignation ಅನ್ನು ವಿವಿಧ ರೀತಿಯಲ್ಲಿ ಇವತ್ತು ವ್ಯಕ್ತಪಡಿಸಿದೆ. ಶ್ರೀ ವಾಟಾಳ್ ನಾಗರಾಜ್ ಅವರು ಕೂಡ ಪತ್ರಿಕೆಯಲ್ಲಿ ಬಂದಿರುವುದರಿಂದ ಬಗ್ಗೆ ಅದು ಸರಿ ಎಂದು ಹೇಳುತ್ತಾ ಇಲ್ಲ. ಅವರೂ ಕೂಡ ತಮ್ಮ ದುಃಖವನ್ನು ತೋರಿಸಿದ್ದಾರೆ. ಇದನ್ನು ಯಾವ ರೀತಿ ತೆಗೆದುಕೊಳ್ಳಬೇಕು ಎಂದು ನಿಮ್ಮಭಿನ್ನಾಭಿಪ್ರಾಯ, ಮಾನನಷ್ಟ ಎಂದು ತೆಗೆದುಕೊಳ್ಳಬೇಕೋ ಅಥವಾ

ಪ್ರಿವಿಲೇಜ್ ಎಂದು ತೆಗೆದುಕೊಳ್ಳಬೇಕೋ ಎಂಬುದು ಇಲ್ಲಿ ಬಂದಿರುವ ಪ್ರಶ್ನೆ ಆದರೆ ಬಂದಿರುವುದರ ಬಗ್ಗೆ ಸಭೆ ತಮ್ಮ ಸಾತ್ವಿಕ ಕೋಪವನ್ನು ವ್ಯಕ್ತಪಡಿಸಿದೆ. ಸನ್ಮಾನ್ಯ ಸಭಾಧ್ಯಕ್ಷರೆ, ಮೂರು ನಾಲ್ಕು ದಿವಸಗಳ ಹಿಂದೆ, ನಾನು ಇಲ್ಲಿಂದ ಆ ಜಾಗದಲ್ಲಿ ಕೂತಾಗ ಸದಾನಂದ ಗೌಡರು ಪುತ್ತೂರಿನ ಕುಮಾರಿ ಸೌಮ್ಯಾಳ ಬಗ್ಗೆ ಯಾವ ರೀತಿ ಆಕ್ರಮಣ ಆಯಿತು ಎಂದು ಹೇಳುತ್ತಿರುವಾಗ ನಾನು ಆ ಸಮಯದಲ್ಲಿ ಮೌನವಾಗಿ ರೋಧಿಸುತ್ತಿದ್ದೆ. ನಮ್ಮ ಮನೆಯ ಹುಡುಗಿಗೆ, ಅಥವಾ ನಮಗೆ ಸಂಬಂಧಪಟ್ಟಂತಹ ಹುಡುಗಿಗೆ ಈ ರೀತಿ ಆಗಿದ್ದರೆ ಏನಾಗುತ್ತಿತ್ತು ಎಂದು. ಇವತ್ತು ಎರಡನೇ ಬಾರಿ ನಮ್ಮ ಸಹೋದರಿಯ ಒಂದು ರೀತಿ ಅಸಾಹಯಕತನ, ಒಂದು ರೀತಿ ಇದು ಅನ್‌ಈಕ್ವಲ್ ಫೈಟ್ ಇದು. ಪ್ರಾಯಶಃ ಇವರು ಸದಸ್ಯರು ಆಗದೇ ಇದ್ದಿದ್ದರೆ, ಈ ವಿಷಯವನ್ನು ಯಾವ ರೀತಿ ಎದುರಿಸುತ್ತಿದ್ದರೋ ಏನೋ ನಮಗಂತೂ ಗೊತ್ತಿಲ್ಲ. ಇವತ್ತು ಒಂದು ರೀತಿ ಸುದೈವ. ಇಡೀ ಸದನ ಅವರ ಜೊತೆ ತಮ್ಮ ಧ್ವನಿಯನ್ನುಗೂಡಿಸಿ, ಈ ರೀತಿ ಆಗುತ್ತಿರುವುದಕ್ಕೆ ಏನಾದರೂ ಒಂದು ಪರಿಹಾರ ಹುಡುಕಬೇಕು, ಒಂದು ಇತಿಶ್ರೀ ಹಾಡಬೇಕು ಎಂದು ನಾವೆಲ್ಲಾ ತೀರ್ಮಾನ ಮಾಡಿದ್ದೇವೆ. ಸಭಾಧ್ಯಕ್ಷರೆ, ನಾನು ಇತ್ತೀಚೆಗೆ ಒಂದು ಹೇಳಿಕೆಯನ್ನು ಓದಿದೆ. ನಾವು ಇನ್ನೊಬ್ಬರ ಕಷ್ಟವನ್ನು ಇನ್ನೊಬ್ಬರ ದುಃಖವನ್ನು ಅರಿತುಕೊಳ್ಳಬೇಕಾದರೆ, ಬಹಳ ಸರಳವಾದ ಒಂದು ಮಾರ್ಗ ಇದೆ. ಅದೇನೆಂದರೆ, ನಾನು ಅವರ ಜಾಗದಲ್ಲಿ ನಿಂತು ಯೋಚಿಸಬೇಕು. ಅವರ ಜಾಗದಲ್ಲಿ ನಿಂತಾಗ, ನನ್ನ ಬಗ್ಗೆ ಆ ರೀತಿ ಹೇಳಿಕೆ ಕೊಟ್ಟರೆ ನಾನು ಹೇಗೆ ಹೋಗುತ್ತೇನೆ, ಯಾರಿಗೆ ಮುಖ ತೋರಿಸುತ್ತೇನೆ, ಹೇಗೆ ಇದನ್ನು ಎದರಿಸುತ್ತೇನೆ ಎಂದು ತಿಳಿದುಕೊಳ್ಳಲು ಇದು ಒಂದು ಸರಳವಾದಂತಹ ಸೂತ್ರ. ಶೂದ್ರ ಶ್ರೀನಿವಾಸ್ ಅವರು ಒಂದು ಸಲ್ಲಾಪ ಎಂಬ ಮ್ಯಾಗಜೀನ್ ಪ್ರಾರಂಭ ಮಾಡಿದ್ದಾರೆ. ಅದರಲ್ಲಿ ಲಂಕೇಶ್ ಅವರಿಗೆ ಒಂದು ಕಿವಿ ಮಾತು ಈ ವಾರದ ಪತ್ರಿಕೆಯಲ್ಲಿ ಬರೆದಿದ್ದಾರೆ, ಬಹಳ ಚೆನ್ನಾಗಿ ಬರೆದಿದ್ದಾರೆ. ಅದೇನೆಂದರೆ ನಾಲ್ಕು ಗೋಡೆ ಮಧ್ಯ ಕುಳಿತುಕೊಂಡು ಬರೆಯುವಾಗ ಬಹಳ ಸುಲಭವಾಗಿರುತ್ತದೆ, ಅದನ್ನು ಬರೆಸಿಕೊಂಡು ಸಮಾಜದ ನಡುವೆ ಹೋಗಬೇಕು. ಅವರು ಹಾಗೆ ಹೋದಾಗ, ಅವರ ಪರಿಸ್ಥಿತಿ ಹೇಗಾಗಿರುತ್ತದೆ ಎನ್ನುವುದನ್ನು ಸಹ ಸ್ವಲ್ಪ ಯೋಚನೆ ಮಾಡಬೇಕು ಎಂಬ ಕಿವಿ ಮಾತನ್ನು ಹೇಳಿದ್ದಾರೆ. ನಮ್ಮ ಹಿರಿಯರಾದ ಸನ್ಮಾನ್ಯ ಶ್ರೀ ವೀರಪ್ಪಮೊಯಿಲಿ ಅವರು ಮಾತನಾಡುತ್ತಾ, ನಮ್ಮ ಸಹೋದರಿಯರಿಗೆ, ಅಭಿನಂದನೆಯನ್ನು ಸಲ್ಲಿಸಿದರು. They have shown restraint ಎಂದು ಬರೆಯುವಾಗಲೂ ಕೂಡ ಸ್ವಲ್ಪ ರಿಸ್‌ಸ್ಟ್ರೆಂಟ್ ಇದ್ದಿದ್ದರೆ, our first copy should not become the final copy ಎಂದು ಇದ್ದಿದ್ದರೆ, ಇನ್ನೊಂದು ಸಲ ನೋಡಿದ್ದರೆ, ಪ್ರಾಯಶಃ ಅನೇಕ ಅಂಶಗಳು ನಮಗೆ ಗೋಚರವಾಗುತ್ತಿತ್ತು. ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತು ಪರಿಸ್ಥಿತಿ ಏನಾಗಿದೆ ಅಂದರೆ, ಪತ್ರಿಕಾ ಸಮೂಹದ ಬಗ್ಗೆ ಯೋಚನೆ ಮಾಡಿದಾಗ, ಅನೇಕ ಆಟಗಳನ್ನು ನೋಡಿದಾಗ ಅದು ನಾವೆಲ್ಲಾದರೂ ಎಡವಿದರೆ, corrective measures ತೆಗೆದು ಕೊಳ್ಳಬೇಕು. ಅಥವಾ ಎನ್‌ಲೈಟನ್ ಮಾಡಬೇಕು. ಆದರೆ instead of correcting, instead of enlightening they are hanging, without giving any opportunity it amounts to almost public hanging. ಅನೇಕ ಕಡೆಗಳಲ್ಲಿ ಅಂದರೆ ಸೌದಿ ಅರೇಬಿಯಾದಲ್ಲಿ ಯಾವ ರೀತಿ ಸಾಮೂಹಿಕ public executions ಆಗುತ್ತದೆ, ಆ ರೀತಿ ಇವತ್ತು public execution in a sense

ಆಗುತ್ತಾ ಇದೆ. ಸನ್ಮಾನ್ಯ ಸಭಾಧ್ಯಕ್ಷರೇ, ನನಗೆ ಈ ಸಂದರ್ಭದಲ್ಲಿ ಮಹಾತ್ಮ ಗಾಂಧಿ ಅವರ ಒಂದು ಹೇಳಿಕೆ ನೆನಪಿಗೆ ಬಂತು. People who take away liberty and freedom of an individual for their temporary happiness never deserve freedom or liberty forever. ಎಂದು ಹೇಳಿದ ಹಾಗೆ, ಆ ಪತ್ರಿಕೆಯವರು ತಮ್ಮ ಸಂತೋಷಕ್ಕೆ ಎಂದು ಆ ರೀತಿಯಾಗಿ ಬರೆದಿದ್ದರೆ ನಮಗೆ ಆ ಲಿಬರ್ಟಿದು ಒಂದು ಪ್ರಶ್ನೆ ಬರುತ್ತದೆ. ಈ ದೇಶದಲ್ಲಿ ಯಾವಾಗ ಯಾವಾಗ ನಮ್ಮ ಫ್ರೀಡಂ ಅಫ್ ಪ್ರೆಸ್‌ಗೆ ತೊಂದರೆ ಬಂದಿದೆ, ಆ ಸಮಯದಲ್ಲೆಲ್ಲಾ ನಾವು ಧ್ವನಿ ಎತ್ತಿದ್ದೇವೆ. ಬಹಳ ಇತ್ತೀಚೆಗೆ ಅಂದರೆ, ಸನ್ಮಾನ್ಯ ಶ್ರೀ ರಾಜೀವ್ ಗಾಂಧಿ ಅವರು ಪ್ರಧಾನ ಮಂತ್ರಿಗಳಾದಾಗ, ಒಂದು ಡಿಫಮೇಷನ್ ಬಿಲ್ ತಂದದ್ದು. ಅದರ ವಿರುದ್ಧ ಕೂಡ ನಾವು ಧ್ವನಿ ಎತ್ತಿದ್ದೇವೆ. ಎಲ್ಲೋ ಫ್ರೀಡಂಗೆ ಮತ್ತು ಲೈಸೆನ್ಸ್‌ಗೆ ನಡುವೆ ಇವತ್ತು ಒಂದು ಲೈನ್ ಎಳೆಯಬೇಕಾದ, ಅಗತ್ಯ ಇದೆ. ಈ ಸಂದರ್ಭದಲ್ಲಿ ಪ್ರಾಯಶಃ ಇಡೀ ರಾಜ್ಯದ ಗಮನವನ್ನು ಏನು ಸೆಳೆದಿದ್ದೇವೆ, ಈ ಸಂದರ್ಭದಲ್ಲಿ ನನಗೆ ಅನ್ನಿಸುತ್ತದೆ, ಬಹಳಷ್ಟು ಜನ ಬಹಳಷ್ಟು ಸಂದರ್ಭದಲ್ಲಿ ಈ ರೀತಿಯ ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದಾರೆ. Right of no reply ಒಂದು ಪರಿಸ್ಥಿತಿ ಇದೆ. ಇವತ್ತು ನಮ್ಮ ಸಹೋದರಿಯರಿಗೆ ವಿಶೇಷವಾಗಿ ಅವರು ಕಣ್ಣಲ್ಲಿ ನೀರು ಹಾಕಿದಾಗ, ಇಡೀ ಸದನ ಅವರ ಜೊತೆಯಲ್ಲೇ ನಮ್ಮ ಕಣ್ಣಿನಲ್ಲೂ ಸಹ ನೀರು ಬಂದಿದೆ. ಶ್ರೀಮತಿ ವಿಮಲಾ ಬಾಯಿ ದೇಶ್‌ಮುಖ್ ಅವರು ಹೇಳಿದ ಹಾಗೆ, ನಮಗೆ ಏಕೆ ರಾಜಕಾರಣ ಬೇಕು ? ಈ ರೀತಿ ಅನ್ನಿಸಿಕೊಳ್ಳುವುದಕ್ಕೆ ರಾಜಕಾರಣ ಬೇಕೆ ಎಂದು ಹೇಳಿ ನಮ್ಮ ಹೃದಯವನ್ನು ತಟ್ಟಿದ್ದಾರೆ. ಈ ಸಂದರ್ಭದಲ್ಲಿ 50ನೇ ವರ್ಷದ ಸುವರ್ಣ ಮಹೋತ್ಸವದಲ್ಲಿ ಅನೇಕ ಸಂಗತಿಗಳ ಬಗ್ಗೆ ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕೆಂದು ನಾವು ಅಂದುಕೊಳ್ಳುತ್ತೇವೆ. ಆದರೆ ಈ ಬಗ್ಗೆ ಕೂಡ ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕು. ಪ್ರೆಸ್ಸಿನವರು as our friend as our guide, as our philosopher, they should guide us. ನಮ್ಮ ಬಗ್ಗೆ ಏನೇ ಇದ್ದರೂ ಸಹ ನಮ್ಮ ಬಗ್ಗೆ ಕರೆಕ್ಷನ್ಸ್ ಮಾಡಲಿ, we are ready to correct ourselves. ಆದರೆ ಇವತ್ತು ಈ ರೀತಿಯಾಗಿ ಸಂಪೂರ್ಣವಾಗಿ ಒಂದು ರಾಜಕೀಯ ಜೀವನಕ್ಕೆ ಇತಿಶ್ರೀ ಹಾಡುವುದು, ಮತ್ತು ಅವರು ಇನ್ನು ಮುಂದೆ ಏನೂ ಮಾಡುವುದಕ್ಕೆ ಆಗದೇ ಇರುವಂತಹ ಒಂದು ಪರಿಸ್ಥಿತಿ ತಲುಪುವುದು, ಇದು ಯಾವುದೇ ದೃಷ್ಟಿಯಿಂದ ಒಳ್ಳೆಯದಲ್ಲ, ಈ ಸಂದರ್ಭದಲ್ಲಿ ಶ್ರೀಮತಿ ಪ್ರಮೀಳಾ ನೇಸರ್ಗಿ ಅವರು ಮತ್ತು ಇತರೇ ಸೋದರಿ ಶಾಸಕಿ ಅವರು ತಂದಿರುವ ನಿರ್ಣಯಕ್ಕೆ ನನ್ನ ಧ್ವನಿಯನ್ನು ಸೇರಿಸುತ್ತಾ, ಈ ಸಂಗತಿಯನ್ನು ಹಕ್ಕುಚ್ಯುತಿಯಡಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಹಿರಿಯ ಸದಸ್ಯರು ಮತ್ತು ಅನೇಕ ಮಿತ್ರರೂ ಕೂಡ ಈ ಒಂದು ನಿಲುವಳಿ ಬಗ್ಗೆ ಒಂದು ಮೋಷನ್ ಮೇಲೆ ಮಾತನಾಡಿದ್ದಾರೆ. ಇದರಲ್ಲಿ ನಾನು ವಿಶೇಷವಾಗಿ ಹೆಚ್ಚಿಗೆ ಹೇಳುವುದು ಏನೂ ಉಳಿದಿಲ್ಲ. ಈಗಾಗಲೇ ಸನ್ಮಾನ್ಯ ಶ್ರೀ ವೀರಪ್ಪ ಮೊಯಿಲಿ ಅವರು, ಶ್ರೀಮಾನ್ ನಂಜೇಗೌಡರು, ಮತ್ತು ಶ್ರೀಮತಿ ಪ್ರಮೀಳಾ ನೇಸರ್ಗಿ ಅವರಂತೂ ಸ್ಪಷ್ಟವಾಗಿ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ, ಮತ್ತು ಯಾವ ರೀತಿ ಹಕ್ಕುಚ್ಯುತಿ ಆಗುತ್ತದೆ ಎನ್ನುವ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದಾರೆ. ಆದರೆ ಒಂದು

ಮಾತನ್ನು ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಕೇವಲ ನಮಗೆ ಇಲ್ಲಿ ಸ್ವಾತಂತ್ರ್ಯ ಇದೆ ಎಂದು ಹೇಳಿ, ಮತ್ತು ಆ ಸ್ವಾತಂತ್ರ್ಯವನ್ನು ಚಲಾಯಿಸಬೇಕು ಎಂಬ ದೃಷ್ಟಿಯಿಂದ ಈ ಪ್ರಸ್ತಾವನೆಗೆ ನಾವು ಯಾರೂ ಕೂಡ ಬೆಂಬಲ ಕೊಡುತ್ತಾ ಇಲ್ಲ. ಬೆಂಬಲ ಕೊಡುವಂತಹ ಕಾರಣ ಏನೆಂದರೆ, ಇಡೀ ದೇಶದಲ್ಲಿ ಮಹಿಳೆಯರಿಗಾಗಿ 33 ಪರ್ಸೆಂಟ್ ರಿಸರ್ವೇಷನ್ ಒಂದು ಪ್ರಸ್ತಾವ ಬರುವಾಗ, ಅದೇ ಸಂದರ್ಭದಲ್ಲಿ ಇಂತಹ ಲೇಖನಗಳು ಪ್ರಕಟ ಆಗುವಾಗ ಅದರ ದುಷ್ಪರಿಣಾಮ ಸಮಾಜದ ಮೇಲೆ ಏನು ಆಗುತ್ತದೆ ಅನ್ನುವುದನ್ನೂ ಕೂಡ ಅರ್ಥ ಮಾಡಿಕೊಳ್ಳುವುದು ನಮ್ಮ ಕರ್ತವ್ಯ. ಕೇವಲ ನಾವು ಒಂದೇ ದೃಷ್ಟಿಯಿಂದ ನೋಡುವಂಥದ್ದು ಅಲ್ಲ. ಇದರಲ್ಲಿ ಅನೇಕ ವಿಚಾರಗಳೂ ಕೂಡ ಇವೆ. ಅದನ್ನು ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರೂ ಕೂಡ ಒಪ್ಪುತ್ತಾರೆ, ಅವರು ಕೂಡ ಈ ಬರವಣಿಗೆಯಲ್ಲಿ defamation or privilege ಎನ್ನುವಂತದ್ದನ್ನು ನೀವು ನೋಡಿ ಎಂದು ಹೇಳಿ ಅವರೂ ಕೂಡ ಹೇಳಿದ್ದಾರೆ. ಅಂದ ಹಾಗೆ ಇದನ್ನು ನಾವು ಯಾವಾಗ ಈ ಸದನದಲ್ಲಿ ಇಷ್ಟೊಂದು ಚರ್ಚೆ ಮಾಡಿದ ಮೇಲೆ ಮತ್ತು ಪ್ರತಿಯೊಂದು ಮಾತನ್ನೂ ಕೂಡ ಬಿಡಿಸಿ ಬಿಡಿಸಿ ಹೇಳಿದ ಮೇಲೆ ಬಹುಶಃ ಅವರೂ ಕೂಡ ಒಮ್ಮತದ ಧ್ವನಿಯನ್ನು ಕೂಡಿಸುತ್ತಾರೆ ಎಂದು ಹೇಳಿ ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ನಮಗೆ ಮಾತನಾಡಲು ಸ್ವಾತಂತ್ರ್ಯವಿದೆಯೆಂದು ತಿಳಿದುಕೊಂಡು ಯಾವುದೇ ಪತ್ರಿಕೆಯ ಮೇಲೆ ಪ್ರಹಾರ ಮಾಡಬೇಕು, ಆ ಪತ್ರಿಕೆಯ ಸ್ವಾತಂತ್ರ್ಯವನ್ನು ಕಸಿದುಕೊಳ್ಳಬೇಕು ಎನ್ನತಕ್ಕ ದೃಷ್ಟಿಯಿಂದ ಮಾತನಾಡುತ್ತಿಲ್ಲ. ಮಾನ್ಯ ಪ್ರಕಾಶ್‌ರವರು ಹೇಳಿದಂತೆ ಪ್ರಜಾಪ್ರಭುತ್ವ ಯಶಸ್ವಿಯಾಗಿ ನಡೆಯಬೇಕೆಂದರೆ ನಾಲ್ಕು ಕಂಬಗಳು ಯಾವುದು ಬಹು ಮುಖ್ಯವೆಂದು ಹೇಳಿಕೊಂಡು ಬಂದಿದ್ದೇವೆ ಅದರಲ್ಲಿ ಒಂದು ಕಂಬ ಪ್ರೆಸ್. ಅದು ಎಗ್ಸಿಕ್ಯೂಟೀವ್ ಇರಬಹುದು, ಜ್ಯುಡಿಷಿಯರಿ ಇರಬಹುದು, ಲೆಜಿಸ್ಲೇಚರ್ ಇರಬಹುದು, ನಾಲ್ಕನೆಯದು ಪ್ರೆಸ್. ಇದೂ ಕೂಡ ಅತ್ಯಂತ ಮಹತ್ವವನ್ನು ಹೊಂದಿದೆ. ಇದನ್ನು ನಾವು ಅಶಕ್ತಿಗೊಳಿಸಿದರೆ ಕೊನೆಗೆ ಪ್ರಜಾಪ್ರಭುತ್ವವೂ ಸಹ ಅಶಕ್ತಿಯುತಗೊಳ್ಳುತ್ತದೆ. ಪ್ರಜಾಪ್ರಭುತ್ವ ಬಿದ್ದುಹೋಗುತ್ತದೆ ಎನ್ನತಕ್ಕ ಮಾತನ್ನು ನಾವು ನೆನಪಿನಲ್ಲಿಟ್ಟುಕೊಂಡಿದ್ದೇವೆ. ಅದನ್ನು ನೆನಪಿನಲ್ಲಿಟ್ಟುಕೊಂಡೇ ನಾವು ಇವತ್ತು ಮಾತನಾಡುತ್ತಿರತಕ್ಕದ್ದು. ಯಾರಿಗೋ ಸಮಯಸಿಕ್ಕಿದೆ ಎಲ್ಲರೂ ಪ್ರಹಾರ ಮಾಡಿ ಎನ್ನತಕ್ಕ ದೃಷ್ಟಿಯಿಂದ ಒಂದು ಭಾಗದಿಂದ ಮಾತನಾಡುತ್ತಿಲ್ಲ. ಪ್ರತಿಯೊಬ್ಬರೂ ಸಂಯಮವನ್ನಿಟ್ಟುಕೊಳ್ಳಬೇಕು ಎಂಬ ದೃಷ್ಟಿಯಿಂದ ಮಾತನಾಡುತ್ತಿದ್ದೇವೆ. ಇದರಿಂದ ಇಡೀ ಸಮಾಜದ ಮೇಲೆ ಪರಿಣಾಮಬೀರುತ್ತದೆ. ಪತ್ರಿಕೆಯವರು ಟೀಕೆಯನ್ನೇ ಮಾಡಬಾರದೆಂದು ನಮ್ಮ ವಾದವಿದ್ದರೆ ಅದು ಕಷ್ಟವಾಗುತ್ತದೆ. ನಾವು ಅನೇಕ ಸಲ ತಪ್ಪು ಮಾಡುತ್ತೇವೆ. ತಪ್ಪು ಮಾಡಿದಾಗ ಅದನ್ನು ಗುರುತಿಸಿ ಟೀಕೆ ಮಾಡತಕ್ಕದ್ದಾಗಲಿ That criticism should be fair. ಯಾವಾಗ ಪತ್ರಿಕೆಯವರು fair criticism ಮಾಡುತ್ತಾರೋ ಆಗ ಅದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ criticism unfair ಆಗಿದ್ದಾಗ, ಸತ್ಯಕ್ಕೆ ದೂರವಿದ್ದಾಗ ಆಗ ಸಾಮಾನ್ಯವಾಗಿ ಮನುಷ್ಯನಿಗೆ ಸಿಟ್ಟು ಬರುತ್ತದೆ, ನೋವಾಗುತ್ತದೆ, ನನ್ನ ಬಗ್ಗೆ ಇಲ್ಲದಿರುವ ವಿಚಾರವನ್ನೇಕೆ ಪ್ರಸ್ತಾಪ ಮಾಡಿದ್ದಾರೆ, ನನ್ನ ಹಕ್ಕಿಗೆ ಚ್ಯುತಿ ಬಂದಿದೆ ಎನ್ನತಕ್ಕ ಭಾವನೆ ಬರುತ್ತದೆ. ಇವತ್ತು ಅವರೂ ಸಹ ಇದೇ ಧಾಟಿಯಲ್ಲಿ ಹೋಗಿ ಪ್ರಜಾಪ್ರಭುತ್ವದ ಮೌಲ್ಯವನ್ನು ಎತ್ತಿಹಿಡಿಯುವುದರಲ್ಲಿ ಹಿಂದೆ ಬೀಳಬಾರದು. ಇಡೀ ಮಹಿಳಾ

ಸಮಾಜಕ್ಕೆ ಅವಹೇಳನವಾಗತಕ್ಕ ರೀತಿಯಲ್ಲಿ ಬರವಣಿಗೆ ಬಂದಿದ್ದರಿಂದ ಇದಕ್ಕೆ ಇಷ್ಟೊಂದು ಬೆಂಬಲ ಸಿಕ್ಕಿದೆ. ಒಬ್ಬ ವ್ಯಕ್ತಿಯಾಗಿ individual Minister, individual M.L.A. ಅವರ ಕೆಲಸದ ಬಗ್ಗೆ ಅವರು ಏನಾದರೂ ಹೊರಗಡೆ ಹೇಳಿದ್ದರೆ, ಟೀಕೆ ಮಾಡಿದ್ದರೆ ಖಂಡಿತವಾಗಿ ಅದು ಡಿಫಮೇಷನ್‌ನಲ್ಲಿ ಬರುತ್ತಿತ್ತು. ನೇರವಾಗಿ ಕೋರ್ಟ್‌ಗೆ ಹೋಗಬಹುದಿತ್ತು. ಇದು ನಮಗೆ ಸಂಬಂಧಪಟ್ಟಿದ್ದಲ್ಲ. ಈ ಸದನದಲ್ಲಿ ರಕ್ಷಣೆ ಕೊಡಲು ಆಗುವುದಿಲ್ಲವೆಂದು ಹೇಳಬಹುದಿತ್ತು. ಏಕೆಂದರೆ, ಶಾಸಕರೇ ಇರಬಹುದು, ಎಂ.ಪಿ.ಗಳೇ ಇರಬಹುದು ಅನೇಕ ಸಲ ಮಾಡದಿರುವ ಕೆಲಸ ಮಾಡಿ ಪುನಃ ನಮಗಿಲ್ಲಿ ಪ್ರಿವಿಲೇಜ್ ಇದೆಯೆಂದು ಅದರ ಆಶ್ರಯವನ್ನು ಪಡೆದುಕೊಂಡರೆ ಆಗ ನಾವು ಇದು ಸರಿಯಲ್ಲ, ಇದಕ್ಕೆ ನಾವು ಅರ್ಹರಲ್ಲವೆಂದು ಹೇಳಬಹುದು. ನಾವು ರಕ್ಷಣೆ ಕೊಡಲು ತಯಾರಿಲ್ಲವೆಂದು ಹೇಳಬಹುದು. ಈಗ ಮಹಿಳೆಯರಿಗೆ ಇಲ್ಲಿ 33 ಪರ್‌ಸೆಂಟ್ ಮೀಸಲಾತಿಯನ್ನು ಕೊಡುತ್ತಿರುವಂಥ ಸಂದರ್ಭದಲ್ಲಿ, ಈಗಲೇ ಮಹಿಳೆಯರು ಈ ರೀತಿ ಇದ್ದಾರೆ, ಇನ್ನು 33 ಪರ್ಸೆಂಟ್ ಮೀಸಲಾತಿಯನ್ನು ತೆಗೆದುಕೊಂಡು ಯಾವರೀತಿಯಾಗಿ ಇವರು ಮುಂದೆ ಹೋಗುತ್ತಾರೆ ಎನ್ನತಕ್ಕ ಧಾಟಿಯಲ್ಲಿ ಬರೆದಿದ್ದಕ್ಕಾಗಿ, ಪ್ರತಿಯೊಬ್ಬರೂ ವ್ಯಕ್ತಿಗಳ ಚಾರಿತ್ರ್ಯೆಯ ಬಗ್ಗೆ ಸಹ ಸ್ವಲ್ಪ ಹೇಳಿದ್ದರಿಂದ ಅಷ್ಟಕ್ಕೇ ಸೀಮಿತವಾಗಿ ಇಲ್ಲಿ ಚರ್ಚೆಯಾಗಿದೆಯೇ ಹೊರತು ಬೇರೆ ಇಲ್ಲ. ಉಳಿದ ಡಿಫಮೇಷನ್‌ನಲ್ಲಿ ಅವರ ನಡತೆಯ ಬಗ್ಗೆ, ಅವರ ಕ್ಷೇತ್ರದ ಆಗುಹೋಗುಗಳ ಬಗ್ಗೆ ಏನೇ ಇದ್ದರೂ ಸಹ ಅದರ ಬಗ್ಗೆ ಕೋರ್ಟ್‌ನಲ್ಲಿ ಹೋಗಿ ಪರಿಹಾರಕಂಡುಕೊಳ್ಳತಕ್ಕದ್ದು ಅಥವಾ ಡಿಫಮೇಷನ್ ಕೇಸ್ ಹಾಕತಕ್ಕದ್ದು ಆಗುತ್ತದೆ. ಅದನ್ನು ಮಾಡಿ. ಆದರೆ ಇಲ್ಲಿ ಶಾಸಕರಾಗಿ ಹೇಗೆ ನಡೆದುಕೊಳ್ಳಬೇಕು? ಯಾವ ರೀತಿ ಮಾತನಾಡಬೇಕು? ಯಾರು ಎಷ್ಟು ಮಾತನಾಡಬೇಕು ಎನ್ನತಕ್ಕದ್ದರ ಬಗ್ಗೆ ಟೀಕೆ ಮಾಡಿದಾಗ ಆಗ ಸಾಮಾನ್ಯವಾಗಿ ನಮಗಿರುವ ಪ್ರಿವಿಲೇಜ್‌ಗೆ ಇನ್‌ಫ್ರಿಂಜ್‌ಮೆಂಟ್ ಆಗುತ್ತದೆ. ಆಗ ಸ್ವಲ್ಪಮಟ್ಟಿಗೆ ಧ್ವನಿಯನ್ನು ಎತ್ತಬೇಕಾಗುತ್ತದೆ. ಇದರಿಂದ ಅವರೂ ಸಹ ಸ್ವಲ್ಪ ಎಚ್ಚರ ವಹಿಸಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ನಾವು ಏನು ಬರೆದರೂ ನಡೆಯುತ್ತದೆ ಎನ್ನತಕ್ಕ ಭಾವನೆ ಬರಬಾರದು. ಮಾನ್ಯ ವಾಟಾಳ್ ನಾಗರಾಜ್‌ರವರಲ್ಲಿ ಅಪೀಲ್ ಮಾಡಿಕೊಳ್ಳುತ್ತೇನೆ. ಅವರೊಬ್ಬರೇ ಪತ್ರಿಕೆಯವರ ಪರವಾಗಿದ್ದಾರೆ ಉಳಿದವರೆಲ್ಲರೂ ಅದರ ವಿರುದ್ಧವಿದ್ದಾರೆ ಎನ್ನತಕ್ಕ ಭಾವನೆ ಬರಬಾರದು. ನಾವು ನೀವೆಲ್ಲರೂ ಈ ಸದನದ ಸದಸ್ಯರ ಗೌರವವನ್ನು ರಕ್ಷಣೆ ಮಾಡುವುದಕ್ಕೆ, ಅವರ ಹಕ್ಕನ್ನು ರಕ್ಷಣೆ ಮಾಡುವುದಕ್ಕೆ ಬದ್ಧರಾಗಿದ್ದೇವೆ ಎಂಬುದು ಮುಖ್ಯ. ಅಲ್ಲಿಂದ ಏನು ಉತ್ತರ ಬರುತ್ತದೆ ಅನಂತರ ನೋಡೋಣ. ಅವರು ಯಾವ ರೀತಿ ಡಿಫೆಂಡ್ ಮಾಡುತ್ತಾರೆ ನೋಡೋಣ.

ಶ್ರೀ ವಾಟಾಳ್ ನಾಗರಾಜ್ : ಹಕ್ಕುಚ್ಯುತಿಯಾಗುವುದಿಲ್ಲ. ಹಕ್ಕುಚ್ಯುತಿ ತರುವುದು ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲಿ ಎರಡು ಅಂಶಗಳಿದೆ. ಒಂದು ಹಕ್ಕುಚ್ಯುತಿ ಬಗ್ಗೆ ಇನ್ನೊಂದು ಡಿಫಮೇಷನ್ ಇವೆರಡೂ ಅದರಲ್ಲಿ ಸೇರಿದೆ. ಯಾವ ಭಾಗ ಹಕ್ಕುಚ್ಯುತಿಯಾಗುತ್ತದೆಂದು ಅವರು ಪ್ರಸ್ತಾಪ ಮಾಡಿದ್ದಾರೆ. ಯಾವ ಭಾಗ ಹಕ್ಕುಚ್ಯುತಿಯಾಗುವುದಿಲ್ಲ ಅದು ಡಿಫಮೇಷನ್‌ನಲ್ಲಿ ಬರುತ್ತದೆ ಅಥವಾ ಐ.ಪಿ.ಸಿ. ಕೇಸ್‌ಗಳಲ್ಲಿ ಬರುತ್ತದೆ. ಐ.ಪಿ.ಸಿ.ನಲ್ಲಿ ಬರುವುದರ ಬಗ್ಗೆ ಕೋರ್ಟ್‌ಗೇನು

ಹೋಗಬೇಕು ಅಲ್ಲಿಗೆ ಹೋಗುತ್ತಾರೆ. ಆದರೆ ಯಾವುದು ಹಕ್ಕುಚ್ಯುತಿಯಾಗುತ್ತದೆ ಎಂಬ ಬಗ್ಗೆ ಪ್ರಸ್ತಾವನೆ ಬರಲಿ. ಅವರಿಂದ ಉತ್ತರ ಬರುತ್ತದೆ ನೋಡೋಣ. ನಾವು ಏನೋ ಸೇರಿ ಕೆಲ ಶಾಸಕರ ಮೇಲೆ, ಮಂತ್ರಿಯವರ ಮೇಲೆ ಟೀಕೆ ಮಾಡಿದರೆ ನಮ್ಮ ಹಕ್ಕನ್ನೇ ಇವರು ಕಸಿದುಕೊಳ್ಳುತ್ತಿದ್ದಾರೆ, ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ ಬರುತ್ತದೆ ಎನ್ನತಕ್ಕ ಭಾವನೆ ಸಹ ಹೊರಗಡೆ ಹೋಗುವುದು ಬೇಡ. ಪತ್ರಿಕಾ ಸ್ವಾತಂತ್ರ್ಯಕ್ಕೇನು ಗೌರವ ಕೊಡಬೇಕು, ಅವರಿಗೆಷ್ಟು ಅಧಿಕಾರವಿದೆ ಅದನ್ನು ಮೊಟಕಗೊಳಿಸುವ, ಕಡಿವಾಣವನ್ನು ಹಾಕುವಂಥ ಕೆಲಸವನ್ಯಾರೂ ಮಾಡುತ್ತಿಲ್ಲ. ಆದರೆ ಈ ಒಂದು ಲೇಖನಕ್ಕೆ ಸೀಮಿತವಾಗಿ ಈ ಪ್ರಸ್ತಾವನೆ ಬಂದಿದೆ. ಅದರ ಬಗ್ಗೆ ಸದಸ್ಯಣಿಯರೇನು ಮೋಷನ್ ಮೂವ್ ಮಾಡಿದ್ದಾರೆ ಅದಕ್ಕೆ ಈ ಸದನ ಬೆಂಬಲಿಸುತ್ತಿದೆ, ನಾನೂ ಕೂಡ ನನ್ನ ಬೆಂಬಲವನ್ನು ಸೂಚಿಸುತ್ತೇನೆ. ಇದನ್ನು ಇನ್ನು ಬೆಳೆಸಿಕೊಂಡು ಹೋದರೆ ಕೆಟ್ಟುಹೋಗುತ್ತದೆ. ಆದ್ದರಿಂದ ಆದಷ್ಟು ಬೇಗ ಇದನ್ನು ಇತ್ಯರ್ಥ ಮಾಡಿ ಅವರಿಗೂ ಸಹ ಮನಸ್ಸಿಗೆ ಸಮಾಧಾನ ಕೊಡತಕ್ಕ ಕೆಲಸ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

+ ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಶ್ರೀಮತಿ ಪ್ರಮೀಳಾನೇಸರ್ಗಿಯವರು ಮತ್ತು ಮಹಿಳಾ ಸದಸ್ಯಣೀಯರು ತಂದಿರತಕ್ಕಂಥ ಹಕ್ಕುಚ್ಯುತಿ ಪ್ರಸ್ತಾವವೇನಿದೆ ಇದರ ಬಗ್ಗೆ ಎಲ್ಲಾ ಹಿರಿಯ ಸದಸ್ಯರುಗಳು ಮಾತನಾಡಿದ್ದಾರೆ. ನಾನು ಶಾಸಕನಾದಮೇಲೆ ಇಂಥ ಪರಿಸ್ಥಿತಿ ನಿರ್ಮಾಣವಾಗಿದ್ದು ಇದೇ ಮೊದಲ ಸಲವೆಂದು ಭಾವಿಸುತ್ತೇನೆ. ತಾವು ತಂದಿರತಕ್ಕಂಥ ಪ್ರಸ್ತಾವವನ್ನು ನಾನು ಸಮರ್ಥಿಸುತ್ತಾ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಮಾನ್ಯ ನಂಜೇಗೌಡರು ಹೇಳಿದಂಥ ಮಾತನ್ನು ನಾನು ಒಪ್ಪುತ್ತೇನೆ. ಡಿಫಮೇಷನ್ ಮತ್ತು ಬ್ರೀಜ್ ಆಫ್ ಪ್ರಿವಿಲೇಜ್ ಎರಡನ್ನು ಬೇರೆ ಬೇರೆ ವ್ಯಾಖ್ಯಾನ ಮಾಡಿ ನೋಡಲು ಸಾಧ್ಯವಾಗುವುದಿಲ್ಲ. It is an infringement of right. ಡಿಫಮೇಷನ್‌ನಲ್ಲಿ ಸಹ infringement of right of a particular person ಇರುತ್ತದೆ. ಹಾಗೆಯೇ breach of privilege ನಲ್ಲಿ ಸಹ infringement of right ಇರುತ್ತದೆ. ನಮ್ಮ ಹಕ್ಕುಗಳನ್ನು ನಾವು ರಾಜ್ಯಾಂಗಬದ್ಧವಾಗಿ ಹೇಗೆ ಚಲಾವಣೆ ಮಾಡುತ್ತೇವೆ, ಅದನ್ನು ಮಾಡುವಾಗ ಬೇರೆಯವರಿಗೂ ನಮ್ಮಷ್ಟೇ ಅಧಿಕಾರವಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕಾಗುತ್ತದೆ. ನಾವು ಆಡತಕ್ಕ ಮಾತುಗಳು, ಹೇಳತಕ್ಕ ವಿಚಾರಗಳು ಇದನ್ನು ಮಾಡಲು ನಮಗೆ ಸಂಪೂರ್ಣವಾದ ಸ್ವಾತಂತ್ರ್ಯವಿದ್ದರೂ ನಾವು ಬೇರೆಯವರ ಮೇಲೆ ಆಡತಕ್ಕ ಮಾತುಗಳು ಸಮಾಜದ ಮೇಲೆ ಏನು ಪರಿಣಾಮ ಬೀರುತ್ತದೆ, ಈ ವ್ಯಕ್ತಿಯನ್ನು ಸಮಾಜ ಯಾವ ರೀತಿ ನೋಡುತ್ತದೆ ಎಂಬ ಬಗ್ಗೆ ಗಮನಿಸಬೇಕಾಗುತ್ತದೆ. Any statement made, how it lowers the dignity of a particular person in the eye of the society ಸಾರ್ವಜನಿಕರ ದೃಷ್ಟಿಕೋನದಲ್ಲಿ ಒಬ್ಬ ವ್ಯಕ್ತಿ ಹೇಗೆ ಮುಗಿದುಹೋಗುತ್ತಾನೆ ಎಂಬುದು ಬಹಳ ಮುಖ್ಯ. ಅದನ್ನು ಗಮನದಲ್ಲಿಟ್ಟುಕೊಂಡು ನಾವು ನಮ್ಮ ಹಕ್ಕುಗಳನ್ನು ಚಲಾವಣೆ ಮಾಡಬೇಕಾಗುತ್ತದೆ. ಈಗಾಗಲೇ ಎಲ್ಲರೂ ಗೌರವದಿಂದ ಮಾತನಾಡಿದಂತೆ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಎಲ್ಲರಿಗೂ ಗೌರವ ಇದೆ. ಅದು ಇರಬೇಕು. ಪ್ರಜಾತಂತ್ರ ಯಶಸ್ವಿಯಾಗಬೇಕಾದರೆ ಎಲ್ಲರೂ ಸಮಾನತೆ ಮತ್ತು ಸಮಾನ ಅವಕಾಶಗಳಿಂದ ಬದುಕಬೇಕಾದರೆ ಎಲ್ಲರೂ ಬದುಕಬೇಕಾದರೆ ಅದರಲ್ಲೂ ಸಾರ್ವಜನಿಕ ಬದುಕಿನಲ್ಲಿ

ಕೆಲಸ ಮಾಡುವಂತಹ ನಾವು ಹೆಚ್ಚು ಜವಾಬ್ದಾರಿಯಾಗಿ ಇರಬೇಕೆಂದು ಜನ ಬಯಸುತ್ತಾರೆ, ನಾವೂ ಇರಬೇಕಾಗುತ್ತದೆ. ನಾವು ಟೀಕೆಟಿಪ್ಪಣಿಗಳನ್ನೆಲ್ಲ ವಿರೋಧ ಮಾಡಬೇಕೆಂದು ಹೇಳುವುದಿಲ್ಲ. ಯಾವುದೇ ಟೀಕೆಟಿಪ್ಪಣಿಗಳು ಅವು ಆರೋಗ್ಯಕರವಾಗಿದ್ದಾಗ ನಾವು ಮಾಡುವ ತಪ್ಪುಗಳನ್ನು ತಿದ್ದತಕ್ಕ ರೀತಿಯಲ್ಲಿದ್ದಾಗ ಸ್ವಾಗತ ಕೂಡ ಮಾಡಬೇಕಾಗುತ್ತದೆ. ಆದರೆ ನಮ್ಮ ವ್ಯಕ್ತಿತ್ವವನೇ ಅಲುಗಾಡಿಸತಕ್ಕ, ನಮ್ಮನ್ನು ಸಮಾಜದ ದೃಷ್ಟಿಯಿಂದ ಅತ್ಯಂತ ಕೀಳಾಗಿ ಕಾಣತಕ್ಕಂತಹ ಒಂದು ವಿಚಾರ ಪ್ರಸ್ತಾಪವಾದಾಗ ಅದನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಮತ್ತು ಅದನ್ನು ಎಲ್ಲರೂ ಒಕ್ಕೊರಲಿನಿಂದ ಖಂಡಿಸಬೇಕಾದದ್ದು ನಮ್ಮ ಜವಾಬ್ದಾರಿ ಕೂಡ ಇರುತ್ತದೆ. ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಅಥವಾ ಅವರು ಮುಕ್ತವಾಗಿ ಬರೆಯಬೇಕು ಎಂಬ ಬಗ್ಗೆ ಯಾರದ್ದೂ ತಕರಾರಿಲ್ಲ. ಅದಿರಬೇಕಾಗುತ್ತದೆ. ಅದನ್ನು ನಾವು ಪ್ರತಿಪಾದನೆ ಕೂಡ ಮಾಡುತ್ತೇವೆ. ಆದರೆ ಲಂಕೇಶ್ ಪತ್ರಿಕೆಯಂತಹ ಒಂದು ಪತ್ರಿಕೆ ಇವತ್ತು ಜನರು ಅವರು ಹೇಳುವ ಅನೇಕ ವಿಚಾರಗಳು ಬಹಳ ಪ್ರಗತಿದಾಯಕವಾಗಿವೆ ಎಂಬ ಮಾತನ್ನೂ ಆಡುತ್ತಾರೆ. ಇಲ್ಲಿನ ಮಹಿಳೆಯರಿಗೆ, ಅವರಿಗೆ ಅವಮಾನವಾಗುವ ರೀತಿಯಲ್ಲಿ ಅವರ ಶೀಲದ ಬಗ್ಗೆ ಶಂಕೆ ಬರುವ ರೀತಿಯಲ್ಲಿ ಅವರು ಗೌರವಯುತವಾಗಿ ಸಮಾಜದಲ್ಲಿ ತಲೆಯೆತ್ತಿ ತಿರುಗಾಡಲು ಆಗದ ರೀತಿಯಲ್ಲಿ ಬರೆದಿರತಕ್ಕಂತಹ ಬರಹ ಅದು ಯಾವುದೇ ನಾಗರೀಕ ಸಮಾಜದಲ್ಲಿ ಸಹಿಸಿಕೊಳ್ಳತಕ್ಕದಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇದರಲ್ಲಿ ಅವರು ಹೇಳಿರುವ ಎಲ್ಲಾ ವಿಚಾರಗಳನ್ನು ನೋಡಿದಾಗ ಮೇಲ್ನೋಟಕ್ಕೆ ಅವರ ಹಕ್ಕುಚ್ಯುತಿಯಾಗಿದೆ ಎಂಬುದು ಸ್ಪಷ್ಟವಾಗಿ ಕಾಣಿಸುತ್ತದೆ. ಅವರು ಶಿಕ್ಷೆ ಏನಾಗಬೇಕೆಂದು ಏನೂ ಹೇಳಲಿಲ್ಲ. ಏಕೆಂದರೆ. principles of natural justice ಪ್ರಕಾರ ಅವರಿಗೊಂದು ಅವಕಾಶ ಕೊಡಬೇಕೆಂದು ಪ್ರಸ್ತಾಪಿಸಿದ್ದಾರೆ. ಒಂದು ವಾರದ ಅವಧಿ ಕೊಟ್ಟು ಆಮೇಲೆ ಅವರೇನು ಹೇಳುತ್ತಾರೆ ಅದರ ಮೇಲೆ ಸದನ ಮತ್ತೆ ತೀರ್ಮಾನ ಮಾಡಬೇಕೆಂದು ಕೂಡ ಅವರು ಪ್ರಸ್ತಾಪ ಮಾಡಿದ್ದಾರೆ. ಆ ರೀತಿ ಸದನಕ್ಕೆ ಅಧಿಕಾರ ಇರುತ್ತದೆ. ಅವರು ಕೊಟ್ಟ ಉತ್ತರದ ವಿವರಣೆ ನೋಡಿಕೊಂಡು ಸದನ ಒಟ್ಟಾರೆ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ಈ ಸಂದರ್ಭದಲ್ಲಿ ವಾಟಾಳ್‌ನಾಗರಾಜ್‌ರವರಲ್ಲಿ ಪಾಪ ದ್ವಂದ್ವ ಭಿನ್ನಾಭಿಪ್ರಾಯಗಳಿವೆ.ಡಿಫಮೇಷನ್ ಮತ್ತು ಹಕ್ಕುಚ್ಯುತಿ. ಇದು ಹಕ್ಕುಚ್ಯುತಿಯಾಗುವುದಿಲ್ಲ ಅನ್ನುತ್ತಾರೆ. ಇದು ಸ್ಪಷ್ಟವಾಗಿ ಹಕ್ಕುಚ್ಯುತಿಯಾಗುತ್ತದೆ. ಇಲ್ಲಿ ಅವರು ನಿರ್ಭೀತಿಯಿಂದ ಕೆಲಸ ಮಾಡಬೇಕಾಗಿರುವುದು. ಏಕೆಂದರೆ ನಾವು ಇವತ್ತು ಪ್ರತಿಪಾದನೆ ಮಾಡುತ್ತಿದ್ದೇವೆ 33 ಪರ್ಸೆಂಟ್ ಮಹಿಳೆಯರಿಗೆ ಎಲ್ಲಾ ಕ್ಷೇತ್ರ ಪ್ರಕ್ರಿಯೆಗಳಲ್ಲಿ ಸ್ಥಾನಮಾನ ಸಿಕ್ಕಬೇಕು, ಅದೂ ಒಂದು ಹಿಂದುಳಿದ ವರ್ಗ ಶೋಷಿತವರ್ಗ ಎಂದು ಅವರಿಗೆ ಬಹಳ ಕಷ್ಟವಾಗುತ್ತದೆ ಇದನ್ನು ಸಹಿಸಿಕೊಳ್ಳುವುದಕ್ಕೆ. ಪುರುಷರು ಸಹಿಸಿಕೊಳ್ಳುವಂತೆ ಹೆಣ್ಣುಮಕ್ಕಳು ಸಹಿಸಿಕೊಳ್ಳಲು ಕಷ್ಟವಾಗುತ್ತದೆ. ಸಮಾಜ ಅವರನ್ನು ನೋಡತಕ್ಕ ದೃಷ್ಟಿಕೋನವೇ ಬೇರೆ ಬೇರೆ ರೀತಿ ಇರುತ್ತದೆ. ಈ ಹಿನ್ನೆಲೆಯಲ್ಲಿ ನಾವು ನೋಡಬೇಕಾಗುತ್ತದೆ. ಇವತ್ತು ರಾಜಕಾರಣ ಮಾಡುವಾಗ ಪುರುಷರ ಜೊತೆಯಲ್ಲೂ ತಿರುಗಾಡ ಬೇಕಾಗುತ್ತದೆ. ಪ್ರವಾಸ ಮಾಡಬೇಕಾಗುತ್ತದೆ, ಸಭೆಗಳಿಗೆ ಹೋಗಬೇಕಾಗುತ್ತದೆ. ಅದೇ ಚಟುವಟಿಕೆಗಳಲ್ಲಿ ಭಾಗಿಗಳಾಗಬೇಕಾಗುತ್ತದೆ. ಅವರನ್ನು ಬಹಳ ಕೀಳಾಗಿ ಕಾಣತಕ್ಕಂತಹ ಮನಸ್ಸಿನಲ್ಲಿ ಗೊಂದಲ ಪೂರ್ವಗ್ರಹದಿಂದ ನೋಡತಕ್ಕದ್ದು ಇದೆಯಲ್ಲಾ ಅದು ಸಮಾಜದ ಹಿತದೃಷ್ಟಿಯಿಂದ ಒಳ್ಳೆಯದಲ್ಲ

ವೆಂಬುದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಬಹಳ ಚರ್ಚೆ ಬೆಳಿಗ್ಗೆಯಿಂದ ಆಗಿದೆ ಇದನ್ನು ಖರ್ಗೆಯವರು ಹೇಳಿದಂತೆ ಬಹಳ ದೂರ ತೆಗೆದುಕೊಂಡು ಹೋಗೋದು ಬೇಡ, ಇದರ ಬಗ್ಗೆ ಹೆಚ್ಚು ಚರ್ಚೆನೂ ಅನಗತ್ಯವೆಂದು ನಾನು ಭಾವಿಸಿಕೊಂಡಿದ್ದೇನೆ. ಮೇಲ್ನೋಟಕ್ಕೆ ಬಹಳ ಸ್ಪಷ್ಟವಾಗಿದೆ ಹಕ್ಕುಚ್ಯುತಿಯಾಗುತ್ತದೆ ಅನ್ನುವುದು. ಅಲ್ಲದೆ ಡಿಫಮೇಷನ್ ಬೇರೆ, ಕೋರ್ಟ್‌ಗೆ ಹೋಗಿ ನಾವು ನೋಡಿದ್ದೇವೆ ಅಂತಹ ಕೇಸ್‌ಗಳಲ್ಲಿ ಏನೇನು ಆಗುತ್ತದೆ ಎಂದು. ಆದರೆ ಈ ವೇದಿಕೆ ಇದೆ ಅವರಿಗೆ, ಇಲ್ಲಿ ಮುಕ್ತವಾಗಿ ಕೆಲಸ ಮಾಡಬೇಕಾಗುತ್ತದೆ, ಜನರು ನೋಡುತ್ತಾ ಇರುತ್ತಾರೆ. ಅವರ ಕ್ಷೇತ್ರಗಳ್ಲಲೂ ಜನ ಮಧ್ಯೆ ಕೆಲಸ ಮಾಡಬೇಕಾಗುತ್ತದೆ ಅವರು ತಲೆತಗ್ಗಿಸಿಕೊಂಡು ಕೆಲಸ ಮಾಡುವುದಕ್ಕಾಗುವುದಿಲ್ಲ. ಅವರ ಬಗ್ಗೆ ಜನರು ಏನು ಹೇಳುತ್ತಾರೆ ಎನ್ನುವುದು ಬಹಳ ಮುಖ್ಯವಾಗುತ್ತದೆ. ಆ ಕಾರಣದಿಂದ ಇಲ್ಲಿ ಎಷ್ಟೆಷ್ಟು ಅವಮಾನಗಳಾಗುತ್ತವೆ, ಎಷ್ಟರಮಟ್ಟಿಗೆ ಅದು ಮಾನಹಾನಿಯಾಗುತ್ತದೆ ಹಕ್ಕುಚ್ಯುತಿಯಾಗುತ್ತದೆಯೇ ಅಥವಾ ಇನ್ನೊಂದಾಗುತ್ತದೆಯೇ ಎಂಬುದನ್ನು ನೋಡಬೇಕಾಗುತ್ತದೆ. ನಾನೂ ಕೂಡ ನಿಮಗೆ ಅಪೀಲ್ ಮಾಡಿಕೊಳ್ಳುತ್ತೇನೆ. ನೀವೂ ಕೂಡ ಇಡೀ ಸದನ ಒಟ್ಟಾಗಿ ನಾವೇನು ತೀರ್ಮಾನಕ್ಕೆ ಬರುತ್ತಿದ್ದೇವೆ ಇದು ಮಹಿಳೆಯರ ಇಡೀ ಸಮಾಜದ ಹಿತದೃಷ್ಟಿಯಿಂದ ಪ್ರಜಾತಂತ್ರ ಯಶಸ್ವಿಯಾಗಬೇಕೆಂಬ ಕಾರಣಕ್ಕಾಗಿ ನಮ್ಮ ಸ್ವಾತಂತ್ರ್ಯಕ್ಕೆ ಕೆಲವು ಇತಿಮಿತಿಗಳಿರಬೇಕಾಗುತ್ತದೆ, ನಾವು ಸ್ವೇಚ್ಛೆಯಾಗಿರಲು ಆಗುವುದಿಲ್ಲ. ಯಾರಿಗೆ ಎಷ್ಟೇ ಹಕ್ಕು ಕೊಟ್ಟಿದ್ದರೂ ಆ ಹಕ್ಕುಗಳು ಮಿತಿಗಳನ್ನು ಇಟ್ಟುಕೊಂಡೇ ಇರುತ್ತವೆ. ನ್ಯಾಯಾಲಯದಲ್ಲಿ ಇದರ ಬಗ್ಗೆ ಅನೇಕ ತೀರ್ಪುಗಳಿವೆ. ಭಾರತದಲ್ಲಿ ಹೆಚ್ಚು ಜನ ಯಾಕೆ ನ್ಯಾಯಾಲಯಕ್ಕೆ ಹೋಗುವುದಿಲ್ಲ ಅಂದರೆ ನಮಗೆ ತಕ್ಷಣ ಪರಿಹಾರ ಸಿಗುವುದಿಲ್ಲ ಎನ್ನುವ ಕಾರಣದಿಂದ ಎಷ್ಟೇ ನೋವಾದರೂ ನೋವು ಸಹಿಸಿಕೊಂಡಿರುತ್ತಾರೆಯೇ ಹೊರತು ಕಾನೂನನ್ನು ಎಕ್ಸರ್‌ಸೈಜ್ ಮಾಡಬಾರದು ಎಂದು ಏನೂ ಇಲ್ಲ. ನಾವು ಲಾ ಕಾಲೇಜಿನಲ್ಲಿ 100-200 ಮಾರ್ಕ್ಸ್ ಇಟ್ಟುಕೊಂಡು ಓದಿರುತ್ತೇವೆ ಅಷ್ಟೇ. ಇಂಗ್ಲೆಂಡಿನಲ್ಲಿ ಲಾ ಆಫ್ ಟಾರ್ಟ್ಸ್ ಬಗ್ಗೆ ಎಷ್ಟರಮಟ್ಟಿಗೆ ಗೌರವ ಇದೆಯೆಂದು ನೋಡಿದಾಗ ಬಹಳ ಸ್ಪಷ್ಟವಾಗುತ್ತದೆ. ಅನೇಕ ತೀರ್ಪುಗಳಿವೆ. ಇಲ್ಲೂ ಕೂಡ ಚಲಾವಣೆ ಮಾಡಲು ಸಾಧ್ಯವಾಗುತ್ತದೆ. ಆದರೆ ನಾವು ಅಷ್ಟರಮಟ್ಟಿಗೆ ಪ್ರಬುದ್ಧರಾಗಿಲ್ಲವೇನೋ ಮತ್ತು ವಿಳಂಬ ಮತ್ತು ದುಬಾರಿ ನ್ಯಾಯ ದೊರಕಿಸಿಕೊಳ್ಳತಕ್ಕಂಥಾದ್ದು ಯಾಕೆಂದರೆ ಕೋರ್ಟಿನಲ್ಲಿ ಗೆದ್ದವನು ಸೋತ ಸೋತವನು ಸತ್ತ ಎಂದು ಆಗುತ್ತದೆ. ಇಲ್ಲಿ ಅವರು ನ್ಯಾಯವನ್ನು ಕೇಳಲೇಬೇಕಾಗುತ್ತದೆ. ಇದು ಅವರ ಹಕ್ಕು ಕೂಡ. ಇದರ ಬಗ್ಗೆ ನ್ಯಾಯದ ದೃಷ್ಟಿಯಿಂದ ಸಮಾಜದ ದೃಷ್ಟಿಯಿಂದ ಏನಾದರೂ ಮಾಡಬೇಕಾಗಿರುವುದು ಅತ್ಯಂತ ಅವಶ್ಯ. ನಾವೆಲ್ಲಾ ಬರಿ ಭಾಷಣ ಮಾಡಿದರೆ ಸಾಲುವುದಿಲ್ಲ. ನಾವು ಇನ್ನೊಬ್ಬರಿಗೆ ಹೇಳುವುದು ಆದರೆ ಎಷ್ಟರ ಮಟ್ಟಿಗೆ ನಾನು ನಡೆದುಕೊಳ್ಳುತ್ತೇನೆ, ನನಗೆ ಎಷ್ಟರ ಮಟ್ಟಿಗೆ ನೈತಿಕವಾದ ಶಕ್ತಿ ಇದೆ ಅನ್ನುವುದು ಬಹಳ ಮುಖ್ಯವಾಗುತ್ತದೆ. ಆಗ ಇನ್ನೊಬ್ಬರಿಗೆ ಹೇಳುವುದೂ ಕೂಡ ಪ್ರಸ್ತುತವಾಗುತ್ತದೆ. ಅಗತ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಆದ್ದರಿಂದ ಅವರ ತಂದಿರತಕ್ಕ ನಿರ್ಣಯ ಏನಿದೆ ಅದನ್ನು ನಾನು ಬೆಂಬಲಿಸುತ್ತಾ ಇಡೀ ಸದನ ಅದಕ್ಕೆ ಒಪ್ಪಿಗೆ ಕೊಡೋಣ. ಅವರು ಏನು ಕೊಡುತ್ತಾರೋ ಅದರ ಮೇಲೆ ಮತ್ತೆ ತೀರ್ಮಾನ ಮಾಡೋಣ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

+ ಶ್ರೀ ಎಂ. ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಅಧ್ಯಕ್ಷರೇ ಇವತ್ತು ಸದನದಲ್ಲಿ ನಾವು ಬಹಳ ಗಂಭೀರ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇವೆ. ನಮ್ಮ ಹಕ್ಕನ್ನು ಇಲ್ಲಿ ನಾನು ಪ್ರತಿಪಾದನೆ ಮಾಡುವ ಸಂದರ್ಭದಲ್ಲಿ ಸಾಮಾನ್ಯ ಪ್ರಜೆಗಿಂತ ವಿಭಿನ್ನವಾದ ಹಕ್ಕೇನಿದೆ ಅದನ್ನು ಪ್ರತಿಪಾದನೆ ಮಾಡುತ್ತಿಲ್ಲ. ಈ ಸದನದ ಹಕ್ಕಿನ ಪ್ರಶ್ನೆ ಬಂದಾಗ ಪ್ರತಿಯೊಬ್ಬ ಸದಸ್ಯನ ಹಕ್ಕಿನ ಪ್ರಶ್ನೆ ಕೂಡ ಮುಖ್ಯ ಕಾರಣ ಸದಸ್ಯರು ಒಟ್ಟಾಗಿ ಕೆಲಸ ಮಾಡಿದರೇನೇ ಈ ಸಭೆ ಕೆಲಸ ಮಾಡಲಿಕ್ಕೆ ಸಾಧ್ಯ. ಆದ್ದರಿಂದ ಒಬ್ಬ ಸದಸ್ಯನ ಹಕ್ಕಿನ ಪ್ರಶ್ನೆ ಬಂದಾಗ ಅದು ಸದನದ ಹಕ್ಕಿನ ಪ್ರಶ್ನೆಯೂ ಆಗುತ್ತದೆ. ಜನರಿಗೆ ಪ್ರತಿನಿಧಿಯಾಗಿ ಈ ಸದನದ ಒಳಗಡೆ ಒಬ್ಬ ಸದಸ್ಯ ತಾನು ಸಮಾಜಕ್ಕೆ ಮಾಡಬೇಕಾದ ಕೆಲಸ ಯಾವುದಿದೆ ಆ ಕೆಲಸವನ್ನು ರಾಜ್ಯಾಂಗಬದ್ಧವಾಗಿ, ಕಾನೂನುಬದ್ಧವಾಗಿ ಮಾಡುತ್ತಾ ಇರುವಂತಹ ಸಂದರ್ಭದಲ್ಲಿ ಅದನ್ನು ಮಾಡಲಿಕ್ಕೆ ಇರುವುದಕ್ಕೆ ಅಡೆತಡೆ ಬಂದಾಗ ಅದು ನೇರವಾಗಿ ಸದನದ ಸದಸ್ಯನ ಹಕ್ಕಿನ ಪ್ರಶ್ನೆಯಾಗುತ್ತದೆ ಎಂಬುದನ್ನೇ ನಾವು ಪ್ರತಿಪಾದನೆ ಮಾಡಿಕೊಂಡು ಬಂದಿರುವುದು. ಅಧ್ಯಕ್ಷರೇ ನಮ್ಮ ಪ್ರಜಾತಂತ್ರ ವ್ಯವಸ್ಥೆಯನ್ನು ಇತಿಹಾಸದ ಮೂಲಕ ನೋಡಿದಾಗ ಒಂದು ಕಾಲದಲ್ಲಿ ಸಂಸತ್ತು ಎಕ್ಸಿಕ್ಯೂಟಿವ್ ಅಥಾರಿಟಿ ವಿರುದ್ಧ ಹೋರಾಟ ಮಾಡಿಕೊಂಡು ಬಂದಿರುವುದನ್ನೇ ನಾವು ನೋಡುತ್ತೇವೆ.

8.00 ಪಿ. ಎಂ.

ಲೆಜಿಸ್ಲೇಚರನ ಇತಿಹಾಸವನ್ನು ನೋಡಿದಾಗ, ಬ್ರಿಟೀಷ್ ಪಾರ್ಲಿಮೆಂಟ್ ಎಲ್ಲಿಯವರೆಗೆ ಹೋಯಿತು ಎಂದರೆ, ಒಬ್ಬ ದೊರೆಯ ತಲೆಯನ್ನು ತೆಗೆಯುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ ಆ ದೊರೆಯ ತಲೆಯನ್ನು ತೆಗೆದರು. Chancellor-I was beheaded by a Resolution of parliament. ಏಕೆಂದರೆ ಆ ಸಮಯದಲ್ಲಿ Monarchy was not answerable to the Parliament. ಎನ್ನತಕ್ಕ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ, ಸಂಸತ್ತು ಜನ ಪ್ರತಿನಿಧಿಗಳ ಸಂಸ್ಥೆ, ಅತಿ ಮುಖ್ಯವಾಗಿರತಕ್ಕ ಸಂಸ್ಥೆ ಎಂದು ಸಾಬೀತು ಮಾಡಿಕೊಂಡು ಬಂದಿರುವುದೇ ನಮ್ಮ ಇತಿಹಾಸ. ಆದುದರಿಂದ ಇವತ್ತು ನಮ್ಮ ಒಂದು ಹಕ್ಕಿನ ಪ್ರತಿಪಾದನೆ ಮಾಡಿದಾಗ, ಸಮಾಜದಲ್ಲಿರತಕ್ಕಂಥ ಪ್ರತಿಯೊಬ್ಬರಿಗೂ ಅದೇ ಹಕ್ಕು ಇದೆ ಎನ್ನತಕ್ಕದ್ದನ್ನು ತಿಳಿದುಕೊಂಡೇ ನಾವಿಲ್ಲಿ ಪ್ರತಿಪಾದನೆ ಮಾಡಬೇಕು. ಸಮಾಜದ ಇನ್ನೊಬ್ಬ ಸಾಮಾನ್ಯ ವ್ಯಕ್ತಿ, ಅವನು ಯಾರೇ ಆಗಿರಲಿ, ಆ ಸಾಮಾನ್ಯ ವ್ಯಕ್ತಿಗೆ ಎಷ್ಟು ಹಕ್ಕು ಇದೆ, ಅಷ್ಟೇ ಹಕ್ಕು ನಮಗೂ ಇದೆ. ಈ ಸದನದಲ್ಲಿ ಕುಳಿತುಕೊಂಡು ಆ ಸಾಮಾನ್ಯ ವ್ಯಕ್ತಿಯ ಹಕ್ಕನ್ನು ಮೊಟಕು ಮಾಡತಕ್ಕ ಮತ್ತು ತೇಜೋವಧೆ ಮಾಡತಕ್ಕ ಹಕ್ಕೂ ಸಹ ನಮಗಿಲ್ಲ. ನಮ್ಮ ಕಾನೂನು ಎಲ್ಲಾರಿಗೂ ಸಮಾನವಾಗಿ ಅನ್ವಯಿಸುತ್ತದೆ ಎಂದು ಹೇಳುವುದರ ಜೊತೆಗೆ ಹಕ್ಕನ್ನು ಪ್ರತಿಪಾದನೆ ಮಾಡತಕ್ಕದ್ದು ನಮ್ಮ ಸಮಾಜದಲ್ಲಿ, ನಮಗೆ ಒಂದು ಕರ್ತವ್ಯವು ಇದೆ ಎನ್ನುವುದನ್ನು ನಾವು ಯಾರೂ ಮರೆಯಬಾರದು. ಆದುದರಿಂದ ಈ ಸಮಾಜದಲ್ಲಿ ನಾವು ಪ್ರಶ್ನೆ ಮಾಡುವುದು ಏಕೆಂದರೆ, ನಮಗೆ ಇರತಕ್ಕಂಥ ಹಕ್ಕು ಯಾವುದಿದೆ ಅದು ಸಂಪೂರ್ಣವಾಗಿರತಕ್ಕ ಅನ್‌ಫೆಟರ್ಡ್ ರೈಟ್ ಅಲ್ಲ. ಪ್ರತಿಯೊಂದು ಹಕ್ಕಿಗೂ ಅದರ ಜೊತೆಯಲ್ಲೇ ಒಂದು ಕರೆಸ್ಪಾಡಿಂಗ್ ಡ್ಯೂಟಿ ಇದೆ, ಒಂದು ಕರ್ತವ್ಯ ಇದೆ.

ಆದುದರಿಂದ ಎಲ್ಲಿ ಕರ್ತವ್ಯವನ್ನು ನಿಭಾಯಿಸುವುದಕ್ಕೆ ಆಗುವುದಿಲ್ಲ, ಮತ್ತು ಎಲ್ಲ ಕರ್ತವ್ಯವನ್ನು ನಿಭಾಯಿಸಿ ನನ್ನ ಹಕ್ಕಿಗೆ ಚ್ಯುತಿ ತಂದಿರುತ್ತಾರೆ, ಅಲ್ಲಿ ಮಾತ್ರ ನಾವು ಈ ಪ್ರಶ್ನೆಯನ್ನು ಎತ್ತುತ್ತೇವೆ. ಇದು ಒಬ್ಬ ವ್ಯಕ್ತಿಯ ಪ್ರಶ್ನೆ ಅಲ್ಲ, ಪತ್ರಿಕೆಯಲ್ಲಿ ಬಂದಿರತಕ್ಕ ಕೆಲವು ವಿಚಾರಗಳನ್ನು ನಾವು, ಇಲ್ಲಿ ಎತ್ತಿಕೊಂಡು ಪ್ರಸ್ತಾಪ ಮಾಡುತ್ತಿರುವ ಸಂದರ್ಭದಲ್ಲಿ ಒಬ್ಬ ವ್ಯಕ್ತಿಯನ್ನು ಗಮನದಲ್ಲಿಟ್ಟುಕೊಂಡು ನಾವು ಈ ಮಾತುಗಳನ್ನು ಆಡುತ್ತಿಲ್ಲ ಒಂದು ಪತ್ರಿಕೆಯನ್ನು ನಾವು ಗಮನದಲ್ಲಿಟ್ಟುಕೊಂಡು ಮಾತನಾಡುತ್ತಿಲ್ಲ. ನೀತಿಯ ಪ್ರಶ್ನೆ ಬಂದಾಗ, ಸಮಾಜದಲ್ಲಿ ಇರತಕ್ಕಂಥ ಈ ಕಾನೂನಿನ ವ್ಯವಸ್ಥೆಯಲ್ಲಿ ನಾವು ಯಾವ ರೀತಿ ನಮ್ಮನ್ನು ಕ್ರೋಢಿಕರಿಸಿಕೊಳ್ಳಬೇಕು ಎನ್ನುವ ಪ್ರಶ್ನೆ ಬಂದಾಗ ಆ ಒಂದು ಬರವಣಿಗೆ, ಆ ಲೇಖನ ಈ ಸದನದಲ್ಲಿ ಇರತಕ್ಕಂಥ ಸದಸ್ಯರು, ಅವರ ಕೆಲಸವನ್ನು ಮಾಡುತ್ತಿರುವ ಸಂದರ್ಭದಲ್ಲಿ ಅಡ್ಡಿಯನ್ನು ಮಾಡಿ, ನಾನು ಇಲ್ಲಿ ಮುಂದುವರಿಯಲಿಕ್ಕೆ ಅಸಾಧ್ಯ ಎನ್ನತಕ್ಕ ಪರಿಸ್ಥಿತಿಯನ್ನು ಈ ಲೇಖನದಲ್ಲಿ, ಈ ಲೇಖನದ ಮುಖಾಂತರ ಉಂಟಾಗಿದೆ. ನಾನು ಇಲ್ಲಿ ಕೆಲಸವನ್ನು ಮಾಡಬೇಕೇ ಬೇಡವೇ ಎನ್ನತಕ್ಕಂಥ ಪರಿಸ್ಥಿತಿಯನ್ನು ಈ ಲೇಖನ ಜನರ ಮುಂದೆ ಎತ್ತಿ ತೋರಿಸಿದೆ. ಜನರ ಮುಂದೆ ಈ ವ್ಯಕ್ತಿ, ಸ್ವಲ್ಪಮಟ್ಟಿಗೆ ಅಗೌರವಕ್ಕೆ ಪಾತ್ರನಾಗತಕ್ಕಂಥ ವ್ಯಕ್ತಿ ಎಂದು ಒಂದು ವ್ಯಾಖ್ಯಾನವನ್ನು ಮಾಡಿದರೆ, ಈ ಸದನದಲ್ಲಿ ಕೆಲಸ ಮಾಡಲು ಇರುವ ನಮ್ಮ ಹಕ್ಕಿಗೆ, ಅದು ಚ್ಯುತಿಯನ್ನು ತಂದ ಹಾಗೆ ಆಗುತ್ತದೆ ಎನ್ನುವ ಮಾತನ್ನು ಮಾತ್ರ ನಾನು ಇಲ್ಲಿ ಚರ್ಚೆ ಮಾಡುತ್ತಿದ್ದೇನೆ. ಆದುದರಿಂದ ಮಾನ್ಯ ಅಧ್ಯಕ್ಷರೇ, ನಾವಿಲ್ಲಿ ಹೆಚ್ಚಿಗೆ ವ್ಯಾಖ್ಯಾನವನ್ನು ಮಾಡಿಕೊಂಡು ಹೋದರೆ, ಬಹಳಷ್ಟು ವ್ಯಾಖ್ಯಾನಗಳನ್ನು ನಾವು ಇಲ್ಲಿ ಮಾಡಿಕೊಂಡು ಹೋಗಬಹುದು. ಆದರೆ ತಂದಿರತಕ್ಕಂಥ ವಿಚಾರಗಳು, ಬರೆದಿರತಕ್ಕಂಥ ಲೇಖನಗಳು, ಇವನ್ನು ನೋಡಿದಾಗ, ಅದರಲ್ಲೂ ಮಹಿಳೆಯರು ಎನ್ನತಕ್ಕಂಥ ಪ್ರಶ್ನೆ ಬಂದಾಗ, ಇಲ್ಲಿ ಅವರು ಸದಸ್ಯರು, ಇದು ಮಹಿಳೆಯರು ಮತ್ತು ಮಹನೀಯರು ಎನ್ನತಕ್ಕ ಪ್ರಶ್ನೆ ಅಲ್ಲ. ಒಟ್ಟಿನಲ್ಲಿ ಸದನದ ಸದಸ್ಯರು, ಯಾರೇ ಆಗಲಿ ಈ ಸದನದ ಸದಸ್ಯರು, ಅವರ ಹಕ್ಕಿನ ಪ್ರಶ್ನೆ ಬಂದಾಗ ಈ ರೀತಿಯ ಬರವಣಿಗೆಗಳು, ಯಾವುದೇ ಪತ್ರಿಕೆಯಲ್ಲಿ ಬಂದರೂ ಕೂಡ ನಾವು ಇದನ್ನು ಗಂಭೀರವಾಗಿ ಪರಿಗಣಿಸಬೇಕಾದ ಪರಿಸ್ಥಿತಿ ನಿರ್ಮಾಣ ಆಗಿದೆ. ನಿಜ ಹತ್ತಾರು ಪತ್ರಿಕೆಗಳಲ್ಲಿ, ಹತ್ತಾರು ಸಂದರ್ಭಗಳಲ್ಲಿ, ಹತ್ತಾರು ವರ್ಷಗಳಿಂದ ಬಂದಿದೆ. ಎಲ್ಲೋ ಒಂದು ಕಾಲದಲ್ಲಿ ನಾವು ಇದನ್ನು ಚಿಂತನೆ ಮಾಡಬೇಕಾದುದು ಬಹಳ ಅವಶ್ಯಕ. ಆದುದರಿಂದ ಸದನ ಒಟ್ಟಾರೆ ಸೇರಿ ಹಾಗೆ ಬಂದಿರತಕ್ಕಂಥ ಲೇಖನ, ಆ ಲೇಖನದ ಹಿನ್ನೆಲೆಯಲ್ಲಿರತಕ್ಕ ಉದ್ದೇಶ, ಆ ಲೇಖನ ಸದನದ ಮೇಲೆ ಸದಸ್ಯರ ಮೇಲೆ ಮಾಡುತ್ತಿರುವ ಪರಿಣಾಮ, ಅದರ ಜೊತೆಯಲ್ಲಿ ನಮ್ಮ ಕಾನೂನಿನ ವ್ಯವಸ್ಥೆಯಲ್ಲಿ, ಕಾನೂನು ಬಾಹಿರವಾಗಿ ನಡೆಯುತ್ತಿರುವ ಈ ಚಟುವಟಿಕೆ, ಇದನ್ನು ನಿಯಂತ್ರಣ ಮಾಡತಕ್ಕಂಥ ಅಧಿಕಾರ ಇವತ್ತು ಈ ಸಭೆಗೆ ಇದೆ. ನಾವು ಅನಿರ್ಬಂಧಿತವಾದ ಒಂದು ಅಧಿಕಾರವನ್ನು ಕೇಳುವುದಿಲ್ಲ. ಕಾರಣ ಈ ಸದನದ ಮುಖಾಂತರ ನಾವು ಕಾನೂನನ್ನು ರಚನೆ ಮಾಡುತ್ತೇವೆ. ಈ ರಾಜ್ಯಕ್ಕೆ ಬೇಕಾಗಿರತಕ್ಕ ಕಾನೂನನ್ನು ರಚನೆ ಮಾಡತಕ್ಕ ಸಂಪೂರ್ಣ ಸರ್ವೋಚ್ಚ ಅಧಿಕಾರ ಈ ಸದನಕ್ಕೆ ಇದೆ. ಕಾರಣ ನಾವು ಜನರ ಪ್ರತಿನಿಧಿಗಳಾಗಿ ಮತ್ತು ಜನರ ಪರವಾಗಿ ಶಾಸನಗಳನ್ನು ರಚನೆ ಮಾಡುತ್ತಿದ್ದೇವೆ. ಈ ಸಂದರ್ಭದಲ್ಲಿ ಜನರ ಹಕ್ಕುಬಾಧ್ಯತೆಗಳನ್ನು ರಕ್ಷಣೆ ಮಾಡತಕ್ಕ ಸದನವೂ ಇದಾಗುತ್ತದೆ. ನಮ್ಮ ಸಮಾಜದಲ್ಲಿರತಕ್ಕ ಎಲ್ಲಾ ವರ್ಗಗಳ ರಕ್ಷಣೆ

ಮಾಡತಕ್ಕ ಸದನವೂ ಆಗಿದೆ. ನಾವು ಎಲ್ಲಿ ಹಕ್ಕು ಚ್ಯುತಿಯನ್ನು ಮಾಡುತ್ತೇವೆ. ಆ ಹಕ್ಕುಚ್ಯುತಿಗೆ ನಾವೂ ಕೂಡ ಜವಾಬ್ದಾರರಾಗುತ್ತೇವೆ. ಎನ್ನುವ ಅರಿವಿಕೆ ನಮ್ಮಲ್ಲಿ ಕೂಡ ಇರಬೇಕಾದಂಥ ಸಾಮಾನ್ಯವಾಗಿರತಕ್ಕ ಪರಿಸ್ಥಿತಿಯನ್ನು ನಾವು ನಿರ್ಮಾಣ ಮಾಡಿಕೊಂಡಿದ್ದೇವೆ. ಆದುದರಿಂದ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗದ ಒಂದು ಭಾಗವಾದರೆ, ಇನ್ನೊಂದು ಪತ್ರಿಕಾರಂಗ ಇದು ನಿಜ. ನಾವು ಇದೇ ಸದನದಲ್ಲಿ "ಏಶಿಯನ್ ಏಜ್" ಪತ್ರಿಕೆಯ ಮೇಲೆ ಹಲ್ಲೆ ಮಾಡಿದಾಗ ನಾವು ಎಲ್ಲಾ ಪಕ್ಷ ಭೇದವನ್ನು ಮರೆತು ನಾವು ಈ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಅಲ್ಲಿ ನಡೆದಿರತಕ್ಕಂಥ ದುಷ್ಕರ್ಮ್ಯವನ್ನು ನಾವು ಖಂಡಿಸಿದ್ದೇವೆ. ಯಾರು ದುಷ್ಕರ್ಮಿಗಳು ಈ ಕೆಲಸವನ್ನು ಮಾಡುತ್ತಿದ್ದಾರೆ, ಪತ್ರಿಕಾ ಸ್ವಾತಂತ್ರ್ಯದ ಹರಣವನ್ನು ಮಾಡಿದ್ದಾರೆ, ಪತ್ರಿಕಾ ಸ್ವಾತಂತ್ರ್ಯವನ್ನು ಕಡಿದು ಹಾಕಲಿಕ್ಕೆ ಕೆಲವು ಪ್ರತಿಗಾಮಿ ಶಕ್ತಿಗಳು, ನಮ್ಮ ರಾಷ್ಟ್ರದಲ್ಲಿರತಕ್ಕಂಥ ವಿರೋಧಿ ಶಕ್ತಿಗಳು, ಸಮಾಜಘಾತುಕ ಶಕ್ತಿಗಳು, ಯಾರೇ ಇದ್ದರೂ ಅವರನ್ನು ನಿಗ್ರಹಿಸಬೇಕು ಎನ್ನುವ ಮಾತನ್ನು ಸರ್ಕಾರದ ವತಿಯಿಂದ ವಿರೋಧ ಪಕ್ಷದ ವತಿಯಿಂದ ಇದನ್ನು ನಾವು ಖಂಡಾತುಂಡವಾಗಿ ಖಂಡಿಸಿದ್ದೇವೆ. ಒಬ್ಬ ಸತ್ಯನಾರಾಯಣನ ಕೊಲೆ ಪ್ರಕರಣ ಆಗಿರತಕ್ಕ ಸಂಬಂಧದಲ್ಲಿ ಈ ಸದನದಲ್ಲಿ ಕೆಳಗಿನ ಮನೆಯಲ್ಲಿ ಮೇಲ್ಮನೆಯಲ್ಲೂ ಸಹ ಚರ್ಚೆಯನ್ನು ಮಾಡಿದ್ದೇವೆ. ಕಾರಣ ಏಕೆಂದರೆ ಪತ್ರಿಕಾ ಸ್ವಾತಂತ್ರ್ಯ ಎಂಬುದು ಈ ರಾಷ್ಟ್ರದಲ್ಲಿ ಉಳಿಯಲೇಬೇಕಾಗುತ್ತದೆ. ನಾವು ಕೊಡಬೇಕಾದಂಥ ಗೌರವ, ಆ ಸ್ವಾತಂತ್ರ್ಯ ಉಳಿಸತಕ್ಕ ಅಧಿಕಾರ ಇದು ಸಂಸತ್ತಿನ ಸರ್ವೋಚ್ಚ ಅಧಿಕಾರ. ಜವಾಹರಲಾಲ್‌ರವರು ಒಂದು ಕಡೆ ಸರ್ಕಾರ ಬೇಕೇ ನಿಮಗೆ ಪತ್ರಿಕಾ ಸ್ವಾತಂತ್ರ್ಯ ಬೇಕೇ ಎಂದು ಕೇಳಿದಾಗ I prefer the freedom of the Press than the Government ಎಂದು ಹೇಳ ತಕ್ಕಂಥದ್ದನ್ನು ನಾನು ಈ ಸದನದಲ್ಲಿ ನೆನಸಿಕೊಳ್ಳುತ್ತೇನೆ. ಆದರೆ ಪತ್ರಿಕಾ ಸ್ವಾತಂತ್ರ್ಯ ಇದೆ ಎಂದ ಮಾತ್ರಕ್ಕೆ ಏನನ್ನು ಬೇಕಾದರೂ ಬರೆಯಬಹುದು, ಎಲ್ಲರ ತೇಜೋವಧೆಯನ್ನು ಮಾಡಬಹುದು ಎಂದು ಹೇಳುವುದು ಬಂದಾಗ, ಅಲ್ಲಿ ಮಾತ್ರ ಇದಕ್ಕೆ ಕಾನೂನಿನ ಕಡಿವಾಣ. ಸಂಸತ್ತು ಅಥವಾ ಈ ಒಂದು ಸದನ, ಯಾವುದೇ ಒಂದು ಕ್ರಮವನ್ನು ಕೈಗೊಳ್ಳಬೇಕಾದ ಪರಿಸ್ಥಿತಿ ಬಂದಾಗ ನಾವು ವಿಶ್ಲೇಷಣೆ ಮಾಡತಕ್ಕಂಥದ್ದು, ನಾವು ನಿಮಗೆ ಕೊಟ್ಟಿರತಕ್ಕ ಕಾನೂನು ಮತ್ತು ಹಕ್ಕನ್ನು ನೀವು ದುರುಪಯೋಗ ಪಡಿಸಿಕೊಂಡಿದ್ದೀರಿ ಎನ್ನುವುದನ್ನು ಬಿಟ್ಟು ಬೇರೆ ಯಾವುದನ್ನು ನಾವು ಚರ್ಚೆ ಮಾಡುತ್ತಿಲ್ಲ. ಇದು ಒಂದು ವ್ಯಕ್ತಿಯ ಪ್ರಶ್ನೆ ಅಲ್ಲ, ಒಂದು ಪತ್ರಿಕೆಯ ಪ್ರಶ್ನೆ ಅಲ್ಲ. ಆದರೆ ಆ ಪತ್ರಿಕೆಯಲ್ಲಿ ಆ ವ್ಯಕ್ತಿಂಥ ಬರೆದಿರತಕ್ಕಂಥ ಬರವಣಿಗೆ ಸದನದ ಮೇಲೆ, ಸದಸ್ಯರ ಮೇಲೆ, ಸಮಾಜದ ಮೇಲೆ ಆಗುತ್ತಾ ಇರತಕ್ಕ ಪರಿಣಾಮ, ಪ್ರಜಾಪ್ರಭುತ್ವದ ಒಂದು ಮೂಲಕ್ಕೆ ಅದು ಕೊಡಲಿ ಪೆಟ್ಟು ಆಗತಕ್ಕಂಥ ಸಂದರ್ಭ ಬಂದಾಗ ಅದರ ರಕ್ಷಣೆ ಮಾಡತಕ್ಕಂಥ ಜವಾಬ್ದಾರಿ ಈ ಸದನಕ್ಕೆ ಇದೆ. ಆ ಕೆಲಸವನ್ನು ಇವತ್ತು ನಾವು ಮಾಡುತ್ತಿದ್ದೇವೆ, ಆದುದರಿಂದ ಬರೆದಿರತಕ್ಕ ಹೇಳಿಕೆ, ಮೇಲ್ನೋಟಕ್ಕೆ ಮಾತ್ರ ಅಲ್ಲ, ಸಂಪೂರ್ಣವಾಗಿ ಅದನ್ನು ತಿಳುವಳಿಕೆ ಮೂಲಕ ಅದರ ಒಳಹೊಕ್ಕು ನೋಡಿದಾಗ, ಅದರಲ್ಲಿ ಬರೆದಿರತಕ್ಕ ಪ್ರತಿಯೊಂದು ಬರಹವು ಕೂಡ ನಮ್ಮ ಸದನದ ಸದಸ್ಯರುಗಳು ಅದರಲ್ಲೂ ಮಹಿಳಾ ಸದಸ್ಯರುಗಳ ಸಂಬಂಧಪಟ್ಟ ವಿಚಾರ. ಆ ಲೇಖನ ಮಹಿಳಾ ಸದಸ್ಯರುಗಳಿಗೆ ಸಂಬಂಧಪಟ್ಟ ಲೇಖನ, ಆಗಿರುವುದರಿಂದ ಅಲ್ಲದೆ, ಆ ಸದಸ್ಯರುಗಳು ಈ ಸದನದ ಗೌರವಾನ್ವಿತ ಸದಸ್ಯರುಗಳು ಆಗಿರುವುದರಿಂದ, ಆ ಬರವಣಿಗೆಗಳ

ಮುಖಾಂತರ ಈ ಸದಸ್ಯರು ಇನ್ನು ಮುಂದೆ ತಮ್ಮ ಕಾರ್ಯವನ್ನು ಮಾಡಬೇಕೇ ಅಥವಾ ರಾಜೀನಾಮೆಯನ್ನು ಕೊಟ್ಟು ಹೋಗಬೇಕೇ ಎನ್ನತಕ್ಕಂಥ ಪರಿಸ್ಥಿತಿ ನಿರ್ಮಾಣ ಆಗಿರುವುದರಿಂದ ಇಂಥ ಪರಿಸ್ಥಿತಿಯಿಂದ ಪ್ರಜಾತಂತ್ರ ವ್ಯವಸ್ಥೆಯಲ್ಲೂ ಕೂಡ, ಇದು ಅರಾಜಕತೆ ವ್ಯವಸ್ಥೆಗೆ ಕೂಡ ಹೋಗತಕ್ಕಂಥ ಪರಿಸ್ಥಿತಿ ಇರುವುದರಿಂದ ಅದಕ್ಕೆ ನಾವಿಲ್ಲಿ ಕಡಿವಾಣ ಹಾಕಬೇಕಾದ ಪರಿಸ್ಥಿತಿ ನಿರ್ಮಾಣ ಆಗಿದೆ. ಆದುದರಿಂದ ಇವತ್ತು ನಾವು ಸದನ ಒಟ್ಟಾರೆ ಸೇರಿ, ಸದಸ್ಯರ ಹಕ್ಕುಚ್ಯುತಿ ಜೊತೆಯಲ್ಲಿ ಸದನದ ಹಕ್ಕುಚ್ಯುತಿಯೂ ಆಗಿದೆ ಎಂದು ಹೇಳುತ್ತಾ, ನಾವು ಮೇಲ್ನೋಟಕ್ಕೆ ಸಂಪೂರ್ಣವಾಗಿ ಚರ್ಚೆ ಮಾಡಿದ ನಂತರ, ನಾವು ಈ ನಿರ್ಧಾರಕ್ಕೆ ಬಂದಿದ್ದೇವೆ. ಆದುದರಿಂದ ನಾವು ಇದನ್ನು ಒಂದು ಕಡೆ ಮಾನನಷ್ಟ ಆಗಿದೆ. ಇನ್ನೊಂದು ಕಡೆ ಹಕ್ಕುಚ್ಯುತಿ ಆಗಿದೆ ಎಂದು ಇದನ್ನು ಬೇರ್ಪಡಿಸುವುದು ಬೇಡ. ಮಾನನಷ್ಟ ಎಂದು ಹೇಳತಕ್ಕಂಥದ್ದು ವೈಯಕ್ತಿಕವಾಗಿ, ನ್ಯಾಯಾಲಯದಲ್ಲಿ ಪ್ರತಿಪಾದನೆ ಮಾಡತಕ್ಕಂಥದ್ದು, ಅದು ಬೇರೆ. ನ್ಯಾಯಾಲಯಗಳಲ್ಲಿ ಕಾನೂನಿನನಡಿಯಲ್ಲಿ ಹೋಗತಕ್ಕಂಥದ್ದಕ್ಕೆ ಯಾರಾದರೂ ಆಸೆ ಪಟ್ಟರೆ ಅದು ಬೇರೆ. ಆದರೆ ಸದನದಲ್ಲಿ ನಾವು ತೆಗೆದುಕೊಳ್ಳತಕ್ಕ ತೀರ್ಮಾನ ಮಾನನಷ್ಟ ಎಂದು ಹೇಳತಕ್ಕಂಥದ್ದು ನನ್ನ ಸದಸ್ಯರ ಹಕ್ಕಿಗೆ ತಂದಿರತಕ್ಕಂಥ ಚ್ಯುತಿ. ಮತ್ತು ಅದ ನನ್ನ ಕೆಲಸವನ್ನು ಮಾಡಲಿಕ್ಕೆ ನಿರ್ವಹಿಸಲಿಕ್ಕೆ ಆಗಿರತಕ್ಕ ಅಡೆತಡೆ. ಅದರ ಮುಖಾಂತರ ಈ ಸದನ ಈ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೆ ನಾವು ಇವತ್ತು ಇಲ್ಲಿ ಪಕ್ಷಾತೀತವಾಗಿ ಸದನ ಒಂದಾಗಿ ಕೆಲಸವನ್ನು ಮಾಡಬೇಕಾಗುತ್ತದೆ. ಈ ಕಾರಣ ಈ ಸದನದಲ್ಲಿ ಸಭಾಧ್ಯಕ್ಷರು ಕುಳಿತು ಕೆಲಸವನ್ನು ಮಾಡಬೇಕಾದರೆ, ನಾವು ಎಲ್ಲರೂ ಒಟ್ಟಾರೆ ಸೇರಿದರೆ, ಮಾನ್ಯ ಸಭಾಧ್ಯಕ್ಷರು, ಈ ಕೆಲಸವನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಈ ಸದನದ ಕೆಲಸ ಈ ಸದಸ್ಯರ ಕೆಲಸ. ಸದಸ್ಯರ ಕೆಲಸ ಸದನದ ಕೆಲಸ ಸಭಾಧ್ಯಕ್ಷರ ಮುಖಾಂತರ ಆದುದರಿಂದ ಇದನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಒಬ್ಬ ಸದಸ್ಯನ ಹಕ್ಕಿಗೆ ಚ್ಯುತಿಯಾದರೂ ಈ ಸದನದ ಹಕ್ಕಿಗೆ ಚ್ಯುತಿಯುಂಟಾಗುತ್ತದೆಂದು ಸಂಸದೀಯ ವ್ಯವಸ್ಥೆಯಲ್ಲಿ ನಾವು ನಂಬಿಕೊಂಡು ಬಂದಿದ್ದೇವೆ. ಮಾನ್ಯ ಸದಸ್ಯರಾದ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಸದನದ ಪರವಾಗಿ ತಂದಿರತಕ್ಕ ಆ ಒಂದು ನಿರ್ಣಯವೇನಿದೆ, ಅದು ಪ್ರಮೀಳಾ ನೇಸರ್ಗಿಯವರ ನಿರ್ಣಯವಲ್ಲ. ಸದನದ ಒಟ್ಟಾರೆ ಅಭಿಪ್ರಾಯವನ್ನು ಕ್ರೋಢೀಕರಿಸಿಕೊಂಡು ಸದನದ ಪರವಾಗಿ ತಂದಿರುವ ನಿರ್ಣಯವಾಗಿದ್ದು, ಈ ನಿರ್ಣಯಕ್ಕೆ ಸದನ ತನ್ನ ಸಂಪೂರ್ಣ ಬೆಂಬಲ ವ್ಯಕ್ತಪಡಿಸಲೇಬೇಕಾಗುತ್ತದೆ. ಇವೊತ್ತಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮಗಿರುವ ಹಕ್ಕು ಏನಿದೆ, ಒಬ್ಬ ವ್ಯಕ್ತಿಯನ್ನು ಈ ಸದನ ಯಾವುದೇ ಒಂದು ಶಿಕ್ಷೆಗೆ ಗುರಿಪಡಿಸುವ ಮುನ್ನ ಆತನನ್ನೂ ಕೇಳಬೇಕಾಗುತ್ತದೆ, ಈ ತರಹದ ಒಂದು ಘಟನೆ ನಡೆದಿದೆ, ಇದಕ್ಕೆ ನೀವು ನಿಮ್ಮ ಅಭಿಪ್ರಾಯ ವ್ಯಕ್ತಪಡಿಸಬೇಕೆಂದು ನಾವು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಪ್ಪಿಕೊಂಡಿರುವ ಒಂದು ಕಾನೂನಿನ ನಿಯಮವಾಗಿದೆ. ಈ ಕಾನೂನಿನ ನಿಯಮವಾಗಿದೆ. ಈ ಕಾನೂನಿನ ನಿಯಮಕ್ಕನುಗುಣವಾಗಿ, ನಾವುಗಳೆಲ್ಲರೂ ಸೇರಿ ಮಾಡಿರುವ ಈ ನಿರ್ಣಯದಲ್ಲಿ ಸದನದ ಹಕ್ಕಿಗೆ ತಾವು ಅಂದರೆ ಪತ್ರಿಕೆಯ ಪ್ರಕಾಶಕರು, ಸಂಪಾದಕರು ಮತ್ತು ಬರಹಗಾರರು ಚ್ಯುತಿಯುಂಟು ಮಾಡಿರುವುದರಿಂದ ಇದರ ಬಗ್ಗೆ ನಿಮ್ಮಿಂದ ಏನಾದರೂ ಹೇಳಿಕೆ ಇದೆಯೇ ಎನ್ನುವುದನ್ನೂ ನಾವು ಕೇಳಬೇಕಾಗುತ್ತದೆ. ಇದು ನಾವು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಪ್ಪಿಕೊಂಡು ಬಂದಿರುವ ನಿಯಮವಾಗಿದೆ. ಅದಕ್ಕನುಗುಣವಾಗಿಯೇ

ನಾವು ಈ ನಿಯಮವನ್ನು ರೂಪಿಸಿಕೊಂಡಿದ್ದೇವೆ. ಮಾನ್ಯ ಅಧ್ಯಕ್ಷರೆ, ಈಗ ತಂದಿರುವ ನಿರ್ಣಯವನ್ನು ನಾವೆಲ್ಲರೂ ಸರ್ವಾನುಮತದಿಂದ ಒಪ್ಪಿದ್ದೇವೆ, ಇಡೀ ಸದನ ಇದರ ಬಗ್ಗೆ ಸರ್ವಾನುಮತದಿಂದ ಯೋಚಿಸಿ, ಚರ್ಚಿಸಿ ತೀರ್ಮಾನಕ್ಕೆ ಬಂದಿದೆ. ಈ ತೀರ್ಮಾನ ಯಾವುದಿದೆ, ಇದನ್ನು ಅನುಷ್ಠಾನಗೊಳಿಸುವುದಕ್ಕೆ ಇರುವ ಒಂದು ಅಧಿಕಾರ................ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಹೇಳಿರುವ ವಿಷಯವನ್ನು, ಅವರ ವಿಚಾರಧಾರೆ, ಮನಸ್ಸಿನ ಚಿಂತನೆ ಮತ್ತು ವ್ಯಾಖ್ಯಾನವನ್ನು ನಾನು ಕೇಳಿದ್ದೇನೆ. ಅವರು 1967ರಿಂದಲೂ ಈ ಸದನದಲ್ಲಿ ಕೆಲಸ ಮಾಡಿರುವವರಾಗಿದ್ದು, ಈ ಸದನದಲ್ಲಿ ಪ್ರತಿಯೊಬ್ಬರ ಹಕ್ಕಿನ ವಿಷಯವಾಗಿ ಹೋರಾಟ ಮಾಡಿಕೊಂಡು ಬಂದಂಥವರು. ಸುಮಾರು ಮೂವತ್ತು ವರ್ಷಗಳ ಅವರ ರಾಜಕೀಯ ಜೀವನದಲ್ಲಿ ಸಮಾಜದ ಹಲವಾರು ಕ್ಷೇತ್ರಗಳಲ್ಲಿ ದುಡಿದು ಬಂದಿರತಕ್ಕವರಾಗಿದ್ದಾರೆ. ಆದರೆ, ಈ 'ಸದನ' ಯಾವುದಿದೆ, ಇದು ರಾಜ್ಯಕ್ಕೆ ಬಹಳ ಪ್ರಾಮುಖ್ಯವಾಗಿರುವ ಒಂದು ಅಂಗವಾಗಿದ್ದು, ಇಡೀ ರಾಜ್ಯದ ಐದೂವರೆ ಕೋಟಿ ಜನರ ಹಕ್ಕಿನ ರಕ್ಷಣೆ ಹಾಗೂ ಅವರಿಗೆ ಬೇಕಾಗಿರುವ ಕಾನೂನಿನ ರಕ್ಷಣೆ ಮಾಡಬೇಕಾಗಿರುವ ಈ ಸದನ ಬಿಟ್ಟರೆ ಬೇರೆ ಇಲ್ಲ. ಈ ಸದನದ ಮುಖಾಂತರವೇ ನಾವು ಪ್ರತಿಯೊಂದನ್ನೂ ಮಾಡಬೇಕಾಗುತ್ತದೆ. ಆದುದರಿಂದ, ಈ ಸದನ ಎಲ್ಲರ ರಕ್ಷಣೆ ಮಾಡುತ್ತಿರುವ ಸಂದರ್ಭದಲ್ಲಿ ಕಾನೂನುಬಾಹಿರವಾಗಿ ಸಮಾಜದಲ್ಲಿ ಅರಾಜಕತೆ, ಅಶಾಂತಿ ಸೃಷ್ಟಿಸಿ ಎಲ್ಲಿಯೋ ಒಂದು ಕಡೆ ದುರ್ಬಲರ, ಅಬಲೆಯರ, ಶೋಷಿತ ವರ್ಗದವರ ತೇಜೋವಧೆ ಮಾಡುತ್ತಿರುವ ಪರಿಸ್ಥಿತಿ ನಿರ್ಮಾಣವಾದಾಗ ಈ ಸದನ ಅದರ ಬಗ್ಗೆಯೂ ಆಲೋಚಿಸಬೇಕಾಗುತ್ತದೆ. ಇದರ ಜೊತೆಗೆ ಸದನದ ಸದಸ್ಯರೂ ಕೂಡ ನಿರ್ಭೀತಿಯಿಂದ ಕೆಲಸ ಮಾಡಬೇಕಾಗಿರುವ ವಾತಾವರಣವೇನಿದೆ, ಅದನ್ನು ಕೆಡಿಸುವುದಕ್ಕೆ ಮತ್ತು ಕೆಡಿಸಿ ಉಲ್ಬಣಗೊಳಿಸಿ ಕೆಲಸ ಮಾಡದಿರುವಂಥ ಅನಿವಾರ್ಯ ಪರಿಸ್ಥಿತಿ ನಿರ್ಮಾಣ ಮಾಡುವ ಯಾವುದೇ ಶಕ್ತಿ ಹೊರಗಡೆ ಇದ್ದರೆ ಅದನ್ನು ನಿಯಂತ್ರಿಸುವುದಕ್ಕೆ ಈ ಸದನಕ್ಕೆ ಅಧಿಕಾರವಿದೆಯೆಂದು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಆದುದರಿಂದ, ಇವೊತ್ತು ನಮ್ಮ ಹಕ್ಕನ್ನು ಪ್ರತಿಪಾದಿಸುವುದರ ಜೊತೆಗೆ, ಕರ್ತವ್ಯವನ್ನೂ ಪ್ರತಿಪಾದಿಸುತ್ತಿದ್ದೇವೆ. ಇದೇ ಸದನದಲ್ಲಿ ಸಮಾಜದ ಎಲ್ಲಾ ವರ್ಗಗಳಿಗಾಗಿರುವ ಅನ್ಯಾಯದ ಬಗ್ಗೆಯೂ ನಾವೆಲ್ಲರೂ ಪಕ್ಷಾತೀತವಾಗಿ ಚರ್ಚಿಸಿದ್ದೇವೆ. ಕಾರಣ, ಈ ಸದನದ ಮುಖಾಂತರ ನಾವು ಕಾನೂನನ್ನು ಜಾರಿಗೆ ಕೊಡಬೇಕಾಗುತ್ತದೆ. ಆದುದರಿಂದ, ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರ ಚಿಂತನೆ ಯಾವುದಿದೆ, ಈ ಚಿಂತನೆಯಲ್ಲಿ ಇವೊತ್ತು ಅವರು ಆಡಿರತಕ್ಕ ಮಾತಿನ ವೈಖರಿ, ಧಾಟಿ ನೋಡಿದಾಗ ಎಲ್ಲೋ ಒಂದು ಕಡೆ ಮಾನನಷ್ಟ ಮತ್ತು ಹಕ್ಕಿಗೆ ಚ್ಯುತಿಯಾಗಿದೆ ಎಂದು ಹೇಳುತ್ತಿರುವುದನ್ನು ಸ್ವಲ್ಪಮಟ್ಟಿಗೆ ಬೇರೆಯಾಗಿ ವಿಂಗಡಿಸುತ್ತಿದ್ದಾರೆ. ಆದುದರಿಂದ, ವಿಂಗಡಣೆ ಮಾಡುವ ಅವಶ್ಯಕತೆಯಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಹಕ್ಕುಚ್ಯುತಿ ಆಗುವುದಿಲ್ಲ.

SRI M.C . NANAIAH : I am sorry, if you don't want me to speak about you, I do not want to speak. ಇದು ಇಡೀ ಸದನದ ಒಂದು ಅಭಿಪ್ರಾಯವಾಗುತ್ತದೆ. ಆದುದರಿಂದ, ಸದನದ ಅಭಿಪ್ರಾಯವನ್ನು ಜಾರಿಗೆ ತರುವ ಜವಾಬ್ದಾರಿ ಮಾತ್ರ ನಿಮ್ಮದು. ಇವೊತ್ತು

ನೀವು ಸಭಾಧ್ಯಕ್ಷರಾಗಿ ಇನ್ನು ಮುಂದೆ ಕೈಗೊಳ್ಳಬೇಕಾಗಿರುವ ತೀರ್ಮಾನ, ಸದನ ನಿಮಗೆ ಕೊಟ್ಟಿರುವ ಅಧಿಕಾರ ಯಾವುದಿದೆ, ಇದನ್ನು ಅನುಷ್ಠಾನಕ್ಕೆ ತರುವ ಕೆಲಸವನ್ನು ತಾವು ಸಭಾಧ್ಯಕ್ಷರಾಗಿ ಮಾಡಬೇಕೆಂದು ಸದನದ ಪರವಾಗಿ ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇದು ಸರ್ಕಾರದ ಮತ್ತು ವಿರೋಧ ಪಕ್ಷದ ಪ್ರಶ್ನೆ ಅಲ್ಲ, ಸದನದ ಪ್ರಶ್ನೆಯನ್ನಾಗಿ ತೆಗೆದುಕೊಂಡಿದ್ದೇವೆ. ಇದು ವಿರೋಧ ಪಕ್ಷ ಮತ್ತು ಸರ್ಕಾರದ ಪ್ರಶ್ನೆ ಎಂದು ಹೇಳುತ್ತಿರುವಂಥಾದ್ದು, ಇದೊಂದು ಸರ್ಕಾರದ ಕಾರ್ಯಕ್ರಮ ಅಥವಾ ವಿರೋಧ ಪಕ್ಷಗಳ ಕಾರ್ಯಕ್ರಮ, ಅಥವಾ ವಿರೋಧ ಪಕ್ಷಗಳ ನಿಲುವಿಗೆ ಸರ್ಕಾರದ ಉತ್ತರವೆಂದಲ್ಲ. ಆದುದರಿಂದ, ಮಾನ್ಯ ಸದಸ್ಯರಾದ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಸದನದ ಪರವಾಗಿ ತಂದಿರುವ ನಿರ್ಣಯವೇನಿದೆ, ಇದು ಸದನದ ನಿರ್ಣಯವಾಗಿದೆಯೇ ವಿನಾಃ ಸರ್ಕಾರ ಅಥವಾ ವಿರೋಧ ಪಕ್ಷಗಳ ನಿರ್ಣಯವಲ್ಲವೆಂದು ಹೇಳಿ, ನಿರ್ಣಯವನ್ನು ಈ ಸಂದರ್ಭದಲ್ಲಿ ಅನುಷ್ಠಾನಕ್ಕೆ ತರುವುದಕ್ಕೆ ಮುಂದಿನ ಕ್ರಮವನ್ನು ತಾವು ಕೈಗೊಳ್ಳಬೇಕೆಂದು ಸದನದ ಪರವಾಗಿ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ಈಗ ಚರ್ಚೆ ಮುಗಿದಿದೆ. ಪ್ರಸ್ತಾಪವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವನೆ ಹೀಗಿದೆ :

"ದಿನಾಂಕ 3ನೇ ಸೆಪ್ಟೆಂಬರ್, 1997ರ ಪ್ರಕಟಣೆ, ಬೆಂಗಳೂರಿನಿಂದ ಪ್ರಕಟಿಸುವ ಲಂಕೇಶ್ ವಾರಪತ್ರಿಕೆ' ಯ ಪ್ರಕಾಶಕರು, ಸಂಪಾದಕರು ಹಾಗೂ ವರದಿಗಾರರು ಈ ಸದನದ ಕೆಳಕಂಡ ಗೌರವಾನ್ವಿತ ಮಹಿಳಾ ಸದಸ್ಯರುಗಳ ಹಕ್ಕುಚ್ಯುತಿ ಎಸಗಿದ್ದಾರೆ.

1. ಶ್ರೀಮತಿ ಪ್ರಮೀಳಾ ನೇಸರ್ಗಿ
2. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್
3. ಶ್ರೀಮತಿ ವಿಮಲಾಬಾಯಿ ದೇಶಮುಖ್
4. ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ
5. ಶ್ರೀಮತಿ ಡಿ.ಜಿ. ಹೇಮಾವತಿ
6. ಶ್ರೀಮತಿ ಎನ್.ಜ್ಯೋತಿರೆಡ್ಡಿ ಹಾಗೂ

ಈ ಸದನದ ಹಕ್ಕಿಗೂ ಸಹ ಚ್ಯುತಿ ಎಸಗಿದ್ದಾರೆಂದು ಈ ಸದನ ಭಾವಿಸುತ್ತದೆ. ದಿನಾಂಕ 6ನೇ ಸೆಪ್ಟೆಂಬರ್ 1997ರಂದು ಅಥವಾ ಅದಕ್ಕೂ ಮೊದಲು ಪತ್ರಿಕೆಯ ಪ್ರಕಾಶಕರು, ಸಂಪಾದಕರು ಹಾಗೂ ವರದಿಗಾರರು ಈ ಬಗ್ಗೆ ತಮ್ಮ ವಿವರಣೆ ನೀಡಬೇಕೆಂದು ಸಹ ನಿರ್ಣಯಿಸುತ್ತದೆ. ಅವರ ಹೇಳಿಕೆ ಪಡೆದ ನಂತರ ಈ ಸದನ ಸೂಕ್ತ ಕ್ರಮ ಕೈಗೊಳ್ಳಬಹುದು.

ಪ್ರಸ್ತಾವ ಅಂಗೀಕರಸಲ್ಪಟ್ಟಿತು

ಪ್ರಕಟಣೆ

ಅಧ್ಯಕ್ಷರು : ಈಗ ಒಂದು ಪ್ರಕಟಣೆ ಇದೆ.